ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

2015–16ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಶರಣೆಯರ ವಚನಗಳಲ್ಲಿ ವೈಚಾರಿಕತೆ

ನಿಬಂಧಕಾರರು

ಚಂದ್ರಲತಾ ಎನ್.ಎಲ್.
ನೋಂದಣಿ ಸಂಖ್ಯೆ : 150901030046
ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಗಣೇಶ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ, ಮೈಸೂರು ಜಿಲ್ಲೆ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

2015–16

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276

2015–16ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಶರಣೆಯರ ವಚನಗಳಲ್ಲಿ ವೈಚಾರಿಕತೆ

ನಿಬಂಧಕಾರರು

ಚಂದ್ರಲತಾ ಎನ್.ಎಲ್.
ನೋಂದಣಿ ಸಂಖ್ಯೆ : 150901030046
ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಗಣೇಶ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ, ಮೈಸೂರು ಜಿಲ್ಲೆ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

2015–16

ಮಾರ್ಗದರ್ಶಕರ ಪ್ರಮಾಣಪತ್ರ

೨೦೧೫-೧೬ನೆಯ ಸಾಲಿನಲ್ಲಿ ಕ್ರಮ ಸಂಖ್ಯೆ: KVTM/K 1509010300046ರ ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ಚಂದ್ರಲತಾ ಎನ್.ಎಲ್.** ಅವರು ನನ್ನ ಮಾರ್ಗದರ್ಶನದಲ್ಲಿ **"ಶರಣೆಯರ ವಚನಗಳಲ್ಲಿ ವೈಚಾರಿಕತೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಳಿಗಾಗಿ ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಡಾ. ಗಣೇಶ)
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೃಷ್ಣರಾಜನಗರ, ಮೈಸೂರು ಜಿಲ್ಲೆ

ಮೈಸೂರು
ದಿನಾಂಕ: ೨೦-೦೭-೨೦೧೬

ಅಭ್ಯರ್ಥಿಯ ಘೋಷಣಾ ಪತ್ರ

"ಶರಣೆಯರ ವಚನಗಳಲ್ಲಿ ವೈಚಾರಿಕತೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ಕ್ರಮ ಸಂಖ್ಯೆ: KVTM/K 1509010300046ರ ವಿದ್ಯಾರ್ಥಿಯಾದ ನಾನು ೨೦೧೫-೧೬ನೆಯ ಸಾಲಿನ ಪರೀಕ್ಷೆಗಾಗಿ **ಡಾ. ಗಣೇಶ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ, ಮೈಸೂರು ಜಿಲ್ಲೆ** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಚಂದ್ರಲತಾ. ಎನ್. ಎಲ್.

(ಚಂದ್ರಲತಾ ಎನ್.ಎಲ್.)
೨೦೧೫-೧೬ನೆಯ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

ಮೈಸೂರು
ದಿನಾಂಕ: ೨೦-೦೭-೨೦೧೬

ಶರಣೆಯರ ವಚನಗಳಲ್ಲಿ ವೈಚಾರಿಕತೆ

ಪರಿವಿಡಿ

*****

ಅಧ್ಯಾಯ – ೧

ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನವು ವಿಶಿಷ್ಟವಾಗಿದೆ. ಅಲ್ಲಿ ಸಂಭವಿಸಿದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಚಳವಳಿಯು ಮಹತ್ವಪೂರ್ಣ-ವಾದುದು. "ವಚನಪೂರ್ವ ಯುಗದಲ್ಲಿ ಭಾರತೀಯ ನಾರಿಯ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಸ್ತ್ರೀಪುರುಷನ ದಬ್ಬಾಳಿಕೆಗೆ ಒಳಗಾಗಿ ಎಲ್ಲಾ ರಂಗಗಳಲ್ಲೂ ಹಿಂದುಳಿದಿದ್ದಳು. ಪುರುಷನ ವಿರುದ್ಧವಾಗಿ ದನಿ ಎತ್ತಲಾರದಂತಹ ಸ್ಥಿತಿಯಲ್ಲಿ ಹೆಣ್ಣು ಬಾಳುವೆ ನಡೆಸುತ್ತಿದ್ದಳು. ಸಾಮಾಜಿಕ ಅಸಮಾನತೆ ತಾಂಡವವಾಡುತ್ತಿತ್ತು. ಅಸ್ಪೃಶ್ಯತೆ ಸಮಾಜಕ್ಕಂಟಿದ ಶಾಪವಾಗಿತ್ತು. ಸಾಮಾಜಿಕವಾಗಿ ಬೇರೂರಿದ್ದ ಮೇಲು-ಕೀಳು ನೀತಿಯಿಂದಾಗಿ ಸಾಮಾನ್ಯ ಜನರಲ್ಲಿ ಅತೃಪ್ತಿ ಅಸಮಾನತೆ ಹೆಪ್ಪುಗಟ್ಟಿದ್ದವು. ಇಂತಹ ಪರಿಸ್ಥಿತಿಯಲ್ಲಿ ಬಸವಾದಿ ಶರಣರು ತುಳಿತಕ್ಕೆ ಒಳಗಾಗಿದ್ದ ಸಮುದಾಯಕ್ಕೆ ಆಶಾಕಿರಣವಾಗಿ ಬಂದರು".[೧]

ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಯ ಗಾಳಿ ಬೀಸಿದ್ದು ಶರಣಯುಗದಲ್ಲಿ. ಮನುಷ್ಯ ಮನುಷ್ಯರ ನಡುವೆ ಕಟ್ಟಿದ ಜಾತಿಗೋಡೆಗಳನ್ನು ಕೆಡವಿ, ಪುರೋಹಿತಶಾಹಿ ವಿರುದ್ಧ ಅದು ಸೃಷ್ಟಿಸಿದ ಅಸಮಾನತೆಯ ವಿರುದ್ಧ ವಚನಕಾರರು ಸಂಘರ್ಷಕ್ಕಿಳಿದರು. ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ ತಿರುವುಗಳನ್ನು ಒದಗಿಸಿದ ಘಟ್ಟವಾಗಿದೆ. ಪ್ರಭುತ್ವ ಕೇಂದ್ರಿತ ಸನ್ನಿವೇಶದಿಂದ ಹೊರಬಂದ ಕನ್ನಡ ಸಾಹಿತ್ಯ ಜನಸಾಮಾನ್ಯರ ಬದುಕು ಬವಣೆಗಳಿಗೆ ಸ್ಪಂದಿಸುತ್ತ ಬಂದಿದ್ದು ವಚನಕಾರರ ಸಂದರ್ಭದಲ್ಲಿ.

ಸಮಾಜೋಧಾರ್ಮಿಕ ಚಳವಳಿಯ ಸಂದರ್ಭವಾದ ಹನ್ನೆರಡನೆಯ ಶತಮಾನದಲ್ಲಿ ಮುಖ್ಯವಾಗಿ ಸ್ತ್ರೀಸಂವೇದನೆಯ ನೆಲೆಗಳು ಕಾಣಿಸಿಕೊಂಡವು. ಕನ್ನಡ ಸಾಹಿತ್ಯದಲ್ಲಿ ಮೊತ್ತಮೊದಲ ಬಾರಿಗೆ ಮಹಿಳೆ ಮನಬಿಚ್ಚಿ ಮಾತನಾಡಲಾರಂಭಿಸಿದ್ದು, ತನಗನಿಸಿದುದನ್ನು ದಾಖಲು ಮಾಡಿದ್ದು ವಚನ ಯುಗದಲ್ಲಿ. ಸಮಾಜದ ಎಲ್ಲಾ ವರ್ಗದ ಮಹಿಳೆಯರೂ ಚಳವಳಿಯಲ್ಲಿ ಪಾಲ್ಗೊಂಡು ತಮ್ಮ ವಚನಗಳ ಮೂಲಕ ಸ್ವತಂತ್ರ ಚಿಂತನೆಗಳನ್ನು ಅನಾವರಣಗೊಳಿಸಿದರು. ಸ್ತ್ರೀ-ಪುರುಷ, ಪ್ರಭು-ಪ್ರಜೆ ಮುಂತಾದ ತರತಮಗಳ ನಡುವೆ ಸಮಾನತೆಯಿಂದ, ಸ್ವತಂತ್ರರಾಗಿ ಬದುಕಲು ಅವಕಾಶ ದೊರೆಯಿತು. ಇಂತಹ ಸಂದರ್ಭದಲ್ಲಿ

ವಚನಕಾರ್ತಿಯರು ಮುಕ್ತವಾಗಿ ಚಿಂತಿಸಿದರು, ನಿರ್ಭೀತವಾಗಿ ಆಲೋಚಿಸಿದರು. ಸಮಾಜದ ಶುದ್ಧೀಕರಣದಲ್ಲಿ ತಾವೂ ಪಾಲ್ಗೊಂಡರು. ಆತ್ಮಕ್ಕೆ ಗಂಡು–ಹೆಣ್ಣು ಭೇದವಿಲ್ಲ ಎಂಬ ಉದಾರ ಚಿಂತನೆಗಳು ಬಂದ ಕಾಲಘಟ್ಟದಲ್ಲಿ ಶಿವಶರಣೆಯರು ತಮ್ಮ ವಚನಗಳಲ್ಲಿ ಹೇಗೆ ತಮ್ಮದೇ ಆದ ಮುಕ್ತ ಹಾಗೂ ಸ್ವತಂತ್ರ ಚಿಂತನೆಗಳನ್ನು ಮಾಡಿದ್ದಾರೆ ಎಂಬುದನ್ನು ತಿಳಿಯುವ ಉದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ.

"ಹನ್ನೆರಡನೆಯ ಶತಮಾನ ಒಂದರ್ಥದಲ್ಲಿ 'ಬಿಡುಗಡೆಯ ಕಾಲ' ಎನ್ನಬಹುದು".[೨] ಪುರುಷನ ಜೊತೆಗೆ ಸರಿಸಮಾನವಾಗಿ ವ್ಯಕ್ತಿಸ್ವಾತಂತ್ರ್ಯ ಪಡೆದು ಧಾರ್ಮಿಕ ಮತ್ತು ವೈಚಾರಿಕ ಚರ್ಚೆಗಳಲ್ಲಿ ಸಮಾನವಾಗಿ ಭಾಗವಹಿಸುವ ಅವಕಾಶ ಮಹಿಳೆಗೂ ದೊರೆಯಿತು. ಸ್ತ್ರೀ ಶರಣಯುಗದಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಕ್ಷೇತ್ರಗಳೆರಡರಲ್ಲೂ ಅಸಾಮಾನ್ಯ ಸಾಧನೆಗೈದಳು. ವಚನಕಾರ್ತಿಯರು ಜನಪರ, ಜೀವಪರ ಧೋರಣೆಗಳಿಗೆ ದನಿಗೂಡಿಸಿದರು. ವಚನಕಾರ್ತಿಯರ ವಚನ ವಿಶೇಷತೆಗಳನ್ನು, ಅವರ ಚಿಂತನೆಗಳು, ಕಾಯಕ ನಿಷ್ಠೆ, ಭಕ್ತಿ, ಸತಿ–ಪತಿ ಭಾವ, ಸಾಮಾಜಿಕ ಕಳಕಳಿ, ಆರ್ಥಿಕ ಚಿಂತನೆ, ವೈಯಕ್ತಿಕ ವೇನೆ ಮುಂತಾದವುಗಳನ್ನು ಕೆಲವು ಪ್ರಾತಿನಿಧಿಕ ವಚನಗಳೊಂದಿಗೆ ಮಿತಿಯೊಳಗೆ ಈ ಅಧ್ಯಯನದ ಮೂಲಕ ಚರ್ಚಿಸಲು ಪ್ರಯತ್ನಿಸಿದೆ.

ಶರಣೆಯರು ಯಾರ ನಿರ್ಬಂಧಕ್ಕೂ ಒಳಗಾಗದೆ, ಯಾರ ಅಧೀನಕ್ಕೂ ಒಳಗಾಗದೆ ತಮ್ಮ ಸ್ವಾನುಭವದ ಚಿಂತನೆಗಳನ್ನು ಅಭಿವ್ಯಕ್ತಿಸಿದರು. ಯಾರನ್ನೋ ಮೆಚ್ಚಿಸಬೇಕೆಂದಾಗಲಿ, ಯಾರಿಂದಲೋ ಶಹಬಾಷ್‌ಗಿರಿ ಪಡೆಯಲೆಂದಾಗಲಿ ಶರಣೆಯರು ವಚನಗಳನ್ನು ರಚಿಸಲಿಲ್ಲ. ಅದಕ್ಕೆ ಬದಲಾಗಿ ತಮ್ಮ ಮನದ ನೋವು –ನಲಿವು, ಸುಖ–ದುಃಖ, ಅನುಭವ–ಅನುಭಾವಗಳನ್ನು ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಶರಣೆಯರು ಸ್ವವಿಮರ್ಶೆ ಮೂಲಕ ತಮ್ಮನ್ನು ತಾವೇ ತಿದ್ದಿಕೊಳ್ಳಲೆತ್ನಿಸುತ್ತಾ, ತಮ್ಮ ಗಂಡಂದಿರು ಸೇರಿದಂತೆ ಇಡೀ ಸಮಾಜವನ್ನು ಎಚ್ಚರಿಸುವ, ತಿದ್ದುವ ಕೆಲಸ ಮಾಡಿದರು, ಶರಣೆಯರು ತಾವು ಮಾಡುವ ಕಾಯಕದಲ್ಲೆ ಕೈಲಾಸ ಕಂಡವರು, ತಾವು ಮಾಡುವ ವೃತ್ತಿಯಲ್ಲೇ ಗೌರವಯುತವಾಗಿ ಬದುಕಿದವರು. ಪರಂಪರಾಗತವಾಗಿ ಬಂದ ಜಾತಿವ್ಯವಸ್ಥೆ–ಯನ್ನು ಪ್ರಶ್ನಿಸಿದವರು. ತಮ್ಮ ಸುತ್ತಮುತ್ತಲಿನ ಜನರ ಆಚಾರ–ವಿಚಾರ, ನಂಬಿಕೆ, ಶ್ರದ್ಧೆಗಳನ್ನು ಪ್ರಶ್ನಿಸಿ, ಸಮಾಜದ ವ್ಯವಸ್ಥೆಯನ್ನು ಶುದ್ಧೀಕರಿಸುವ ಮನೋಭಾವ ಹೊಂದಿದವರು. ಶರಣೆಯರ ವಚನಗಳಲ್ಲಿ ಸಾಮಾಜಿಕ ಕಳಕಳಿಯನ್ನು ಗಮನಿಸಬಹುದಾಗಿದೆ.

ಶರಣೆಯರು ಧರ್ಮದ ಸೋಗಿನಲ್ಲಿ ನಡೆಯುವ ಅನ್ಯಾಯಗಳನ್ನು ಟೀಕಿಸುತ್ತಾರೆ. ಗುರು, ಲಿಂಗ, ಜಂಗಮ, ನಿಷ್ಠೆ ಶಿವಶರಣನ ಲಕ್ಷಣ ಎಂದು ಹೇಳುತ್ತಲೇ, ಡಾಂಭಿಕ ಭಕ್ತರನ್ನು ಎಚ್ಚರಿಸುವ ಕೆಲಸ ಮಾಡುತ್ತಾರೆ. ಆಚಾರ ವ್ರತಗಳಿಗೆ ತಪ್ಪಿದವರನ್ನು ಖಂಡಿಸುತ್ತಾರೆ. ಆತ್ಮಜ್ಞಾನ ಪಡೆಯಲು ಲಿಂಗಭೇದ ಸಲ್ಲದು, ಗಂಡು ಹೆಣ್ಣು ಲೌಕಿಕ ಜಗತ್ತಿನ ರೀತಿ ಮಾತ್ರ ಎಂದು ಹೇಳುತ್ತ, ಹೆಣ್ಣು – ಗಂಡಿನ ಸಮಾನತೆಯನ್ನು ಕುರಿತು ಶರಣೆಯರು ದಿಟ್ಟವಾಗಿ ಮಾತನಾಡಿದರು. ಅನುಭವ ಮಂಟಪದಲ್ಲಿ ಗಂಡಿಗೆ ಸಮಾನವಾದ ಆಧ್ಯಾತ್ಮಿಕ ಸ್ವಾತಂತ್ರ್ಯ ಸ್ತ್ರೀಯರಿಗೂ ದೊರೆಯಿತು. ಶರಣೆಯರು ಸಾಮಾಜಿಕವಾಗಿ, ಧಾರ್ಮಿಕವಾಗಿ, ಲಿಂಗಾಧಾರಿತವಾಗಿ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಪ್ರಕಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಚನಕಾರ್ತಿಯರು ಬದುಕಿಗೆ, ಸಾಮಾಜಿಕ ಸಂದರ್ಭಗಳಿಗೆ, ಸಾಂಸ್ಕೃತಿಕ ಸ್ಥಿತಿಗತಿಗಳಿಗೆ ಹೇಗೆ ಸ್ಪಂದಿಸಿದ್ದಾರೆ – ಇವೇ ಮೊದಲಾದವುಗಳನ್ನು ಕುರಿತು ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಈ ನಿಬಂಧದಲ್ಲಿ ವಿಷಯವನ್ನು ಮುಖ್ಯವಾಗಿ ಐದು ಅಧಾಯಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಅಧ್ಯಾಯದ ವ್ಯಾಪ್ತಿಯಲ್ಲಿಯೂ ಒಂದೊಂದು ಪ್ರಮುಖ ಅಂಶವನ್ನು ತೆಗೆದುಕೊಂಡು ಅಧ್ಯಯನ ಮಾಡುವ ಉದ್ದೇಶವಿದೆ. ಅಧ್ಯಾಯಗಳು ಈ ಕೆಳಕಂಡಂತಿವೆ:

ಅಧ್ಯಾಯ – ೧ **ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ**

ಅಧ್ಯಾಯ – ೨ **ವಚನ ಚಳವಳಿಯ ಹಿನ್ನೆಲೆ ಮತ್ತು ಮಹತ್ವ**

ಅಧ್ಯಾಯ – ೩ **ವಚನ ಸಾಹಿತ್ಯ ಮತ್ತು ಮಹಿಳೆ**

ಅಧ್ಯಾಯ – ೪ **ಶರಣೆಯರ ವಚನಗಳ ರಚನಾ ಸ್ವರೂಪ ಮತ್ತು ತಾತ್ತ್ವಿಕತೆ**

ಅಧ್ಯಾಯ – ೫ **ಶರಣೆಯರ ವಚನಗಳಲ್ಲಿ ವೈಚಾರಿಕತೆ**

ಅಧ್ಯಾಯ – ೬ **ಉಪಸಂಹಾರ**

ಅನುಬಂಧಗಳು:

(೧) ಆಕರ ಮತ್ತು ಪರಾಮರ್ಶನ ಗ್ರಂಥಗಳು
(೨) ಶಿವಶರಣೆಯರ ಹೆಸರುಗಳ ಪಟ್ಟಿ
(೩) ಛಾಯಾಚಿತ್ರಗಳು

ಈ ರೀತಿಯಾಗಿ ಒಟ್ಟು ಆರು ಅಧ್ಯಾಯಗಳಲ್ಲಿ ಪ್ರಸ್ತುತ ವಿಷಯದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ನಿಬಂಧದ ಕೊನೆಯಲ್ಲಿ ಅನುಬಂಧಗಳ ಮೂಲಕ ಅಧ್ಯಯನಕ್ಕೆ ಬಳಸಿ-ಕೊಳ್ಳಲಾಗಿರುವ ಪ್ರಧಾನ ಮತ್ತು ಪೂರಕ ಆಕರಗಳ ಸೂಚಿಯನ್ನು ಒಳಗೊಂಡಿದೆ. ಜೊತೆಗೆ ಪ್ರಬಂಧ ರಚನೆಯ ಸಂದರ್ಭದಲ್ಲಿ ಪರಾಮರ್ಶಿಸಿದ ಪ್ರಮುಖ ಕೃತಿಗಳನ್ನು ಅನುಕ್ರಮದಲ್ಲಿ ಜೋಡಿಸಿದೆ.

ಅಧ್ಯಯನಗಳ ವಿವರ ಇಂತಿದೆ:

ಅಧ್ಯಾಯ – ೧ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

ಪ್ರಸ್ತುತ ನಿಬಂಧದ ಮೊದಲನೆಯ ಅಧ್ಯಾಯವು ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶವನ್ನು ಕುರಿತದ್ದಾಗಿದೆ. ಇದರಲ್ಲಿ ವಚನ ಚಳವಳಿಯ ಹಿನ್ನೆಲೆ, ಸ್ವರೂಪ ಮತ್ತು ವ್ಯಾಪ್ತಿ ಹಾಗೂ ವಚನಪೂರ್ವ ಮತ್ತು ವಚನಯುಗದಲ್ಲಿ ಇದ್ದಂತಹ ಸಾಮಾಜಿಕ ಪರಿಸರ, ಧಾರ್ಮಿಕ ಪರಿಸರವನ್ನು ಕುರಿತು ಒಂದು ಸ್ಥೂಲ ಚಿತ್ರಣವನ್ನು ನೀಡಲಾಗುತ್ತದೆ.

ಅಧ್ಯಾಯ – ೨ ವಚನ ಚಳವಳಿಯ ಹಿನ್ನೆಲೆ ಮತ್ತು ಮಹತ್ವ

ಸಮಾಜದಲ್ಲಿ ಬೇರುಬಿಟ್ಟಿದ್ದ ಮೂಢನಂಬಿಕೆ, ಅಸಮಾನತೆ, ರಾಜಪ್ರಭುತ್ವದ ವಿರುದ್ಧ, ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ, ಶೋಷಣೆ, ಲಿಂಗಭೇದ, ಮೌಢ್ಯ ಎಲ್ಲದರ ವಿರುದ್ಧ ದನಿ ಎತ್ತುವ ಸಲುವಾಗಿ ಮಹತ್ವದ ವಚನ ಚಳವಳಿ ಜರುಗಿತು. ಅದರ ಫಲವಾಗಿ ಉಂಟಾದ ಧಾರ್ಮಿಕ ಸುಧಾರಣೆ, ಸಾಮಾಜಿಕ ಸುಧಾರಣೆ ಇನ್ನೂ ಮುಂತಾದ ಹಲವು ನೆಲೆಗಳಲ್ಲಿ ಅಧ್ಯಯನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ – ೩ ವಚನ ಸಾಹಿತ್ಯ ಮತ್ತು ಮಹಿಳೆ

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ಸಮಾನತೆಯ ನೆಲೆಯಲ್ಲಿ ರಚನೆಗೊಂಡಿದೆ. ಮಹಿಳೆಯರಿಗೆ ಉನ್ನತವಾದ ಸ್ಥಾನಮಾನಗಳು, ಗೌರವಾದರಗಳು ಹಾಗೂ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದ್ದು ಈ ವಚನಯುಗದಲ್ಲಿ ಮಹಿಳೆಯರಿಗೆ ದೊರೆತ ವ್ಯಕ್ತಿಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇನ್ನೂ ಮೊದಲಾದ ವಿಷಯಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ – ೪ ಶರಣೆಯರ ವಚನಗಳ ರಚನಾ ಸ್ವರೂಪ ಮತ್ತು ತಾತ್ವಿಕತೆ

ಶರಣೆಯರ ವಚನಗಳು ಧಾರ್ಮಿಕ ವಿಚಾರಗಳಲ್ಲದೆ, ಸಾಮಾಜಿಕ ಸಂಗತಿಗಳನ್ನು ಹೆಚ್ಚಾಗಿ ಪ್ರಕಟಪಡಿಸಿವೆ. ಅವರ ವಚನಗಳಲ್ಲಿ ಪೂರ್ಣದೃಷ್ಟಿಯ ವಿಚಾರಶೀಲತೆ, ಸತ್ಯ

ನಿಷ್ಠುರತೆ, ಆಚಾರ–ವಿಚಾರಗಳು ತಾತ್ತ್ವಿಕತೆ, ಭಕ್ತಿ, ಕಾಯಕ, ಸಂಸಾರ – ಹೀಗೆ ಇನ್ನಿತರ ವಿಚಾರಗಳನ್ನು ಒಳಗೊಂಡಂತೆ ಅವುಗಳ ಸ್ಪಷ್ಟ ಚಿತ್ರಣವನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ – ೫ ಶರಣೆಯರ ವಚನಗಳಲ್ಲಿ ವೈಚಾರಿಕತೆ

ಶರಣೆಯರ ವಚನಗಳು ವೈಚಾರಿಕತೆಯಿಂದ ಕೂಡಿದ್ದು, ತಮ್ಮ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು ಎಂಬುದಕ್ಕೆ ಉತ್ತಮ ನಿದರ್ಶನಗಳಾಗಿವೆ. ಅವರ ವಚನಗಳಲ್ಲಿ ಸಾಮಾಜಿಕ ವಿಷಮತೆ, ಡಾಂಭಿಕತೆ, ಆಹಾರ ಪದ್ಧತಿ, ಗೊಡ್ಡು ಬ್ರಾಹ್ಮಣ್ಯ, ಅರ್ಥಹೀನ ವೇದಾಗಮ ಪುರಾಣಗಳು, ಲಿಂಗಾಧಾರಿತ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ – ಮುಂತಾದ ಹಲವು ವಿಚಾರಗಳು ಒಳಗೊಂಡಿವೆ. ಈ ಹಿನ್ನೆಲೆಯಲ್ಲಿ ಶರಣೆಯರ ವಚನಗಳಲ್ಲಿ ವ್ಯಕ್ತವಾಗಿರುವ ವಿಚಾರಶಕ್ತಿಯನ್ನು ಚಿಂತನಶೀಲತೆಯನ್ನು ವೈಚಾರಿಕ ನೆಲೆಯಲ್ಲಿ ಗುರ್ತಿಸಿ, ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ – ೬ ಸಮಾರೋಪ

ಹನ್ನೆರಡನೆಯ ಶತಮಾನದ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಆದ ಆಮೂಲಾಗ್ರ ಬದಲಾವಣೆ ವಚನಸಾಹಿತ್ಯದಲ್ಲಿ ಕಂಡುಬರುವ ಪ್ರಮುಖ ವಿಷಯವಾಗಿದೆ. ವಚನಪೂರ್ವ ಯುಗದಲ್ಲಿ ಮಹಿಳಾ ಸಂವೇದನೆ ಪಿಸು ಮಾತಿನಂತೆ ಹರಿದಾಡುತ್ತಿದ್ದದ್ದು, ಹನ್ನೆರಡನೆಯ ಶತಮಾನದಲ್ಲಿ ಭೋರ್ಗರೆವ ಪ್ರವಾಹವಾಗಿ ಪರಿಣಮಿಸಿತು. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ಮೊದಲ ಅಧ್ಯಾಯ ವಚನಕಾರ್ತಿಯರ ಮೂಲಕವೆ ಆರಂಭವಾಯಿತು. ವ್ಯಕ್ತಿ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇವೇ ಮೊದಲಾದ ಹಲವು ಬಗೆಯ ಸ್ವಾತಂತ್ರ್ಯಗಳನ್ನು ತಮ್ಮದಾಗಿಸಿಕೊಂಡ ಮಹಿಳೆಯರು ತಮಗನಿಸಿದ್ದನ್ನು ವಚನಗಳಲ್ಲಿ ಅಭಿವ್ಯಕ್ತಿಸಿದರು.

ವಚನಯುಗದಲ್ಲಿ ಸಾಹಿತ್ಯ ರಚನೆ ಮಾಡಿದ ಮೂವತ್ಮೂರಕ್ಕೂ ಹೆಚ್ಚು ವಚನಕಾರ್ತಿಯರ ವಚನಗಳಲ್ಲಿ ವ್ಯಕ್ತವಾಗಿರುವ ಜೀವನದ ನೋವು–ನಲಿವು, ವ್ಯಕ್ತಿತ್ವ ಅಧ್ಯಾತ್ಮ, ಅಂತರಂಗದರ್ಶನ, ಸಮಾಜದರ್ಶನ, ಧಾರ್ಮಿಕ ಅಂಶಗಳು, ಸಾಮಾಜಿಕ ಅಂಶಗಳು ಹಾಗೆಯೇ ಹಲವು ವೈಯಕ್ತಿಕ ವಿಚಾರಗಳು – ಈ ಎಲ್ಲಾ ಅಂಶಗಳನ್ನು ಅಧ್ಯಯನದ ವ್ಯಾಪ್ತಿ ಒಳಗೊಂಡಿದ್ದು ಸುದೀರ್ಘವಾಗಿ ಚರ್ಚಿಸುವ ಉದ್ದೇಶವನ್ನು ಈ

ನಿಬಂಧ ಹೊಂದಿದೆ. ಇಂದಿಗೂ ಸಮಾಜದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಮಹಿಳೆಯರಿಗೆ ವಚನಕಾರ್ತಿಯರು ಸ್ಫೂರ್ತಿ ಮತ್ತು ಆದರ್ಶವಾಗಿದ್ದಾರೆ. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಶರಣೆಯರು ತೋರಿದ ಧೈರ್ಯ, ಛಲ ಮತ್ತು ಸ್ವಾಭಿಮಾನ ಮತ್ತು ಅಂತಹ ಶರಣೆಯರ ನುಡಿಗಳು ಅನುಕರಣೀಯವಾಗಿವೆ. ಇವೆಲ್ಲ ವಿಚಾರಗಳನ್ನು ಕುರಿತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಸಮಾರೋಪ ಭಾಗದಲ್ಲಿ ಕ್ರೋಢೀಕರಿಸಿ ಮಂಡಿಸಲಾಗುತ್ತದೆ.

ಕೊನೆಟಿಪ್ಪಣಿಗಳು

೧. ಡಾ. ವೀರಣ್ಣ ರಾಜೂರ(ಸಂ.), ಶಿವಶರಣೆಯರ ವಚನ ಸಂಪುಟ –೫, ಪು. ೨೧

೨. ಡಾ. ಬಸವರಾಜ ಸಬರದ, ವಚನ ಚಳವಳಿ, ಪು. ೭೧

*****

ಅಧ್ಯಾಯ – ೨

ವಚನ ಚಳವಳಿಯ ಹಿನ್ನೆಲೆ ಮತ್ತು ಮಹತ್ವ

ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಒಂದು ವಿಶೇಷವಾದ ಸ್ಥಾನವಿದೆ. ಒಟ್ಟು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಜೈನಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯಗಳ ಕೊಡುಗೆ ಅಪಾರವಾದುದು. ಅವುಗಳಲ್ಲಿ ಇಲ್ಲಿನ ಸಾಹಿತ್ಯಕ್ಕೆ ಮೆರುಗನ್ನು, ಹೊಸ ಬೆಳಕನ್ನು ತಂದುಕೊಟ್ಟಂತಹ ವಚನ ಸಾಹಿತ್ಯ ವಿಶ್ವದ ಸಾಹಿತ್ಯ ಸಂದರ್ಭದಲ್ಲಿ ಮಹತ್ತ್ವದ ಸ್ಥಾನಮಾನವನ್ನು ಪಡೆದುಕೊಂಡಿದೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ.

"ಹನ್ನೆರಡನೆಯ ಶತಮಾನದ ಪೂರ್ವ ಸಾಮಾಜಿಕ ಪರಿಸರವು ವಿಕೃತಿಯ ಹಾದಿ ಹಿಡಿದಿದ್ದು, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಅಧೋಗತಿಗೆ ಇಳಿದಿದ್ದ ಸಂದರ್ಭ ಸೃಷ್ಟಿಯಾಗಿತ್ತು. ಮತಧರ್ಮಗಳ ಹೆಸರಿನಲ್ಲಿ, ಪೂಜೆ ಸಂಪ್ರದಾಯಗಳ ಸೋಗಿನಲ್ಲಿ ಅನೈತಿಕ ಆಚಾರ–ವಿಚಾರಗಳು ಬೀಡುಬಿಟ್ಟಿದ್ದವು. ಮಹಿಳೆಯರ ಸ್ಥಿತಿಯಂತೂ ಶೂದ್ರರ ಬದುಕಿಗಿಂತಲೂ ಹೀನಾಯವಾಗಿತ್ತು. ಅವಳಿಗೆ ಕಿಂಚಿತ್ತೂ ಪ್ರಾಧಾನ್ಯತೆಯೇ ಇರಲಿಲ್ಲ. ಪುರುಷನ ದಬ್ಬಾಳಿಕೆಗೆ ಒಳಗಾಗಿ ಮಹಿಳೆ ಎಲ್ಲಾ ರಂಗಗಳಲ್ಲಿಯೂ ಹಿಂದುಳಿದಿದ್ದಳು. ಸಮಾಜದಲ್ಲಿ ಜಾತಿಪದ್ಧತಿ ರೂಢಿಯಲ್ಲಿದ್ದು, ಜನರಲ್ಲಿ ದಾಸ್ಯ ಮನೋಭಾವ ಬೇರೂರಿತ್ತು. ವರ್ಗಭೇದ, ವರ್ಣಭೇದ, ಲಿಂಗಭೇದಗಳ ನೆಲೆಯಲ್ಲಿ ಸಾಮಾಜಿಕ ಅಸಮಾನತೆ ಎಲ್ಲೆಡೆಯೂ ತಲೆದೋರಿತ್ತು".[೧] ಹೆಣ್ಣಿಗೊಂದು ಧರ್ಮ, ಗಂಡಿಗೊಂದು ಧರ್ಮ, ಹಾರುವನಿಗೊಂದು ಧರ್ಮ, ಅಂತ್ಯಜನಿಗೊಂದು ಧರ್ಮ – ಹೀಗೆ ಸಮಾಜವು ಪುರೋಹಿತಶಾಹಿಯ ಕಪಿಮುಷ್ಟಿಯಲ್ಲಿ ಸಿಲುಕಿ ಮುಕ್ತಿ ಕಾಣದೆ ತೊಳಲಾಡುತ್ತಿತ್ತು.

ಹನ್ನೆರಡನೆಯ ಶತಮಾನದ ಸಾಮಾಜಿಕ ಪರಿಸರ ಅತ್ಯಂತ ಹೀನಾಯವಾದುದಾಗಿತ್ತು. ಕೆಳವರ್ಗದವರ ಬದುಕು ಅಸಹನೀಯವಾದುದಾಗಿದ್ದು, ವೈದಿಕರು ಕೆಳವರ್ಗದ ಜನತೆಯನ್ನು ಸುಲಿಗೆ ಮಾಡುತ್ತಿದ್ದರು. ದುಡಿಯದೆ ಕೊಬ್ಬಿದ ಜನವರ್ಗ, ದುಡಿಯುವವರನ್ನು ವಂಚಿಸುತ್ತಿದ್ದರು. ಅಕ್ಷರ ಜ್ಞಾನ ಕೇವಲ ಮೇಲುವರ್ಗದವರಿಗೆ ಮಾತ್ರ ಸೀಮಿತವಾಗಿತ್ತು. ಅದರ ಬದಲಾಗಿ ತಳವರ್ಗದಲ್ಲಿ ಮೌಢ್ಯತೆ ಎಂಬುದು ಮನೆ ಮಾಡಿತ್ತು. ಮೇಲುಜಾತಿ ಹಾಗೂ ಪ್ರಭುತ್ವ ಇವರ ನಡುವೆ ಸಿಲುಕಿದ ಕೆಳವರ್ಗದ ಜನತೆ ನಿರಂತರವಾಗಿ ಶೋಷಣೆಗೆ ಒಳಗಾಗಿತ್ತು. ಜನತೆಗೆ ತಾವು ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಬೇಕು ಎಂಬುದರ ಬಗ್ಗೆ ಅರಿವೇ ಇರಲಿಲ್ಲ.

ಇಂತಹ ಸಂದರ್ಭದಲ್ಲಿ ಅಲ್ಲಮ ಬಸವಾದಿ ಶಿವ ಶರಣರು ಸಮಾಜ ಕಲ್ಯಾಣದ ಕಾಳಜಿಯೊಂದಿಗೆ, ಮೂಢನಂಬಿಕೆ, ಕಂದಾಚಾರಗಳಿಂದ ಜಡವಾಗಿದ್ದ ಸಮಾಜವನ್ನು ಪರಿವರ್ತಿಸುವ ಸಂಕಲ್ಪದಿಂದ ಚಳವಳಿಯನ್ನು ಪ್ರಾರಂಭಿಸಿದರು.

"ಮಧ್ಯಯುಗದಲ್ಲಿ ನಡೆದ ಈ ವಚನ ಚಳವಳಿ ಇನ್ನಿತರ ಭಕ್ತಿ ಚಳವಳಿಗಿಂತ ವಿಶಿಷ್ಟವಾಗಿದೆ, ಭಿನ್ನವಾಗಿದೆ. ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಚಳವಳಿಯಲ್ಲಿ ಭಾಗವಹಿಸಿದರು. ಸಮಾಜದ ಸ್ತ್ರೀ ಪುರುಷರನ್ನು ಈ ಚಳವಳಿ ಆಕರ್ಷಿಸಿತ್ತು. ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ನೆಲೆಗಳನ್ನು ಪರಿಗಣಿಸದೆ ಎಲ್ಲರನ್ನು ಸಮಾನವಾಗಿ ಸಮುದಾಯದೊಳಗೆ ಸೇರಿಸಿಕೊಂಡ ಮಹತ್ತ್ವದ ಚಳವಳಿ ಇದಾಗಿದೆ".[೨]

"ಈ ಚಳವಳಿಯು ಸಂಪ್ರದಾಯವಾದಿ ಮಡಿಮೈಲಿಗೆ ನಿಯಮಗಳನ್ನು, ನಿಷಿದ್ಧಗಳನ್ನು, ಜಾತಿಪದ್ಧತಿಯನ್ನು ವೈಚಾರಿಕ ದೃಷ್ಟಿಯಿಂದ ತೀವ್ರವಾಗಿ ಖಂಡಿಸಿತು. ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಹೊಸ ಆದರ್ಶಗಳನ್ನು, ಕನಸುಗಳನ್ನು ಹುಟ್ಟುಹಾಕಿತು. ಮನುಷ್ಯ-ಮನುಷ್ಯರ ನಡುವೆ ಸಮಾನತೆ, ಸ್ವಾತಂತ್ರ್ಯ, ವೃತ್ತಿಶಿಕ್ಷಣ, ಇವೆಲ್ಲವನ್ನು ಆದರ್ಶದ ಪ್ರತೀಕವಾಗಿ ರೂಪಿಸಿತು. ಹೀಗೆ ಇನ್ನು ಮುಂತಾದ ಹಲವು ನೆಲೆಗಳಲ್ಲಿ ನಡೆದ ಕಾಯಕ ಜೀವಿಗಳ ಚಳವಳಿ ವಿಶ್ವದಲ್ಲೇ ಅಪರೂಪದ್ದಾಗಿದೆ".[೩]

ವಚನಕಾರರು ಪುರೋಹಿತಶಾಹಿ ವ್ಯವಸ್ಥೆ ವಿಧಿಸಿದ್ದ ಕುತಂತ್ರದ ದಿಗ್ಬಂಧನಗಳನ್ನು ಕಳಚಿ, ಹೊಸಗಾಳಿಗೆ ಮೈಯೊಡ್ಡಿ ನಿಂತಿದ್ದಲ್ಲದೆ, ವೈಚಾರಿಕತೆ ತುಂಬಿದ ಮಾನವೀಯ ನೆಲೆಯಲ್ಲಿ ಆತ್ಮಸ್ಥೈರ್ಯ ಹಾಗೂ ಆತ್ಮಪ್ರಯತ್ನಗಳನ್ನು ರೂಪಿಸಿಕೊಂಡರು. ಪರಸ್ಪರರನ್ನು ಅರಿತುಕೊಳ್ಳಲು ಕಲಿಸಿಕೊಟ್ಟರು. ಅತೃಪ್ತಿ, ಅಸಮಾನತೆ, ಅಸಮಾಧಾನಗಳಿಂದ ಕುದಿಯುತ್ತಿದ್ದ ಸಮಾಜದ ಕೆಳವರ್ಗದ ಜನರ ಬೆಂಬಲವು ಕೂಡ ಈ ಆಂದೋಲನಕ್ಕೆ ದೊರಕಿತು.

ಸಾಮಾಜಿಕ ಸಮತೋಲನೆಯನ್ನು ಕಾಪಾಡುವುದು, ಸಕಲ ಜೀವಿಗಳ ಉದ್ಧಾರ, ಮಹಿಳೆಯರ ಏಳಿಗೆ, ಮೌಢ್ಯ ಆಚರಣೆಗಳ ನಿವಾರಣೆ ಇವೇ ಮೊದಲಾದವುಗಳು ವಚನ ಕ್ರಾಂತಿಯ ಪ್ರಮುಖ ಉದ್ದೇಶವಾಗಿದೆ.

ಸಮಾನತೆಯ ಪ್ರಚಾರ

ವಚನಕಾರರ ಜನಪರ ಚಳವಳಿಯ ದೊಡ್ಡ ಗುಣವೆಂದರೆ ಸರಿಸಮಾನತೆ, ವಚನಕಾರರು ಚನ ಚಳವಳಿಯ ಮೂಲಕ ಸಮಾಜದಲ್ಲಿ ಬೇರೂರಿ ನಿಂತಿರುವ ಮೇಲುಕೀಳು ಎಂಬ ವರ್ಣ ಅಸಮಾನತೆ, ಬಡವ-ಬಲ್ಲಿದ ಎಂಬ ತಾರತಮ್ಯ, ಹೆಣ್ಣು-ಗಂಡು ಎಂಬ

ಲಿಂಗಬೇಧ ಇವೆಲ್ಲ ತರತಮ ವ್ಯವಸ್ಥೆಯನ್ನು ಹೋಗಲಾಡಿಸಿ, ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವನ್ನು ಕಟ್ಟಬಯಸಿದರು. ಅದರ ಫಲವಾಗಿ ರೂಪುಗೊಂಡ ಜ್ಞಾನಮಂಟಪವಾದ ಅನುಭವ ಮಂಟಪದಲ್ಲಿ ಮಹಿಳೆಯರು, ದಲಿತ ಸಮುದಾಯದವರು, ಎಲ್ಲ ವೃತ್ತಿಯವರು, ಮುಕ್ತವಾಗಿ ಬೆರೆಯಲು, ವಿಚಾರ ವಿನಿಮಯ ಮಾಡಿಕೊಳ್ಳಲು, ಸಾಧ್ಯವಾಯಿತು. ಪರಸ್ಪರ ಸಮಾನತೆ, ಪ್ರೀತಿ–ವಿಶ್ವಾಸಗಳ ತಳಹದಿಯ ಮೇಲೆ ನಿಂತ ವಚನ ಚಳವಳಿ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಅಧಿಕಾರ, ಸಮಾನ ಅವಕಾಶಗಳನ್ನು ಎಲ್ಲಾ ಕ್ಷೇತ್ರದಲ್ಲಿಯೂ ನೀಡಿತು. ಸಮಾಜದಲ್ಲಿ ಜಡ್ಡುಗಟ್ಟಿರುವ ಅಸಮಾನತೆ, ಜಾತಿಪದ್ಧತಿ, ಕ್ರೌರ್ಯ, ಮೌಢ್ಯಗಳನ್ನು ಹೊಡೆದೋಡಿಸಿ ಹೊಸ ವಾತಾವರಣ ನಿರ್ಮಿಸುವ ಪಣತೊಟ್ಟರು.

ಮಹಿಳಾ ಸಮಾನತೆಗೆ ಒತ್ತು

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ವಚನ ಚಳವಳಿಯು ಶೂದ್ರರು ಹಾಗೂ ಸ್ತ್ರೀಯರ ಪರವಾಗಿ ನಡೆಸಿದ ಚಳವಳಿಯಾಗಿತ್ತು. ತರ್ಕಬದ್ಧವಾದ ಹಾಗೂ ಮಾನವೀಯ–ವಾದ ಹೋರಾಟವಾಗಿತ್ತು. "ವಚನಕಾರರು ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ತುಳಿತಕ್ಕೆ ಒಳಗಾಗಿದ್ದ ಮಹಿಳೆಯ ಏಳಿಗೆಗಾಗಿ ಶ್ರಮಿಸಿದರು. ಪುರುಷನ ವಿರುದ್ಧವಾಗಿ ದನಿ ಎತ್ತಲಾರದಂತಹ ಸ್ಥಿತಿಯಲ್ಲಿ ಹೆಣ್ಣು ಬದುಕುತ್ತಿರುವುದನ್ನು ಕಂಡು ಸಕಲ ಜೀವಿಗಳ ಲೇಸನ್ನು ಬಯಸಿದ ವಚನಕಾರರು ಮಹಿಳೆಯರ ಸ್ಥಾನಮಾನಗಳ ಸುಧಾರಣೆಗೆ ಪಣತೊಟ್ಟರು. ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ಒದಗಿಸುವುದರ ಮೂಲಕ ಸ್ವತಂತ್ರವಾಗಿ ಬದುಕುವ ಅವಕಾಶ ಕಲ್ಪಿಸಿದರು".[೪]

ಹೆಣ್ಣು–ಗಂಡುಗಳ ನಡುವೆ ಇರುವ ಲಿಂಗಭೇದವನ್ನು ಪ್ರಬಲವಾಗಿ ಪ್ರತಿಭಟಿಸಿದರು. ಆತ್ಮ–ಮನಸ್ಸುಗಳಿಗೆ ಯಾವುದೇ ಲಿಂಗ, ಜಾತಿ, ಅಂತಸ್ತು ಇರುವುದಿಲ್ಲವೆಂದು ಸ್ಪಷ್ಟಪಡಿಸುತ್ತಾ, ಹೆಣ್ಣು , ಗಂಡಿನಷ್ಟೇ ಸಮಾನಳು ಎಂಬ ನಿಲುವನ್ನು ಪ್ರತಿಪಾದಿಸಿದರು. ವೀರಶೈವ ಧರ್ಮದ ಆದ್ಯ ವಚನಕಾರ ಜೇಡರ ದಾಸಿಮಯ್ಯನ "ಗಂಡು ಹೆಣ್ಣಿನ ನಡುವಣ ಭೇದ ಕೇವಲ ದೈಹಿಕವಾದದ್ದೇ ವಿನಾ ಆತ್ಮಕ್ಕೆ ಸಂಬಂಧಿಸಿದ್ದಲ್ಲ" ಎಂಬರ್ಥದ ಮಾತು ಲಿಂಗಭೇದದ ನಿರಾಕರಣೆಯನ್ನು ಸ್ಪಷ್ಟಪಡಿಸುತ್ತದೆ. ಇದರ ಫಲವಾಗಿ ವಚನಕ್ರಾಂತಿಯಲ್ಲಿ ಸ್ತ್ರೀಯರು ಬಹುಸಂಖ್ಯೆಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

ವಾಸ್ತವವಾಗಿ ಕರ್ನಾಟಕದಲ್ಲಿ ಸ್ತ್ರೀ ವಿಮೋಚನ ಚಳವಳಿ ಆರಂಭವಾದದ್ದೇ ವಚನಕಾರರಿಂದ. ಬಸವಾದಿ ಶರಣರ ನಾಯಕತ್ವದಲ್ಲಿ ಜರುಗಿದ ವಚನ ಚಳವಳಿಯು ಸ್ತ್ರೀ ಸ್ವಾತಂತ್ರ್ಯಕ್ಕೆ ಒತ್ತು ನೀಡಿತು. ಮಹಿಳೆಯರು ತಮಗೆ ದೊರೆತ ಸ್ವಾತಂತ್ರ್ಯವನ್ನು

ಸದುಪಯೋಗಪಡಿಸಿಕೊಂಡು, ತಮ್ಮ ಮನದ ನೋವು-ಅನಿಸಿಕೆಗಳನ್ನು ಸ್ವತಂತ್ರ ಚಿಂತನೆಗಳ ಮೂಲಕ ವಚನಗಳಲ್ಲಿ ಅಭಿವ್ಯಕ್ತಿಸಿದರು.

'ಹೆಣ್ಣು ಮಾಯೆ, ಮೋಕ್ಷಕ್ಕೆ ಅರ್ಹಳಲ್ಲ' ಎಂದು ಅವಳನ್ನು ಧಾರ್ಮಿಕ ಚೌಕಟ್ಟಿನಲ್ಲಿ ಬಂಧಿಸಿಟ್ಟಂತಹ ಸಂದರ್ಭದಲ್ಲಿ ಹೆಣ್ಣು ಕೂಡ ಗೌರವಾರ್ಹವಾದ ಆತ್ಮವೆಂದು ಭಾವಿಸಿದ್ದು ವಚನಕಾರರ ಮಹತ್ ಸಾಧನೆಗಳಲ್ಲಿ ಒಂದಾಗಿದೆ. ಹೆಣ್ಣು ಮಾಯೆ, ಶೂದ್ರಳು, ಮೈಲಿಗೆ ಎಂಬ ನಿಂದನೆಯನ್ನು ದೂರ ಮಾಡಿದರು. ಬದಲಾಗಿ ಮಹಿಳೆಯನ್ನು ನಡೆಸಿಕೊಳ್ಳಬೇಕಾದ ರೀತಿಯನ್ನು ಮನಮುಟ್ಟುವಂತೆ ಮಂಡಿಸಿದ್ದು ವಿಶೇಷವಾಗಿತ್ತು. ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳ ಮಹತ್ವವನ್ನು ನಿರಂತರ ಪ್ರತಿಪಾದಿಸಿದರು. ಅದರ ಫಲವಾಗಿ ಸ್ತ್ರೀಯರು ಎಲ್ಲಾ ರಂಗಗಳಲ್ಲೂ ಪುರುಷರಿಗೆ ಸಮನಾಗಿ ನಿಲ್ಲುವಂತಾಯಿತು. ಮೊಟ್ಟಮೊದಲು ಮಹಿಳಾ ವಿಮೋಚನೆಯ ಚಿಂತನೆ ಕಾಣಿಸುವುದು ಈ ವಚನಯುಗದಲ್ಲಿ.

ಕಾಯಕ ಪೂಜ್ಯತೆ

ಶರಣರು ಕಾಯಕದಲ್ಲಿ ಭೇದವನ್ನು ಎಣಿಸದೆ "ಕಾಯಕವೇ ಕೈಲಾಸ" ಎಂದು ಸಾರಿದರು; ವ್ಯಕ್ತಿಯು ಯಾವುದೇ ವೃತ್ತಿಯನ್ನು ಕೈಗೊಳ್ಳಲಿ, ಅದರಲ್ಲಿ ಮೇಲು-ಕೀಳು ಎಂಬ ಭೇದಭಾವ ಇರಬಾರದು. ನಾವು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ದೇವರನ್ನು ಕಾಣಬೇಕು ಎಂದು ಹೇಳುತ್ತ, ಕಾಯಕದಿಂದಲೇ ವ್ಯಕ್ತಿಯ ಉದ್ಧಾರ ಸಾಧ್ಯ ಎಂಬ ಅರಿವು ಮೂಡಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ ದುಡಿಯಬೇಕು. ಹಾಗೆ ದುಡಿದು ಗಳಿಸಿದ್ದರಲ್ಲಿ ತನಗೆಷ್ಟು ಬೇಕೋ ಅಷ್ಟನ್ನು ಬಳಸಿಕೊಂಡು, ಉಳಿದದ್ದನ್ನು ಸಮಾಜದ ಉದ್ಧಾರಕ್ಕಾಗಿ ಉಪಯೋಗಿಸಬೇಕು ಎಂಬ ತತ್ತ್ವದಲ್ಲಿ ಶರಣರ ಸಾಮಾಜಿಕ ಕಳಕಳಿ ಕಂಡುಬರುತ್ತದೆ. ವೃತ್ತಿಗೌರವ, ಸ್ವಾವಲಂಬನೆ, ಸಮಾನತೆ, ಆರ್ಥಿಕ ಭದ್ರತೆ, ಜನತೆಯ ಬದುಕಿಗೆ ನೆಮ್ಮದಿ ತಂದುಕೊಡುವ ಶಕ್ತಿ ಕಾಯಕದಲ್ಲಿ ಅಡಗಿದೆ ಎಂದು ಸಾರಿದರು. ಕಮ್ಮಾರ, ಚಮ್ಮಾರ, ಅಂಬಿಗ, ಮಡಿವಾಳ, ಹಾರುವ - ಹೀಗೆ ಯಾವುದೇ ವೃತ್ತಿಗಳಲ್ಲಿ ತಾರತಮ್ಯವಿಲ್ಲವೆಂದು ಮಂಡಿಸಿದರು.

ಇದರಿಂದಾಗಿ ಅಸ್ಪೃಶ್ಯರಿಗೆ ತಾವು ಮಾಡುವ ಕೆಲಸ ಕೀಳು, ತಮ್ಮದು ಕೀಳುಜಾತಿ ಎಂಬ ಕೀಳರಿಮೆ ದೂರವಾಯಿತು. ಹೀಗೆ ಶರಣರು ವೃತ್ತಿಯಲ್ಲಿ ಬದಲಾವಣೆ ತಂದು ಅಸ್ಪೃಶ್ಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿದರು. ಪ್ರತಿಯೊಂದು ಕಾಯಕವನ್ನು ಪ್ರತಿಯೊಬ್ಬರು ಯಾವುದೇ ತಾರತಮ್ಯವಿಲ್ಲದೆ ಮಾಡಬಹುದು ಎಂದು ಸಾರಿದರು.

ಅಸ್ಪೃಶ್ಯತೆಯ ಮೂಲೋತ್ಪಾಟನೆ

"ಅಸ್ಪೃಶ್ಯತೆ ಎಂಬುದು ಸಮಾಜಕ್ಕೆ ಅಂಟಿದ ಶಾಪವಾಗಿತ್ತು. ಅಸ್ಪೃಶ್ಯರು ಶಿಕ್ಷಣದಿಂದ ವಂಚಿತರಾಗಿದ್ದರು. ಉತ್ತಮರಿಗೆ ತಮ್ಮ ನೆರಳೂ ಕೂಡ ಸೋಕದಂತೆ ದಲಿತರು ಬದುಕ-ಬೇಕಾಗಿತ್ತು. ದಲಿತರು ನಿರಂತರವಾಗಿ ಮೇಲುವರ್ಗದವರ ಶೋಷಣೆಗೆ ಒಳಗಾಗಿದ್ದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಶರಣರು ಜಾತಿ ನಿರ್ಮೂಲನಕ್ಕೆ ಕಂಕಣಬದ್ಧರಾಗಿ ನಿಂತರು".[೫]

ಶತಶತಮಾನಗಳಿಂದಲೂ ದಲಿತರಲ್ಲಿ ಬೇರೂರಿದ್ದ ಕೀಳರಿಮೆಯನ್ನು ಕಿತ್ತೊಗೆದರು. ಸುಲಿಗೆ, ಶೋಷಣೆಗಳಿಂದ ಮುಕ್ತಗೊಳಿಸಿದರು. ವಿಪ್ರನಿಂದ ಹಿಡಿದು ಅಂತ್ಯಜನವರೆಗೂ ಲಿಂಗಧಾರಣೆ ಮಾಡುವುದರ ಮೂಲಕ ಸರ್ವರು ಸಮಾನರು ಎಂದು ಸಾರಿದರು, ಹಿಂದೂ ಧರ್ಮದಲ್ಲಿ ಶಾಪವಾಗಿದ್ದ ವರ್ಣವ್ಯವಸ್ಥೆ, ಅಸ್ಪೃಶ್ಯತೆಯನ್ನು ಹೋಗಲಾಡಿಸಿ, ಆರೋಗ್ಯವಂತ ಸಮಾಜವನ್ನು ರೂಪಿಸುವುದು ಬಸವಾದಿ ಶರಣರ ಉದ್ದೇಶವಾಗಿತ್ತು.

ಆರ್ಥಿಕ ಸಮಾನತೆ

ಮಹಿಳೆಯರ ಶೋಷಣೆಗೆ ಮುಖ್ಯವಾದ ಕಾರಣವೆಂದರೆ ಆರ್ಥಿಕ ಅಸಮಾನತೆ ಎಂಬುದನ್ನು ಅರಿತ ಶರಣರು ಮಹಿಳೆಗೆ ಕಾಯಕದ ಹಕ್ಕನ್ನು ದೊರಕಿಸಿಕೊಟ್ಟರು. ಕಾಯಕ ತತ್ತ್ವ ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆಯನ್ನು ಒದಗಿಸಿತು. ಆರ್ಥಿಕವಾಗಿ ಪುರುಷನನ್ನೇ ಅವಲಂಬಿಸಿದ್ದ ಸ್ತ್ರೀ ವೃತ್ತಿಸ್ವಾತಂತ್ರ್ಯ ಬದುಕಿನಲ್ಲಿ ಭರವಸೆಯನ್ನು, ಆತ್ಮವಿಶ್ವಾಸವನ್ನು ತಂದುಕೊಟ್ಟಿತು. ಪ್ರತಿಯೊಬ್ಬರಿಗೂ ದುಡಿಯುವ ಹಕ್ಕು ಲಭಿಸಿದರೆ ಎಲ್ಲರೂ ಸ್ವತಂತ್ರವಾಗಿ ಬದುಕಬಹುದು ಎಂದು ಹೇಳುತ್ತ, ಕಾಯಕದಿಂದ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬಹುದು ಎಂಬುದು ಶರಣರ ನಿಲುವಾಗಿತ್ತು.

ಮೌಢ್ಯಾಚರಣೆಗಳ ವಿರೋಧ

ಹನ್ನೆರಡನೆಯ ಶತಮಾನದಲ್ಲಿ ಧಾರ್ಮಿಕ ಪರಿಸರದಲ್ಲಿ ರೂಢಿಯಲ್ಲಿದ್ದ ಭಕ್ತಿಯ ಆಚರಣೆಗಳು ಭಯಾನಕವಾದವು. ಮೂಢನಂಬಿಕೆಗಳು, ಅಂಧಶ್ರದ್ಧೆಗಳು ಜನರ ಬದುಕನ್ನೆ ಛಿದ್ರಗೊಳಿಸಿದವು. ಇಂತಹ ಗೊಡ್ಡು ಸಂಪ್ರದಾಯಗಳನ್ನು ಕಂಡು ವಚನಕಾರರು ಕಟುವಾಗಿ ಟೀಕಿಸಿದರು. ಯಾವ ವೇದಶಾಸ್ತ್ರ ಪುರಾಣಗಳು ದೇಶದ ಜನತೆಯನ್ನು ದಿಕ್ಕು ತಪ್ಪಿಸಿದ್ದವೋ ಅವುಗಳನ್ನು ವಿರೋಧಿಸಿದರು. ಅವುಗಳ ಪೊಳ್ಳುತನವನ್ನು ಬಯಲಿಗೆಳೆದರು, ದೇವರ ಹೆಸರಿನಲ್ಲಿ ಶತಮಾನಗಳಿಂದ ನಡೆಯುತ್ತ ಬಂದಿದ್ದ ಶೋಷಣೆಯನ್ನು ತಪ್ಪಿಸಿದರು.

ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆಯ ವಿರುದ್ಧ ವಚನಕಾರರು ಸಿಡಿದು ನಿಂತರು. ಬದಲಾಗಿ ಅಲ್ಲಿ ಸಾತ್ವಿಕ ಭಕ್ತಿಯನ್ನು ಪ್ರತಿಪಾದಿಸಿದರು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದು ಸಾರಿದ ವಚನಕಾರರು ಕೆಳವರ್ಗದವರಲ್ಲಿ ಮನೆಮಾಡಿದ್ದ ಬಹುದೇವೋಪಾಸನೆಯ ಬುಡವನ್ನೇ ಸ್ಫೋಟಿಸಿದರು. ದೇಹಗಳನ್ನೇ ದೇವಾಲಯಗಳನ್ನಾಗಿ ಪರಿವರ್ತಿಸಿ ಪೂಜಾರಿಗಳಿಂದ ನಡೆಯುತ್ತಿದ್ದ ಶೋಷಣೆಯನ್ನು ತಪ್ಪಿಸಿದರು. ಶರಣರ ದೃಷ್ಟಿಯಲ್ಲಿ 'ದೇಹವೇ ದೇವಾಲಯ', ಎಲ್ಲೋ ಇರುವ ಭಗವಂತನಿಗಾಗಿ ದೇವಾಲಯಗಳನ್ನು ನಿರ್ಮಿಸುವುದು ಸರಿಯಲ್ಲ ಎಂಬುದು ಅವರ ನಿಲುವಾಗಿತ್ತು.

ವಚನಕಾರರು ದೇವರ ಹೆಸರಲ್ಲಿ ಪ್ರಾಣಿಬಲಿಕೊಡುವುದು ಮುಂತಾದ ಅರ್ಥವಿಲ್ಲದ ಘೋರವಾದ ಆಚರಣೆಗಳನ್ನು ಖಂಡಿಸಿದರು. ವ್ರತ, ನೇಮ, ಜ್ಯೋತಿಷ್ಯ, ಶಕುನಗಳನ್ನು ಕಟುವಾಗಿ ಟೀಕಿಸಿದರು. ಇಂತಹ ಅಂಧ ಆಚರಣೆಗಳನ್ನು ನಂಬಿಕೊಂಡು ಕತ್ತಲಲ್ಲಿ ಬದುಕುತ್ತಿದ್ದ ಜನರಲ್ಲಿ ಅರಿವು ಮೂಡಿಸಿದರು. ಇದು ವಚನಕ್ರಾಂತಿಯ ಗುಣಾತ್ಮಕ ಸಫಲತೆಯ ಗುರುತಾಗಿದೆ.

ಹೀಗೆ ಎಂಟುನೂರು ವರ್ಷಗಳ ಹಿಂದೆಯೇ ವಚನ ಚಳವಳಿ ಒಂದು ಸಾಮಾಜಿಕ ಆಂದೋಲನವಾಗಿ ಉಂಟುಮಾಡಿದ ಪರಿಣಾಮ ಅಗಾಧವಾದದ್ದು. ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟ ಮಹಿಳೆಯರು ಶರಣರ ಕ್ರಾಂತಿಯಲ್ಲಿ ಪಾಲ್ಗೊಂಡಿದ್ದು ಮಹತ್ತರ ಸಾಧನೆಗಳಲ್ಲಿ ಒಂದಾಗಿದೆ. ಹನ್ನೆರಡನೆಯ ಶತಮಾನದಲ್ಲಾದ ವಚನ ಚಳವಳಿ ಸ್ತ್ರೀ ಸ್ವಾತಂತ್ರ್ಯವನ್ನು ಬೆಂಬಲಿಸಿತು. ವಚನಯುಗದ ನಿಜವಾದ ಗೆಲುವೆಂದರೆ ಅಪಮಾನ, ಅವಹೇಳನಕ್ಕೆ ತುತ್ತಾದ ಮಹಿಳೆ ಮತ್ತು ಕೆಳವರ್ಗದವರಿಗೆ ದೊರೆತ ವಿಶೇಷ ಪ್ರಾಶಸ್ತ್ಯವಾಗಿದೆ. ಶರಣರ ಆರ್ಥಿಕ, ಸಾಮಾಜಿಕ ನೀತಿಗಳು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಮಾರ್ಗದರ್ಶಿಯಾಗಿವೆ. ವಚನ ಚಳವಳಿಯಿಂದಾಗಿ ಮಹಿಳೆಯರು ವ್ಯಕ್ತಿಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇವೆ ಮೊದಲಾದವುಗಳನ್ನು ತಮ್ಮದಾಗಿಸಿಕೊಂಡರು.

ಹೀಗೆ ನಮ್ಮ ನೆಲದಲ್ಲಿ ಘಟಿಸಿದ ವಚನ ಚಳವಳಿಯು ವಿಶ್ವದ ನಾನಾ ಕಡೆ ನಡೆದ ಅನೇಕ ಚಳವಳಿ, ಹೋರಾಟ, ಕ್ರಾಂತಿಗಳಿಗೆ ಮಾದರಿಯಾಯಿತು ಎನ್ನಬಹುದು.

ಕೊನೆಟಿಪ್ಪಣಿಗಳು

೧. ಚಂದ್ರಶೇಖರಯ್ಯ, ಬಸವಣ್ಣ, ಪು. ೩೫

೨. ಡಾ. ಸಿ.ಸೋಮಶೇಖರ, ವಚನಗಳಲ್ಲಿ ಸಾಮಾಜಿಕ ಚಿಂತನೆ, ೨೦೦೪, ಪು. ೫

೩. ಡಾ. ಸಿ.ಸೋಮಶೇಖರ, ವಚನಗಳಲ್ಲಿ ಸಾಮಾಜಿಕ ಚಿಂತನೆ, ೨೦೦೪, ಪು. ೬

೪. ಡಾ. ಬಸವರಾಜ ಸಬರದ, ವಚನ ಚಳವಳಿ, ಪು. ೩೯

೫. ಡಾ. ಶಶಿಕಲಾ ಶಿವಶಂಕರ್, ವಚನಕಾರ್ತಿಯರ ಮಹಿಳಾ ಸಂವೇದನೆ, ಪು. ೭೪

*****

ಅಧ್ಯಾಯ – ೩

ವಚನ ಸಾಹಿತ್ಯ ಮತ್ತು ಮಹಿಳೆ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಚನ ಸಾಹಿತ್ಯವು ಮಹತ್ವದ ಸೃಷ್ಟಿಯಾಗಿದೆ. ಇದು ಚಳವಳಿ ಹಾಗೂ ಸಾಹಿತ್ಯದ ಒಂದು ಪ್ರಕಾರ – ಎಂಬ ದ್ವಿವಿಧ ಅರ್ಥವನ್ನು ಪಡೆದುಕೊಂಡಿದೆ. ವೀರಶೈವ ಹಿನ್ನೆಲೆ ಕನ್ನಡಕ್ಕೆ ನೀಡಿದ ವಿಶಿಷ್ಟ ಸಾಹಿತ್ಯವೆಂದರೆ ವಚನಸಾಹಿತ್ಯವೇ ಆಗಿದ್ದು, ಇದು ವಸ್ತು ರೂಪ ಎಲ್ಲ ದೃಷ್ಟಿಯಿಂದ ಹೊಸತು ಹಾಗೂ ವಿಶಿಷ್ಟವಾದದ್ದು ಆಗಿದೆ. ವಚನ ಸಾಹಿತ್ಯ ಪ್ರಕಾರ ಕ್ರಾಂತಿಕಾರಕ ಹೊಸತನವನ್ನು ಮೈಗೂಡಿಸಿಕೊಂಡು, ಹೊಸತನಕ್ಕೆ ಅವಕಾಶ ಮಾಡಿಕೊಟ್ಟಿದೆ. ಈ ಕಾರಣದಿಂದಾಗಿಯೇ ಜಾಗತಿಕ ಸಾಹಿತ್ಯದಲ್ಲಿ ಹಾಗೂ ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ವಚನ ಸಾಹಿತ್ಯವು ಬೆಳವಣಿಗೆಯಾದ ಬಗೆಯೇ ವಿಶಿಷ್ಟವಾದುದು. ಹನ್ನೆರಡನೆಯ ಶತಮಾನದಲ್ಲಿ ಕಂಡುಬಂದ ಸಾಮಾಜಿಕ, ಧಾರ್ಮಿಕ ಭಾವನೆಗಳು ಈ ಸಾಹಿತ್ಯದ ರಚನೆಗೆ ಮೂಲ ಕಾರಣವಾದವು.

ವಚನಪೂರ್ವದಲ್ಲಿ ಹೆಣ್ಣನ್ನು ಕನಿಷ್ಠ ಸ್ಥಾನದಲ್ಲಿ ಕಾಣಲಾಗುತ್ತಿತ್ತು. ಅವಳಿಗೆ ಸ್ವಾತಂತ್ರವೆಂಬುದೇ ಇರಲಿಲ್ಲ. ಗಟ್ಟಿಯಾದ ದನಿ ಎತ್ತಲೂ ಕೂಡ ಸಾಧ್ಯವಾಗದಂಥ ಪರಿಸ್ಥಿತಿ ತಲೆದೋರಿತ್ತು. ಇಂತಹ ಸಂದರ್ಭದಲ್ಲಿ ಬಸವಾದಿ ಶರಣರ ನಾಯಕತ್ವದಲ್ಲಿ ನಡೆದ ವಚನ ಚಳವಳಿಯು ಸ್ತ್ರೀ ಸ್ವಾತಂತ್ರ್ಯಕ್ಕೆ ಒತ್ತು ನೀಡಿತು. ಹೆಣ್ಣು ಪುರುಷ ಸಮಾನಳಲ್ಲ ಎಂಬ ಭಾವನೆಯನ್ನು ಕಿತ್ತೊಗೆದು ಸಮಾಜದಲ್ಲಿ ನಿರ್ಭಯ ವಾತಾವರಣ ನಿರ್ಮಿಸಿ, ಆ ಮೂಲಕ ಹೆಣ್ಣಿಗೂ ಸಮಾನ ಅವಕಾಶಗಳನ್ನು ನೀಡಿದ್ದು, ವಚನಕಾರರ ವಿಶೇಷ. ಇಂದಿಗೂ ಕೂಡ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ "ಹೆಣ್ಣನ್ನು ಮಕ್ಕಳನ್ನು ಹೆರುವ ಯಂತ್ರದಂತೆ, ಭೋಗದ ವಸ್ತು ಎಂಬಂತೆ ಅವಳನ್ನು ಅಸ್ಪೃಶ್ಯಳನ್ನಾಗಿ ಕಾಣುವ ನಿದರ್ಶನಗಳಿವೆ, ಹಲವು ಕಟ್ಟುಪಾಡುಗಳನ್ನು, ನಿಯಮಗಳನ್ನು ಅವಳ ಮೇಲೆ ಹಾಕಿವೆ. ಅವಳ ನಿಸರ್ಗದತ್ತ ದೈಹಿಕ ನಿಯಮಗಳನ್ನು ಮುಂದಿಟ್ಟುಕೊಂಡು ಅಸ್ಪೃಶ್ಯಳನ್ನಾಗಿ ಕಾಣಲಾಯಿತು. ಹಾಗೆಯೇ ಗಂಡನನ್ನು ಕಳೆದುಕೊಂಡಾಗ ಅಮಂಗಲೆ ಅಥವಾ ಅಪಶಕುನ ಎಂಬಂತೆ ಕಾಣಲಾಯಿತು. ಹೀಗೆ ಮಹಿಳೆಗೆ ನೀಡಿರುವ ಸ್ಥಾನಮಾನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿವೆ."[೧]

ಸ್ತ್ರೀಯು ಮೋಕ್ಷಕ್ಕೆ ಯೋಗ್ಯಳಲ್ಲ ಎಂಬ ಧೋರಣೆಗಳು ಹೆಣ್ಣಿನ ಆಧ್ಯಾತ್ಮಿಕ, ಆರ್ಥಿಕ, ನೈತಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ಕಿತ್ತುಕೊಂಡವು. ಪುರುಷ ಪ್ರಧಾನ ಸಂಸ್ಕೃತಿಯ ದಬ್ಬಾಳಿಕೆಗೆ ಒಳಗಾದ ಮಹಿಳೆಗೆ ಕಿಂಚಿತ್ತೂ ಪ್ರಾಧಾನ್ಯತೆಯೆ ಇಲ್ಲವಾಯಿತು. ಮಹಿಳೆಯ

ಘನತೆ, ಗೌರವಗಳಿಗೆ ಬೆಲೆಯೇ ಇಲ್ಲದಂತಾಯಿತು. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಎಲ್ಲ ಬಗತೆಯ ಅವಕಾಶಗಳಿಂದಲೂ ವಂಚಿತಳಾಗಿದ್ದ ಕಾರಣ, ಮಹಿಳೆಯರ ಅನುಭವಗಳು ಪೀಳಿಗೆಯಿಂದ ಪೀಳಿಗೆಗೆ ದಾಖಲಾಗದೆ ಹಾಗೆಯೇ ಗತದಲ್ಲಿಯೇ ಹುದುಗಿ ಹೋಗುವ ಸಾಧ್ಯತೆ ಹೆಚ್ಚಾಗಿದ್ದಿತು. ಮಾತೃ ಪ್ರಧಾನ ಸಂಸ್ಕೃತಿ ಜಾರಿಯಲ್ಲಿದ್ದಾಗ ಹೆಣ್ಣು ಉನ್ನತವಾದ ಸ್ಥಾನವನ್ನು ಹೊಂದಿದ್ದಳು. ಆದರೆ ಪಿತೃಪ್ರಧಾನ ಸಂಸ್ಕೃತಿ ಜಾರಿಗೆ ಬಂದ ನಂತರ ಮಹಿಳೆಯ ಶೋಷಣೆ ಆರಂಭವಾದದ್ದನ್ನು ಕಾಣಬಹುದು.

ಮೇಲ್ಕಂಡ ರೀತಿಯಲ್ಲಿ ಶತಶತಮಾನಗಳ ಕಾಲದಿಂದ ಅಸ್ಪೃಶ್ಯಳಾಗಿದ್ದ ಹೆಣ್ಣನ್ನು ಮಾನವೀಯ ದೃಷ್ಟಿಯಲ್ಲಿ ವಚನಕಾರರು ಕಂಡಿದ್ದಾರೆ. ಸ್ತ್ರೀಯರಿಗೂ ಪುರುಷ ಸಮಾನ ಸ್ಥಾನಮಾನಗಳನ್ನು ನೀಡಿದ್ದಾರೆ. ಸ್ತ್ರೀ ಪುರುಷನಿಗಿಂತ ಕೀಳಲ್ಲ, ಪುರುಷನನ್ನು ಮೀರಿ ಬೆಳೆಯಬಲ್ಲ ಶಕ್ತಿ ಅವಳಲ್ಲೂ ಇದೆ ಎಂಬುದನ್ನು ವಚನಕಾರರು ತೋರಿಸಿಕೊಟ್ಟರು, ಮಹಿಳೆಯರು ತಮಗೆ ದೊರೆತ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡು ತಮ್ಮತನವನ್ನು ಮೆರೆದರು. ಅವಕಾಶ ಒದಗಿ ಬಂದರೆ ಮಹಿಳೆಯೂ ಪುರುಷನಿಗೆ ಸಮನಾಗಿ ನಿಲ್ಲಬಲ್ಲಳು ಎಂಬುದನ್ನು ಮಹಿಳೆಯರಿಗೆ ಅವಕಾಶ ನೀಡುವುದರ ಮೂಲಕ ಸಾಬೀತು ಪಡಿಸಿದರು. ವಚನ ಚಳವಳಿ ಮಹಿಳಾ ವಿಮೋಚನ ಚಳವಳಿಯಾಗಿಯೂ ಮಹತ್ತರವಾದದ್ದು ಎಂದರೆ ತಪ್ಪಾಗಲಾರದು.

ಈ ವಚನ ಚಳವಳಿಯಲ್ಲಿ ಮೇಲ್ವರ್ಗದ ವಿದ್ವಾಂಸರಿಂದ ಹಿಡಿದು, ಕೆಳವರ್ಗದ ಚಮ್ಮಾರರವರೆಗೆ ಎಲ್ಲರಿಗೂ ಅವಕಾಶ ದೊರೆಯಿತು. ವಡ್ಡರ ಸಿದ್ಧರಾಮ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಒಕ್ಕಲಿಗ ಮುದ್ದಣ್ಣ, ಆಯ್ದಕ್ಕಿ ಮಾರಯ್ಯ– ಹಾಗೆಯೇ ಅಕ್ಕಮಹಾದೇವಿ, ಮುಕ್ತಾಯಕ್ಕ, ಗೊಗ್ಗವ್ವೆ, ಅಮುಗೆ ರಾಯಮ್ಮ ಮುಂತಾದ ಶರಣ–ಶರಣೆಯರೆಲ್ಲ ಬಸವಣ್ಣನವರ ನಾಯಕತ್ವದಲ್ಲಿ ನಡೆದ ಆಂದೋಲನದಲ್ಲಿ ಭಾಗವಹಿಸಿದರು. ಮುಕ್ತವಾಗಿ, ನಿರ್ಭಯವಾಗಿ ಅಭಿವ್ಯಕ್ತಿಸಿದರು, ಸಮುದಾಯಕ್ಕೆ, ಸಮಾನತೆಗೆ ಮಹತ್ವ ನೀಡಿದ ವಚನಕಾರರು, ಮಹಿಳೆಯರಿಗೂ ಅತ್ಯುನ್ನತ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟರು. ವಚನಕಾರ್ತಿಯರು ಕೇವಲ ಮಹಿಳೆಯಲ್ಲ ಆಕೆ ಸಾಧಕಿ ಎಂಬುದನ್ನು ಮನಗಂಡಿದ್ದರ ಹಿನ್ನೆಲೆಯಲ್ಲಿ ಅವರ ಅಭಿವ್ಯಕ್ತಿಯನ್ನು ಕಾಣಬಹುದು.

ಶರಣರ ಪ್ರಭಾವ ಹಾಗೂ ಪ್ರೋತ್ಸಾಹದಿಂದಾಗಿ ಅದುವರೆಗೂ ದನಿ ಕಳೆದುಕೊಂಡಿದ್ದ ಮಹಿಳೆಯರು ಒಮ್ಮೆಲೇ ಮಾತನಾಡಲು ಆರಂಭಿಸಿದರು. ಇದು ವಿಶೇಷವಾಗಿ ಶರಣರು ಮೂಡಿಸಿದ ಸಾಮಾಜಿಕ ಎಚ್ಚರದ ಸಂಕೇತವಾಗಿದ್ದಿತು. ಮಹಿಳೆಯರು ತಮಗೆ ದೊರೆತ

ಅವಕಾಶಗಳನ್ನು ಬಳಸಿಕೊಂಡು ತಮ್ಮ ಮನದ ನೋವುಗಳನ್ನು, ಅನುಭವಗಳನ್ನು ವೇದನೆಗಳನ್ನು ವಚನ ರಚನೆಯ ಮೂಲಕ ಅಭಿವ್ಯಕ್ತಿಸಿದರು. ಬಹುತೇಕ ವಚನಕಾರ್ತಿಯರು ಸಾಮಾಜಿಕವಾಗಿ ಕೆಳವರ್ಗದಿಂದ ಬಂದವರಾಗಿದ್ದರು, ಸಾಂಸಾರಿಕ ಬಂಧನದಲ್ಲಿದ್ದುಕೊಂಡೇ ಸಾಧನೆಗೈದರು, ಸಾಹಿತ್ಯದ ಮೌಲ್ಯ ಹೆಚ್ಚಿಸಿದರು.

ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಯಾರು ಗಮನಿಸದ, ಗೌರವಿಸದ, ನೈತಿಕ ಬೆಂಬಲ ನೀಡದ ದಯನೀಯ ಸ್ಥಿತಿಯಿತ್ತು, ಪ್ರಾಪಂಚಿಕ ಪರಿಸರದಲ್ಲಿ ಆಕೆ ಕೇವಲ ಗೃಹಕೃತ್ಯಗಳಿಗೆ ಮಾತ್ರ ಸೀಮಿತವಾಗಿದ್ದಳು. ಇಂತಹ ಸಂದರ್ಭದಲ್ಲಿ ಹೆಣ್ಣಿಗೆ ಸಾಮಾಜಿಕ ಮತ್ತು ಆಧ್ಯಾತ್ಮಿಕ ಎರಡೂ ನೆಲೆಗಳಲ್ಲಿಯೂ ಸಮಾನವಾದ ಅವಕಾಶ ಕೊಟ್ಟು ಅವಳ ಸ್ವತಂತ್ರ ಚಿಂತನೆಗಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಟ್ಟದ್ದು ವಚನ ಚಳವಳಿಯ ಸಂದರ್ಭ. ಶರಣರು "ಹೆಣ್ಣು, ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ"[೨] ಎಂಬ ಉನ್ನತ ಸ್ಥಾನ ನೀಡಿ ಹೆಣ್ಣಿನಲ್ಲಿ ದೈವತ್ವವನ್ನು ಕಂಡವರು. ಹೆಣ್ಣು ಜ್ಞಾನವಂತಳಾಗಿ ಮುನ್ನಡೆದು ಆಧ್ಯಾತ್ಮ ಸಾಧನೆಗೈಯಲು ಅನುವು ಮಾಡಿಕೊಟ್ಟರು.

ಇದಕ್ಕೆ ಹಡಪದ ಲಿಂಗಮ್ಮನ ಕೆಳಕಂಡ ವಚನವೇ ಸಾಕ್ಷಿಯಾಗಿದೆ.

"ಕನಿಷ್ಠದಲ್ಲಿ ಹುಟ್ಟಿ, ಉತ್ತಮದಲ್ಲಿ ಬೆಳೆದ ಸತ್ಯ ಶರಣರ ಪಾದವಿಡಿದೆ"[೩]

ಲಿಂಗಮ್ಮನೇ ಹೇಳುವಂತೆ, ಕನಿಷ್ಠ ಕುಲದಲ್ಲಿ ಹುಟ್ಟಿದ ಆಕೆ ತಮಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಬಾಳಿ ಬೆಳಗಿದ ಶರಣೆ. ಈಕೆ ಸರಳವಾದ, ನೇರವಾದ ಅಭಿವ್ಯಕ್ತಿಯ ಮೂಲಕ ಆಚರಣೆಯ ನೇರ ನಡೆಯನ್ನು ಅನುಭಾವವನ್ನು ತನ್ನ ವಚನದಲ್ಲಿ ಸರಳವಾಗಿ ತೆರೆದು ತೋರಿಸಿದ್ದಾಳೆ, ಕೆಳಜಾತಿಯ ಹಣೆಪಟ್ಟಿಯೊಂದಿಗೆ ಜನಿಸಿದರೂ, ಬೌದ್ಧಿಕ, ಸ್ತರದಲ್ಲಿ ಆಕೆ ಸ್ತ್ರೀಗೆ ಅಸಾಧ್ಯ ಎಂಬಷ್ಟು ಎತ್ತರಕ್ಕೇರಿದ್ದಾಳೆ.

ಹನ್ನೆರಡನೆಯ ಶತಮಾನದ ಶಿವಶರಣರು ಸ್ತ್ರೀ-ಪುರುಷಭೇದರಹಿತವಾಗಿ ಚಿಂತಿಸಿದರು. ಕೇವಲ ನಾಲ್ಕು ಗೋಡೆಯ ನಡುವೆ ಮಾತ್ರ ಇದ್ದ ಮಹಿಳೆಗೆ ಪಾರಮಾರ್ಥಿಕವಾಗಿಯೂ ಸಮಾನ ಅವಕಾಶ ಕೊಟ್ಟರು. ದೈಹಿಕ ವ್ಯತ್ಯಾಸವನ್ನೇ ಮುಂದಿಟ್ಟುಕೊಂಡು ಹೆಣ್ಣು ಕೀಳು ಎಂಬ ಅತಾರ್ಕಿಕ ವ್ಯವಸ್ಥೆಗೆ ಕೊಡಲಿಪೆಟ್ಟು ಕೊಟ್ಟರು. ಶರಣರು ಅಂತರಂಗಶುದ್ಧಿ, ಆತ್ಮಶುದ್ಧಿ ಮುಖ್ಯ ಎಂದು ಸಾರಿದರು. ವಚನಕಾರನಾದ ಜೇಡರದಾಸಿಮಯ್ಯ ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ:

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣು ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥಾ"[೪]

ವಚನಕಾರರ ದೃಷ್ಟಿಯಲ್ಲಿ ಹೆಣ್ಣು ಹೇಗಿದ್ದಾಳೆಂಬುದು ಈ ವಚನದ ಮೂಲಕ ತಿಳಿಯುತ್ತದೆ. ಸ್ತ್ರೀ-ಪುರುಷನ ನಡುವೆ ಇರುವುದು ಕೇವಲ ದೈಹಿಕ ವ್ಯತ್ಯಾಸವೇ ಹೊರತು, ಇಬ್ಬರಲ್ಲಿಯೂ ಇರುವ ಆತ್ಮ ಒಂದೇ ತೆರನಾದುದು ಎಂದು ಸಾರಿದರು, ಇಲ್ಲಿ ಗಂಡು ಹೆಣ್ಣಿಗೆ ಯಾವ ಭೇದಭಾವವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಮನುಷ್ಯ ತನ್ನ ವಿಕಾಸಕ್ಕೆ ಅಡ್ಡಿಯಾಗುವುದನ್ನು 'ಮಾಯೆ' ಎಂದು ಭಾವಿಸುವುದುಂಟು. ಹಾಗೆಯೇ ಹೆಣ್ಣನ್ನು 'ಮಾಯೆ' ಎಂದು ಕರೆದಿರುವುದುಂಟು. ಆದರೆ ಅಲ್ಲಮಪ್ರಭು ಇದನ್ನು ನೇರವಾಗಿ ತಿರಸ್ಕರಿಸಿ ಈ ರೀತಿ ಹೇಳುತ್ತಾರೆ.

"ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯೆಂಬುದು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ"[೫]

ಎಂಬ ಅಲ್ಲಮನ ಮಾತು ಹೆಣ್ಣು, ಹೊನ್ನು, ಮಣ್ಣುಗಳನ್ನು ಮಾಯೆ ಎಂದು ವಾದಿಸುವವರಿಗೆ ಸರಿಯಾದ ಉತ್ತರ ನೀಡಿದಂತಿದೆ. ಕಣ್ಣಿಗೆ ಕಂಡದ್ದೆಲ್ಲಾ ತನಗೆ ಬೇಕು ಎಂಬ ಮನುಷ್ಯನಲ್ಲಿರುವ ಆಸೆಬುರುಕುತನ ಕಾರಣವೇ ಹೊರತು, ಕಾಣುವ ವಸ್ತುವೇ ಮಾಯೆ ಎಂಬ ಮಾತು ಸರಿಯಾದುದಲ್ಲ. ಈ ಆಸೆಯೇ ಇಲ್ಲವಾದಾಗ ಮಾಯೆಯೆಂಬುದು ಇಲ್ಲವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು, ಹೊನ್ನು, ಮಣ್ಣುಗಳನ್ನು ಮಾಯೆಯೆಂಬುದು ಪರಿಗಣಿಸಿ, ಇವು ಮೋಕ್ಷಕ್ಕೆ ಅಡ್ಡಿಪಡಿಸುತ್ತವೆ ಎಂದು ಬಿಂಬಿಸಲಾಗಿತ್ತು, ಆದರೆ ಶರಣರು 'ಮಾಯೆ' ಎಂಬ ಪರಿಕಲ್ಪನೆಯ ಬಗೆಗಿದ್ದ ತಪ್ಪು ನಂಬಿಕೆಯನ್ನು ಹೀಗೆ ಹೊಡೆದು ಹಾಕಿದರು.

ಬಸವಣ್ಣನವರು ತಮ್ಮ ವಚನದಲ್ಲಿ ಮಾಯೆಯನ್ನು 'ಸ್ತ್ರೀ'ಗೆ ಹೀಗೆ ಹೋಲಿಸಿದ್ದಾರೆ.

"ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ!
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ

ಇದಾದಾವ ಪರಿಯಲ್ಲಿ ಕಾಡಿಯಿತು ಮಾಯೆ
ಈ ಮಾಯೆಯ ಕಳವಡೆ ಎನ್ನಳವಲ್ಲ
ನೀವೇ ಬಲ್ಲಿರಿ ಕೂಡಲ ಸಂಗಮದೇವಾ!"[೬]

ಈ ವಚನದಲ್ಲಿ ಮಾಯೆಯೆಂಬುದು ಶಕ್ತಿಯ ಸಂಕೇತವಾಗಿ ಮೂಡಿಬಂದಿದೆ. ತಾಯಿಯಾಗಿ, ಮಡದಿಯಾಗಿ, ಮಗಳಾಗಿ ತನ್ನ ಅಸ್ತಿತ್ವಕ್ಕೆ ಕಾರಣಳಾದ ಮಹಿಳೆಯನ್ನು ಬಸವಣ್ಣನವರು ಮಾಯೆಯ ತಾಯಿಯೆಂದು, ಆ ಮೂಲಕ ಆಕೆಯನ್ನು 'ಶಕ್ತಿಮಾತೆ' ಎಂಬ ಅರ್ಥದಲ್ಲಿ ಬಳಸಿದ್ದಾರೆ. ಹೀಗೆ 'ಮಾಯೆ' ಎಂಬುದನ್ನು ಅಲ್ಲಮ ಮತ್ತು ಬಸವಣ್ಣ ಬೇರೆ ಬೇರೆ ಅರ್ಥದಲ್ಲಿ ಬಳಸಿದ್ದಾರೆ. ಅಲ್ಲಮ ವೈಚಾರಿಕ ನೆಲೆಯಲ್ಲಿ ಬಳಸಿದರೆ ಬಸವಣ್ಣ ಭಕ್ತಿಯ ನೆಲೆಯಲ್ಲಿ ಬಳಸಿರುವುದನ್ನು ಕಾಣಬಹುದು. ಇಲ್ಲಿ ಹೆಣ್ಣು ಕೇವಲ ಹೆಣ್ಣಾಗಿ ಮಾತ್ರ ಕಾಣದೆ ಅನಂತ ಸೃಷ್ಟಿಯ ಸಂಕೇತವಾಗಿ ಕಂಡಿದ್ದಾಳೆ. ಇಲ್ಲಿ ಮಾಯೆ ಎಂಬುದು ಸಾಂಪ್ರದಾಯಿಕವಾದ 'ಚಂಚಲೆ' ಎಂಬರ್ಥದಲ್ಲಿ ಬಳಕೆಯಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಹೆಣ್ಣು ಅಬಲೆಯಲ್ಲ, ಕಠೋರ ಹಾಗೂ ಕ್ರೂರ ಸ್ವಭಾವದವಳು ಅಲ್ಲ, ಹೆಣ್ಣು ರಾಕ್ಷಸಿಯಲ್ಲ ಎಂದು ಹೇಳುತ್ತ, ಹೆಣ್ಣಿನಲ್ಲಿ ದೈವತ್ವವನ್ನು ಕಂಡಿರುವುದು ಶರಣರ ವಚನಗಳಲ್ಲಿ ಕಂಡುಬರುತ್ತದೆ. ಹೆಣ್ಣು ಸಮಾಜಕ್ಕೆ ಮಾತೃ ಸ್ವರೂಪಿಣಿ ಇದ್ದಂತೆ ಎಂಬುದನ್ನು ಮನಗಂಡ ವಚನಕಾರರು ಆಕೆಯಲ್ಲಿ ದೈವತ್ವವನ್ನು ಕಂಡರು. ಹಾಗೂ ಆಕೆಗೆ ದೈವತ್ವಕ್ಕೇರಲು ಅವಕಾಶ ಮಾಡಿಕೊಟ್ಟರು. ಶರಣರು ಸ್ತ್ರೀ ಸಮಾಜವನ್ನು ಸಾಮಾಜಿಕ ನ್ಯಾಯದ ಅಡಿಯಲ್ಲಿ ಕಟ್ಟಲು ಯತ್ನಿಸಿದ ರೀತಿ ಮಾದರಿಯಾದುದು.

ವಚನಕಾರರು ಅಂದಿನ ಕಾಲದಲ್ಲಿ ಸ್ತ್ರೀ ಬಗೆಗೆ ಪುರುಷರಿಗಿದ್ದ ದೋಷಪೂರ್ಣ ದೃಷ್ಟಿಯನ್ನು ಖಂಡಿಸಿದರು. ಗಂಡಿನ ದೌರ್ಜನ್ಯ, ಕಾಮುಕತೆಗೆ ಒಳಗಾಗಿ ಜೀವಮಾನವಿಡೀ ಯಾತನೆಯಲ್ಲಿ ಕಳೆಯಬೇಕಾಗಿದ್ದ ಸ್ಥಿತಿಯನ್ನು ಗಮನಿಸಿ "ಪರಸ್ತ್ರೀ ಪಾರ್ವತಿ ಸಮಾನ" ಎಂಬಂತೆ ಉದಾತ್ತವಾಗಿ ಚಿಂತಿಸಿದರು. ಇದಕ್ಕೆ ಬಸವಣ್ಣನವರ ಈ ವಚನ ಉದಾಹರಣೆಯಾಗಿದೆ:

"ಛಲಬೇಕು ಶರಣಂಗೆ ಪರಧನವನೊಲ್ಲನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ"[೭]

ಉತ್ತಮವಾದ ನಡವಳಿಕೆಗೆ ಶರಣ ಸಂಸ್ಕೃತಿಯಲ್ಲಿ ಮೊದಲ ಪ್ರಾಶಸ್ತ್ಯ, ಶರಣರು ಪರಸತಿಯನ್ನು ಗೌರವಯುತವಾಗಿ ಕಂಡವರು. 'ಪರಸ್ತ್ರೀ ಪರಧನವೆಂಬ ಜೂಜಿಂಗೆ'

ಹೆದರಿದವರು. ಪರಸ್ತ್ರೀಯರಲ್ಲಿ ಸೇರದಿರುವುದೇ ಶೀಲವೆಂದರು, ಶಿವಲಿಂಗ ನೋಡುವ ಕಣ್ಣಿನಲ್ಲಿ ಪರಸ್ತ್ರೀಯನ್ನು ನೋಡಿದರೆ ದೇವರು ಮೆಚ್ಚುವುದಿಲ್ಲ ಎಂದು ಹೇಳುತ್ತ ಶರಣರು ನಯವಾದ ಮಾತುಗಳಲ್ಲಿ ಎಚ್ಚರಿಸುತ್ತಾರೆ. ಹಾಗೆಯೇ ಸ್ತ್ರೀಯರ ಬಗೆಗೆ ಇದ್ದ ಪುರುಷನ ದೋಷಪೂರ್ಣ ದೃಷ್ಟಿಯನ್ನು ಬದಲಿಸಲು ಪ್ರಯತ್ನಿಸಿದರು, ಶಿವಲಿಂಗ ನೋಡುವ ಕಣ್ಣಲ್ಲಿ ಪರಸ್ತ್ರೀಯ ನೋಡಿದರೆ ಅಲ್ಲಿ ಲಿಂಗವಿಲ್ಲ, ಅಲ್ಲಿ ದೇವನಿರುವುದಿಲ್ಲ, ಹಾಗಾಗಿ ಪರಧನ, ಪರಸ್ತ್ರೀಯ ವಿಸರ್ಜಿಸಿ, ಪರಶಿವನ ಪೂಜಿಸುವುದು ಒಳಿತು ಎಂದು ಜಗಕೆ ಸಾರಿದವರು ಶರಣರು.

ಸಮಾಜದಲ್ಲಿ ಹೆಣ್ಣಿನ ಸ್ಥಾನ ಎಷ್ಟು ಮಹತ್ವದ್ದು ಹಾಗೂ ಹೆಣ್ಣನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದರ ಬಗೆಗೆ ವಚನಕಾರರ ಅನೇಕ ವಚನಗಳಲ್ಲಿ ಕಂಡುಬರುತ್ತವೆ. ವಚನಕಾರರು ಹೆಣ್ಣನ್ನು ಸಾಕ್ಷಾತ್ ದೇವರೆಂದು ಭಾವಿಸಿ, ಸತ್ಕರಿಸಿದ್ದು, ಗೌರವಿಸಿದ್ದು, ವಚನಕಾರರ ಮಹಾಚೈತನ್ಯಕ್ಕೆ ಸಾಕ್ಷಿಯಾಗಿದೆ.

ಶರಣರು ಹೇಳುವ ನೀತಿ ಕೇವಲ ಪುರುಷರಿಗಷ್ಟೇ ಸಲ್ಲುವಂತದ್ದಲ್ಲ, ಸ್ತ್ರೀಯೂ ಕೂಡ ನಿಷ್ಠಳಾಗಿರಬೇಕೆನ್ನುತ್ತಾರೆ. ಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನರೆಂದ ಮೇಲೆ ಆ ನೈತಿಕ ಜವಾಬ್ದಾರಿಯೂ ಇಬ್ಬರ ಮೇಲೂ ಇರುತ್ತದೆ.. ಒಳ್ಳೆಯ ಆಚರಣೆಗಳೂ, ಗುಣ ನಡವಳಿಕೆಗಳು ಇಬ್ಬರಲ್ಲೂ ಇರಬೇಕಾಗುತ್ತದೆ. ಆಗ ಮಾತ್ರ ಸ್ವಸ್ಥ ಸಮಾಜದ ನಿರ್ಮಾಣ ಸಾಧ್ಯ ಎಂಬುದು ಶರಣರ ವಾದವಾಗಿದೆ.

'ನಾರಿಗೆ ಗುಣವೆ ಮುಖ್ಯ, ಅದೇ ಶೃಂಗಾರ' ಎಂದ ಶರಣರು, ಗಂಡ – ಹೆಂಡತಿಯರ ನಡುವೆ ಪರಸ್ಪರ ಸ್ನೇಹವಿಲ್ಲದ ಸಂಬಂಧ ಇದ್ದರೇನೋ ಶಿವ ಹೋದರೇನೋ? ಎಂದಿರುವರು. 'ಅರಸನನ್ನು ಕಂಡು ತನ್ನ ಪುರುಷನ ಮರೆದರೆ ಮರವನ್ನೇರಿ ಕೈ ಬಿಟ್ಟಂತಾಗುತ್ತದೆ' ಎಂಬ ಧೋರಣೆ ವಚನಕಾರರದು. ಹೆಣ್ಣಿಗೆ ಬಹಿರಂಗದ ಶೃಂಗಾರಕ್ಕಿಂತ ಅಂತರಂಗದ ಸೌಂದರ್ಯ ತುಂಬಾ ಮುಖ್ಯವಾದದ್ದು. ಗಂಡ–ಹೆಂಡತಿ ನಡುವೆ ಪರಸ್ಪರ ಸ್ನೇಹ, ನಿಷ್ಠೆ, ಪಾತಿವ್ರತ್ಯ ಮುಖ್ಯ. ಇಲ್ಲದಿದ್ದರೆ ಬದುಕು ಹಾನಿಯಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳುತ್ತಾರೆ.

ಶರಣ ಧರ್ಮದಲ್ಲಿ ಸತಿ–ಪತಿ ಭಾವಕ್ಕೆ ಮಹತ್ವದ ಸ್ಥಾನವಿದೆ. "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬುದು ಶರಣರ ತತ್ತ್ವವಾಗಿದೆ. ಶರಣರ ದೃಷ್ಟಿಯಲ್ಲಿ ದಾಂಪತ್ಯ ಧರ್ಮ ಶ್ರೇಷ್ಠವಾದುದು. ಅದನ್ನು ಜೇಡರ ದಾಸಿಮಯ್ಯ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ:

"ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆಸಿದಂತೆ ಕಾಣಾ ರಾಮನಾಥ"

ಸತಿಪತಿಗಳ ಅಂತರಂಗ–ಬಹಿರಂಗ ಏಕಮುಖವಾಗಿರಬೇಕು. ಗಂಡ–ಹೆಂಡತಿ ಇಬ್ಬರು ಒಟ್ಟಾಗಿ ಚಿಂತಿಸಬೇಕು, ಹಾಗಿದ್ದರೆ ಮಾತ್ರ ಕುಟುಂಬದಲ್ಲಿ ನೆಮ್ಮದಿ ಕಾಣಲು ಸಾಧ್ಯವಾಗುವುದು ಎಂದು ಹೇಳುವುದರ ಮೂಲಕ ಶರಣರು ಸುಖಿ ದಾಂಪತ್ಯಕ್ಕೆ ಕರೆಕೊಟ್ಟರು, ಗಂಡ ಒಂದು ದೇವರನ್ನು ಪೂಜಿಸಿ ಹೆಂಡತಿ ಮತ್ತೊಂದು ದೇವರನ್ನು ಪೂಜಿಸಿದರೆ ಅಂತಹ ಭಕ್ತಿ ವ್ಯರ್ಥವಾಗುತ್ತದೆ. ಆದಕಾರಣ ಇಬ್ಬರೂ ಒಂದೇ ದೇವರನ್ನು ಆರಾಧಿಸಬೇಕು. ಸತಿಪತಿ ಒಂದಾದಾಗ ಶಿವನಿಗೂ ಹಿತವಾಗುತ್ತದೆ. ಇಲ್ಲದಿದ್ದರೆ ವಿಷಮ ದಾಂಪತ್ಯ ಅಮೃತದಲ್ಲಿ ವಿಷ ಬೆರೆತಂತೆ ಆಗುತ್ತದೆ ಎಂದು ಹೇಳುತ್ತ ಸಂಸಾರದಲ್ಲಿದ್ದುಕೊಂಡೇ ಧರ್ಮವನ್ನು ಆಚರಿಸಿ ಮೋಕ್ಷ ಪಡೆಯಬಹುದು ಎಂಬುದು ಶರಣರ ನಿಲುವಾಗಿದೆ.

'ದಾಂಪತ್ಯ ಧರ್ಮ'ವನ್ನು ಶ್ರೇಷ್ಠವೆಂದ ಶರಣರು ತಾವೇ ಆದರ್ಶ ಸಂಸಾರಿಗಳಾಗಿ ದಾಂಪತ್ಯ ಜೀವನ ನಡೆಸಿ ಸಾಧಿಸಿ ತೋರಿದರು. ಸಿದ್ಧಿಯ ಶೀಖರವೇರಿದರು, ದಾಂಪತ್ಯ ಜೀವನದ ಸತ್ವ ಶುದ್ಧವಾಗಿರಬೇಕು ಹಾಗೂ ದಂಪತಿಗಳು ಒಂದೇ ಭಾವವನ್ನು ಹೊಂದಿರಬೇಕು ಎಂದರು. ಶರಣರ ದಾಂಪತ್ಯ ಕೇವಲ ಲೌಕಿಕ ಮಟ್ಟಕ್ಕೆ ಸೀಮಿತವಾಗಿರದೆ ಆಧ್ಯಾತ್ಮಿಕ ಹಂತಕ್ಕೂ ವಿಸ್ತರಣೆಗೊಂಡಿದ್ದಲ್ಲದೆ, ತಾವುಗಳು ಸತಿಪತಿಗಳೆಂಬ ಭಾವ ಮೀರಿ 'ಶರಣಸತಿ – ಲಿಂಗಪತಿಯ' ಶಿಖರವೇರಿದರು. ದಾಂಪತ್ಯ ಧರ್ಮವನ್ನು ಒಪ್ಪಿದ ಶರಣರು ಅದಕ್ಕೆ ಮಾರಕವಾಗುವ ವೇಶ್ಯಾವೃತ್ತಿಯನ್ನು ವಿರೋಧಿಸುತ್ತಾರೆ.

ಲಿಂಗ ಸಮಾನತೆಯನ್ನು ಸಾರಿದ ಶರಣರು ಯಾವುದೇ ವಿಷಯದಲ್ಲೂ ಹೆಣ್ಣು ಗಂಡಿಗಿಂತ ಕೀಳು ಎಂದು ಭಾವಿಸಲಿಲ್ಲ, ಆಕೆ ಕೂಡ ಮನುಷ್ಯಳೇ ಎಂದು ಜಗಕ್ಕೆ ಸಾರಿದರು. ಆಧ್ಯಾತ್ಮಿಕ ಕ್ಷೇತ್ರಕ್ಕೆ ಅಪರಿಚತಳಾಗಿಯೇ ಉಳಿದಿದ್ದ ಹೆಣ್ಣಿಗೆ ಉನ್ನತ ಮಟ್ಟದ ಸಾಧನೆ ಮಾಡಲು ಅವಕಾಶ ದೊರೆಯಿತು, ಸಾಮಾಜಿಕವಾಗಿ ಶತಶತಮಾನಗಳಿಂದ ಮೌನವಾಗಿದ್ದ ಆಕೆ ಇಲ್ಲಿ ಮಾತನಾಡಿದಳು. ಮನಬಿಚ್ಚಿ ಅಭಿವ್ಯಕ್ತಿಸಿದಳು. ಅಸಮಾನತೆಯನ್ನು ಪ್ರತಿಭಟಿಸಿದಳು. ಹೆಣ್ಣು ಮಾಯೆಯಾಗದೆ ಮಾತೆಯಾದಳು, ಭಕ್ತೆಯಾದಳು ಹಾಗೂ ಎಲ್ಲರಿಗೂ ಮಾರ್ಗದರ್ಶಿಯಾದಳು, ಯಾವ ಧರ್ಮದಲ್ಲೂ ಸಿಗದಿದ್ದ ಗೌರವ ಆದರಗಳು ಶರಣರಲ್ಲಿ ಸಿಕ್ಕಿತು. ಹಿಂದೆ ಸ್ತ್ರೀ ಎಂದರೆ ಸೌಂದರ್ಯಕ್ಕೆ ಮಾತ್ರ ಸೀಮಿತವಾಗಿದ್ದವಳು ಶರಣರ ಸಂದರ್ಭದಲ್ಲಿ ವ್ಯಾವಹಾರಿಕ ಲೋಕಕ್ಕೆ ಪರಿಚಿತಳಾದಳು. ಶರಣರು ಸ್ತ್ರೀಯ

ವ್ಯಕ್ತಿತ್ವವನ್ನು ಗೌರವಿಸಿ ಆಕೆಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ವೇದಿಕೆಯನ್ನು ನಿರ್ಮಿಸಿಕೊಟ್ಟು ಆ ಮೂಲಕ ಸಮಾನತೆಯನ್ನು ಸಾರಿದರು.

ಹನ್ನೆರಡನೆಯ ಶತಮಾನದ ಶರಣರಲ್ಲಿ ಹಲವು ದಂಪತಿಗಳು ಒಟ್ಟಾಗಿ ವಚನ ರಚಿಸಿ, ಸಮಾಜಮುಖಿ ಚಿಂತನೆಯಲ್ಲಿ ಪರಸ್ಪರರು ತೊಡಗಿದ್ದನ್ನು ಗಮನಿಸಬಹುದು. ದುಗ್ಗಳೆ-ಜೇಡರದಾಸಿಮಯ್ಯ, ಅಮುಗೆರಾಯಮ್ಮ ಅಮುಗೆ ದೇವಯ್ಯ, ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ, ಕಾಳವ್ವೆ-ಬಾಚಿಕಾಯಕದ ಬಸವಯ್ಯ, ಕಾಳವ್ವೆ-ಉರಿಲಿಂಗಪೆದ್ದಿ, ಕೇತಲದೇವಿ-ಕುಂಬಾರ ಗುಂಡಯ್ಯ, ಗಂಗಮ್ಮ-ಹಾದರ ಕಾಯಕದ ಮಾರಯ್ಯ, ನೀಲಮ್ಮ-ಬಸವಣ್ಣ, ಗಜೇಶಮಸಣ್ಣಯ್ಯಗಳ ಪುಣ್ಯಸ್ತ್ರೀ-ಗಜೇಶಮಸಣ್ಣಯ್ಯ, ಗುಡ್ಡವ್ವೆ-ಬತ್ತಲೇಶ್ವರ, ಲಿಂಗಮ್ಮ-ಹಡಪದ ಅಪ್ಪಣ್ಣ, ರೇಚವ್ವೆ-ಕಾಟಕೂಟಯ್ಯ ಮುಂತಾದ ಶರಣ ದಂಪತಿಗಳು ಹನ್ನೆರಡನೆಯ ಶತಮಾನದಲ್ಲಿ ಕಾಣಸಿಗುತ್ತಾರೆ. ಸತಿಪತಿಗಳು ಕುಟುಂಬ ವ್ಯವಸ್ಥೆಯಲ್ಲಿ ಬಾಳಿ, ಸಮಾಜವನ್ನು ಉದ್ಧರಿಸಲು ಹೊರಟ ಈ ದಂಪತಿಗಳನ್ನು ಗಮನಿಸಿದರೆ ಆ ಕಾಲದ ಗಂಡು-ಹೆಣ್ಣಿನ ಸಮಾನತೆಯ ಬಗೆಗೆ ಹಲವು ಅಂಶಗಳು ತಿಳಿಯುತ್ತವೆ.

ಶತಮಾನಗಳಿಂದಲೂ ಅಸ್ಪೃಶ್ಯರಾಗಿ, ಬಾಯಿಲ್ಲದವಳಾಗಿ ಬದುಕಿದ್ದ ಹೆಣ್ಣು ಶರಣ ಕಾಲಘಟ್ಟದ ಧಾರ್ಮಿಕ ನೆಲೆಗಟ್ಟಿನ ಸಾಮಾಜಿಕ ಚಳವಳಿಯಲ್ಲಿ ಪಡೆದುಕೊಂಡ ತಮ್ಮ ಆಲೋಚನೆಗಳನ್ನು ನಿರ್ಭಯವಾಗಿ ಹರಿಯಬಿಡುತ್ತಾರೆ. ವೈದಿಕ ಸಂಸ್ಕೃತಿಯ ನಡವಳಿಕೆಯನ್ನು ಪ್ರಶ್ನಿಸುವ ಮಟ್ಟಿಗೆ ಸತ್ಯಕ್ಕಳ ಒಂದು ವಚನವನ್ನು ಉದಾಹರಿಸುವುದರ ಮೂಲಕ ಇಡೀ ವಚನ ಸಾಹಿತ್ಯ ಚಳವಳಿಯು ಮಹಿಳೆಗೆ ಹೇಗೆ ಸ್ಪಂದಿಸಿತು, ಆ ಸ್ಪಂದನದ ಪರಿಣಾಮವಾಗಿ ಉಂಟಾದ ಜಾಗೃತಿಯನ್ನು ಮನಗಾಣಬಹುದು.

"ಮೊಲೆ ಮುಡಿ, ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರಿಯಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ; ಬಲ್ಲವರ ನೀತಿಯಲ್ಲ
ಏತರ ಹಣ್ಣಾದಡೊ ಮಧುರವೇ ಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ"

ಹಣ್ಣಿನಲ್ಲಿಯ ಮಧುರದಂತೆ, ಪುಷ್ಪದಲ್ಲಿಯ ವಾಸನೆಯಂತೆ, ದೇಹದಲ್ಲಿ ಅಡಗಿರುವ ಆತ್ಮನಿಗೆ ಗಂಡು-ಹೆಣ್ಣು ಎಂಬ ಭೇದ ಕಲ್ಪಿಸುವುದು ಬಲ್ಲವರ ನೀತಿಯಲ್ಲ ಎಂದು ಸತ್ಯಕ್ಕ ನುಡಿಯುತ್ತಾಳೆ.

ಒಟ್ಟಾರೆಯಾಗಿ ಹೇಳುವುದಾದರೆ, ಆ ಯುಗದಲ್ಲಿ ಮಹಿಳಾ ಪರ ಚಿಂತನೆಗಳು ಹೆಚ್ಚು ಹೆಚ್ಚಾಗಿ ನಡೆದಿವೆ. ವಚನ ಕಾಲಘಟ್ಟದ ಮಹಿಳೆಯ ವೈರಾಗ್ಯ ಜೀವನದ ರೀತಿಯ ಆಶ್ಚರ್ಯಪಡುವಂತದು. ಆತ್ಮಕ್ಕೆ ಹೆಣ್ಣು-ಗಂಡು ಭೇದವಿಲ್ಲ, ಆತ್ಮದ ಉದ್ಧಾರಕ್ಕೆ ಸ್ತ್ರೀ-ಪುರುಷರಿಬ್ಬರೂ ಸಮಾನರು, ಹಾಗೂ ಜ್ಞಾನ ಸಾಧಿಸಲು ಹೆಣ್ಣು ಗಂಡುಗಳಲ್ಲಿ ಯಾರೂ ಮೇಲೂ ಅಲ್ಲ, ಕೀಳೂ ಅಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಇಬ್ಬರೂ ಸಹಜವಾದ ಸಮಾನ ಹಕ್ಕುದಾರರಾಗಿರುವರು.

ಸಮಾಜದಲ್ಲಿನ ನೈತಿಕ ಜೀವನಕ್ಕೆ ಇಬ್ಬರೂ ಬದ್ಧವಾಗಿರಬೇಕು. ದಾಂಪತ್ಯ ಜೀವನ ಆತ್ಮೋದ್ಧಾರಕ್ಕೆ ಅಡ್ಡಿಯಿಲ್ಲ, ಇಬ್ಬರಿಗೂ ಪಾತಿವ್ರತ್ಯದ ನಿಷ್ಠೆ ಮುಖ್ಯವಾದುದು, ಕಾಯಕ ನಿಷ್ಠೆ ಪ್ರಧಾನವಾದ ಮೌಲ್ಯವಾಗಿತ್ತು. ಮಾಯೆಯ ಮುಸುಕಿನಿಂದ ಹೊರಬಂದ ಹೆಣ್ಣು ಶಿಕ್ಷಿತಳಾದಳು. ಆಕೆ ತನ್ನ ಮನದಾಳದ ದನಿಗೆ ಮಾತಾದಳು. ಸಮಾನ ಆಧ್ಯಾತ್ಮಿಕ ಚಿಂತನೆಗೆ ಅವಕಾಶ ದೊರೆತ ಕಾರಣ ಅನುಭಾವಿಕ ನೆಲೆಯಲ್ಲಿಯೂ ಪ್ರಗತಿಯನ್ನು ಸಾಧಿಸಿದಳು. ಪರಿಣಾಮವಾಗಿ ಸಾಹಿತ್ಯ ಕ್ಷಿತಿಜದಲ್ಲಿ ಮೂವತ್ತೂರಕ್ಕೂ ಹೆಚ್ಚು ವಚನಕಾರ್ತಿಯರು ಬೆಳಗಿದರು.

ಕೊನೆಟಿಪ್ಪಣಿಗಳು

೧. ಡಾ. ಬಸವರಾಜ ಸಬರದ; ವಚನಸಂಸ್ಕೃತಿ; ವ-೫೦೦, ಪು. ೧೬೯

೨. ಡಾ. ವೀರಣ್ಣ ರಾಜೂರ(ಸಂ); ಶಿವಶರಣೆಯರ ವಚನ ಸಂಪುಟ(೫), ವ- ೧೦೫೨, ಪು. ೩೪೨

೩. ಓ.ಎಲ್. ನಾಗಭೂಷಣ(ಸಂ.); ಸಾವಿರ ವಚನಗಳು, ವಚನ-೮೬೯, ಪು. ೨೫೭

೪. ಅದೇ., ವಚನ-೧೦೫೮, ಪು. ೩೧೫

೫. ಅದೇ., ವಚನ – ೫೩೦, ಪು. ೧೫೭

೬. ಅದೇ., ವಚನ – ೫೨೪, ಪು. ೧೫೫

೭. ಅದೇ., ವಚನ – ೪೮೩, ಪು. ೧೪೩

೮. ಅದೇ., ವಚನ – ೫೦೦, ಪು. ೧೪೩

೯. ಅದೇ., ವಚನ – ೫೦೦, ಪು. ೧೬೯

*****

ಅಧ್ಯಾಯ – ೪

ಶರಣೆಯರ ವಚನಗಳ ರಚನಾ ಸ್ವರೂಪ ಮತ್ತು ತಾತ್ವಿಕತೆ

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ಸಂಭವಿಸಿದ ಶರಣ ಚಳವಳಿಯು ಮಹಿಳೆಯರ ಬದುಕಿಗೆ ಹೊಸದೊಂದು ಆಯಾಮವನ್ನು ಒದಗಿಸಿತು. ಶರಣ ಚಳವಳಿ ಕರ್ನಾಟಕದ ಇತಿಹಾಸದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಹಿತ್ಯಕವಾಗಿ ಅತ್ಯಂತ ಪ್ರಮುಖ ಘಟ್ಟ ಎನ್ನಬಹುದು. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ಮೊದಲ ಅಧ್ಯಾಯ ವಚನಕಾರ್ತಿಯರ ಮೂಲಕವೇ ಆರಂಭವಾಯಿತು. ವಚನ ಕಾಲಘಟ್ಟದಲ್ಲಿ ವಚನಕಾರರಷ್ಟೇ ಪ್ರಭಾವಶಾಲಿಯಾಗಿ ರೂಪುಗೊಂಡವರೆಂದರೆ ವಚನಕಾರ್ತಿಯರು, ಈ ವಚನಕ್ರಾಂತಿಯಲ್ಲಿ ಮಹಿಳೆಯರು ಮುಕ್ತವಾಗಿ ಪಾಲ್ಗೊಳ್ಳಲು ಅವಕಾಶ ದೊರೆಯಿತು.

ಶರಣೆಯರ ವಚನಗಳಲ್ಲಿ ಸಾಮಾಜಿಕ ಅಂಶಗಳು, ಧಾರ್ಮಿಕ ಅಂಶಗಳು, ಹಾಗೆಯೇ ಹಲವು ವೈಯಕ್ತಿಕ ವಿಚಾರಗಳು ನಿರ್ಭಯವಾಗಿ, ಮುಕ್ತವಾಗಿ ಅಭಿವ್ಯಕ್ತಗೊಂಡವು. ಶರಣೆಯರ ವಚನಗಳು ಆಡು ಭಾಷೆಯಲ್ಲಿ ಅಭಿವ್ಯಕ್ತಗೊಂಡಿವೆ ಹಾಗೂ ಸಮಾಜದ ಎಲ್ಲಾ ವರ್ಗದ ಜನರ ಮನವನ್ನು ಮುಟ್ಟುವಲ್ಲಿ ಯಶಸ್ವಿಯಾಗಿವೆ. ಹಲವಾರು ಶಿವಶರಣೆಯರು ತಮ್ಮ ಅನುಭವಗಳನ್ನು, ಆಧ್ಯಾತ್ಮಿಕ ಹಂಬಲ, ವೈಯಕ್ತಿಕ ವೇದನೆಗಳನ್ನು ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ವಚನಯುಗದಲ್ಲಿ ಮೂವತ್ತೂರ್ಮಕ್ಕು ಹೆಚ್ಚು ವಚನಕಾರ್ತಿಯರು ಸಾಹಿತ್ಯ ರಚನೆ ಮಾಡಿದ್ದಾರೆ. ಶರಣೆಯರ ವಚನಗಳಲ್ಲಿ ಧಾರ್ಮಿಕ ವಿಚಾರಗಳಿಗಿಂತ ಹೆಚ್ಚಾಗಿ ಸಾಮಾಜಿಕ ಸಂಗತಿಗಳು ಕಂಡುಬರುತ್ತವೆ. ಸಮಾಜ ಸುಧಾರಣೆಯೇ ಶರಣೆಯರ ಮುಖ್ಯ ಗುರಿ–ಯಾಗಿದ್ದಿತು. ಸಮಾಜದಲ್ಲಿ ಬೇರೂರಿ ನಿಂತಿರುವ ಮೇಲು–ಕೀಳು, ಸ್ತ್ರೀ–ಪುರುಷ ಎಂಬ ಭೇದವನ್ನು ಕುರಿತು ಹಾಗೂ ಅನೈತಿಕ ನಡವಳಿಕೆಗಳನ್ನು ವಿಮರ್ಶೆಗೆ ಒಳಪಡಿಸುತ್ತಾರೆ.

ವಚನಕಾರ್ತಿಯರ ವಚನಗಳಲ್ಲಿ ವ್ಯಕ್ತವಾಗಿರುವ ವಚನಾಂಕಿತ, ಕಾಯಕ ನಿಷ್ಠೆ, ತಾತ್ವಿಕತೆ, ವಚನಗಳ ರಚನಾ ಸ್ವರೂಪ, ವ್ರತನಿಷ್ಠೆ, ಸಮಾಜದರ್ಶನ, ಅರಿವು, ಆಚಾರ–ವಿಚಾರಗಳು, ಆಧ್ಯಾತ್ಮಿಕ ಚಿಂತನೆ, ಅಲ್ಲದೆ ವೈಯಕ್ತಿಕ ವಿಚಾರಗಳು ಇವೇ ಮೊದಲಾದ ಅಂಶಗಳನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಹಲವು ವಚನಕಾರ್ತಿಯರ ವಚನಗಳ ರಚನಾ ಸ್ವರೂಪವನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಕ್ಕಮಹಾದೇವಿ

ಅಕ್ಕಮಹಾದೇವಿ ಹನ್ನೆರಡನೆಯ ಶತಮಾನದ ಪ್ರಸಿದ್ಧ ವಚನಕಾರ್ತಿ, ಈಕೆಯ ವಚನಾಂಕಿತ 'ಚೆನ್ನಮಲ್ಲಿಕಾರ್ಜುನಾ'. ಈಕೆ ಭಾರತದ ಮಹಿಳಾ ಪ್ರಪಂಚದ ಗೌರವವನ್ನು ಹೆಚ್ಚಿಸಿದ್ದಾರೆ. ಅಕ್ಕಮಹಾದೇವಿ ಒಬ್ಬ ಶ್ರೇಷ್ಠ ಅನುಭಾವಿ ಹಾಗೂ ಕವಯಿತ್ರಿ ಕೂಡ. ಅಕ್ಕ ಶಿವನಲ್ಲಿ ಅಪಾರವಾದ ಭಕ್ತಿಯನ್ನು ಹೊಂದಿದ್ದು, ಶಿವಭಕ್ತಿಗೆ ಅಡ್ಡಿಪಡಿಸಿದ ತನ್ನ ಗಂಡ ಕೌಶಿಕ ರಾಜನನ್ನೇ ತೊರೆಯುತ್ತಾಳೆ. ಲೌಕಿಕ ಪತಿಯನ್ನು ಧಿಕ್ಕರಿಸಿದ ಅವಳ ಪ್ರೇಮ ವಿಶ್ವವಲ್ಲಭನ ಪತಿಯಾಗುವ ಆಧ್ಯಾತ್ಮಿಕ ಮಾರ್ಗವನ್ನು ಹಿಡಿಯಿತು.

ಅಕ್ಕಮಹಾದೇವಿ ಬಾಲ್ಯದಿಂದಲೂ ಸ್ವಾಭಿಮಾನಿಯಾಗಿ ಆತ್ಮಪ್ರತ್ಯಯಿಯಾಗಿ ಬೆಳೆದವಳು. ತನ್ನ ಸ್ವಾಭಿಮಾನಕ್ಕೆ ಪೆಟ್ಟುಬಿದ್ದಾಗ ಅವಳು ಆಯ್ಕೆ ಮಾಡಿಕೊಂಡದ್ದು ತನ್ನ ವಿಚಾರ ಸ್ವಾತಂತ್ರ್ಯವನ್ನೇ ಹೊರತು ಗಂಡನನ್ನಲ್ಲ. ಚೆನ್ನಮಲ್ಲಿಕಾರ್ಜುನನನ್ನು ಅರಸಿ ಹೊರಟಾಗ ಎದುರಾದ ವಿಪತ್ತುಗಳನ್ನು ಧೈರ್ಯಗುಂದದೆ ಎದುರಿಸಿದಳು.

"ಹಸಿವಾದೊಡೆ ಭಿಕ್ಷಾನ್ನಗಳುಂಟು,
ತೃಷೆಯಾದರೆ ಕೆರೆಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲವುಂಟು
ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀವೆನಗುಂಟು"[೧]

ನನ್ನನ್ನು ನೋಡಿಕೊಳ್ಳಲು ಚೆನ್ನಮಲ್ಲಿಕಾರ್ಜುನನಿದ್ದಾನೆ, ನಾನು ಆತನಿಗೆ ಮೀಸಲು ಎನ್ನುವ ಅಚಲ ನಿರ್ಧಾರ ಅಕ್ಕನದು.

"ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಂಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು"[೨]

ಮೊದಲಾದ ವಚನಗಳಲ್ಲಿ ಆಕೆ ಅನುಭವಿಸಿದ ವೇದನೆ ಗೋಚರಿಸುತ್ತದೆ. ಇಷ್ಟದೈವ ಚೆನ್ನಮಲ್ಲಿಕಾರ್ಜುನನನ್ನು ಆತ್ಮಸಂಗಾತಿಯಾಗಿ ಸ್ವೀಕರಿಸಿರುವ ಅಕ್ಕ ಎಂತಹ ಕಷ್ಟವನ್ನಾದರೂ ಸಹಿಸಿಯಾಳು, ಆದರೆ ತನ್ನ ಆರಾಧ್ಯದೈವವನ್ನು ತೊರೆಯಲಾರಳು. ಯಾವುದೇ ತೊಡಕು ಬಂದರೂ ನೀನೆ ಬಿಡಿಸಬೇಕು. ನೀವೆ ನನಗೆ ಒಲಿಯಬೇಕು ನಿನ್ನನ್ನು ಒಲಿಸಿ ಗೆಲ್ಲಲಾರೆ ಎಂದು ಹೇಳುವಲ್ಲಿ ಅಕ್ಕನ ವೇದನೆ, ನಿವೇದನೆ ಕಂಡುಬರುತ್ತದೆ. ಅಕ್ಕನ ಸ್ವತಂತ್ರ ಚಿಂತನೆಗಳಿಗೆ ಇಂತಹ ವಚನಗಳೇ ಸಾಕ್ಷಿಯಾಗಿದೆ.

ಅಕ್ಕಮಹಾದೇವಿಯ ವಚನಗಳಲ್ಲಿ 'ಮಾಯೆಯ' ಪರಿಕಲ್ಪನೆ ವಿಭಿನ್ನವಾದ ರೀತಿಯಲ್ಲಿ ವ್ಯಾಖ್ಯಾನಗೊಂಡಿದೆ. ಹಸಿವಿಗೆ, ತೃಷೆಗೆ ಸಿಗುವ ಪರಿಹಾರಗಳಿಗಿಂತ ಆತ್ಮಸಂಗಾತಕ್ಕೆ ಸಿಗುವ ಚೆನ್ನಮಲ್ಲಿಕಾರ್ಜುನನ ಸ್ನೇಹ ಅಕ್ಕನಿಗೆ ಬಹುಮುಖ್ಯವಾದದ್ದು.

"ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು ನೋಡಾ
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ
ಮರುಳಾಗಿ ತೋರುವುದು
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ"[೩]

ಈ ವಚನದಲ್ಲಿ ಅಕ್ಕನು ಹೆಣ್ಣುಗಂಡಿನ ಪಾಲಿಗೆ ಮಾಯೆಯಾಗುವುದಾದರೆ, ಗಂಡು ಹೆಣ್ಣಿನ ಪಾಲಿಗೆ ಮಾಯೆ ಯಾಕಲ್ಲ? ಎಂದು ದಿಟ್ಟತನದಿಂದ ಪ್ರಶ್ನಿಸಿರುವುದು ಸ್ತ್ರೀಪರವಾದ ಪ್ರತಿಕ್ರಿಯೆಯಾಗಿ ತೋರಿಬರುವುದು.

ಅಕ್ಕನ ವಚನಗಳು ಭಾವಗೀತಾತ್ಮಕವಾಗಿ ಇರುವಂತೆಯೇ ವೈಚಾರಿಕವಾಗಿಯೂ ಪ್ರಖರವಾಗಿದೆ. ಜೀವನದ ನೋವು, ನಲಿವು, ವಿರಕ್ತಿ, ಆಧ್ಯಾತ್ಮಿಕ ನಿಲುವು ಎಲ್ಲವೂ ವ್ಯಕ್ತಗೊಂಡಿವೆ. ಮಹಿಳೆಯರಲ್ಲಿ ಸಾಮಾನ್ಯವಾಗಿ ಕಾಣುವ ಆತ್ಮವಿಶ್ವಾಸ, ಶ್ರದ್ಧೆ, ಗಾಢವಾದ ಭಕ್ತಿ ಅವಳ ವಚನಗಳಲ್ಲಿ ಗೋಚರಿಸುತ್ತದೆ. ಅಕ್ಕನ ವಚನಗಳಲ್ಲಿ ಸಾಮಾಜಿಕ ಚಿಂತನೆಗಳು ಕಂಡುಬಂದರೂ ಅದು ಬೇರೆಯವರಿಗೆ ತಿಳಿಹೇಳುವ ಹಾಗೇ ಇಲ್ಲ. ಇತರ ಶರಣೆಯರ ವಚನಗಳಲ್ಲಿ ಕಂಡುಬರುವ ವ್ರತಾಚರಣೆಗಳ ನಿರೂಪಣೆಯಾಗಲಿ, ಟೀಕೆಗಳಾಗಲಿ ಕಂಡುಬರುವುದಿಲ್ಲ, ಬದಲಾಗಿ ಆಕೆಯ ವಚನಗಳಲ್ಲಿ ಪ್ರಧಾನವಾಗಿ ಕಂಡುಬರುವುದು ವೇದನೆ

ಮತ್ತು ನಿವೇದನೆ. ಅಕ್ಕನ ವಚನಗಳಲ್ಲಿ ಮಾನಸಿಕ ತುಡಿತ, ಭಕ್ತಿಯ ತೊಳಲಾಟವನ್ನು ಗುರುತಿಸಬಹುದು. ಆಕೆಯ ವಚನಗಳಲ್ಲಿ ತತ್ತ್ವ ಚಿಂತನೆಯು ವ್ಯಕ್ತವಾಗಿದೆ. ತತ್ತ್ವಚಿಂತನೆಯಲ್ಲೂ ತಾನು ಸಮರ್ಥಳೆಂದು ಆಕೆಯ ವಚನದಿಂದ ತಿಳಿದುಬರುತ್ತದೆ.

ಅಕ್ಕನ ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಾಣುವ ಭಾವನೆಗಳ ಅಭಿವ್ಯಕ್ತಿಯು ಹಲವಾರು ರೀತಿಯದು. ತೀವ್ರ ವೈರಾಗ್ಯ, ಉತ್ಕಟ ಪ್ರೇಮ, ದೇಹದ ಬಗೆಗಿನ ತೀವ್ರ ನಿರಾಸಕ್ತಿ, ದೇಹ-ಮನಸ್ಸುಗಳ ಹೊಂದಾಣಿಕೆಯಲ್ಲಿ ದೇಹದ ಬಗ್ಗೆ ಉಂಟಾಗುವ ತೀವ್ರ ಹಂಬಲ, ಪ್ರೀತಿ, ಇಂಥ ಹಲವಾರು ವೈರುಧ್ಯಗಳೆಂದು ತೋರಬಹುದಾದ ಲಕ್ಷಣಗಳು ಆಕೆಯ ವಚನಗಳಲ್ಲಿ ಕಂಡುಬರುತ್ತವೆ. ಆದ್ದರಿಂದಲೇ ಅತ್ಯಂತ ಹೃದಯ ವಿದ್ರಾವಕವಾದ ಮನಸ್ಸಿಗೆ ತಟ್ಟುವ ಅಭಿವ್ಯಕ್ತಿಯ ಸ್ವರೂಪವು ಇವಳ ವಚನಗಳಿಗೆ ಲಭ್ಯವಾಗಿದೆ.

ಅಕ್ಕನ ವಚನಗಳಲ್ಲಿ ಒಳ್ಳೆಯ ಸಾಹಿತ್ಯದಲ್ಲಿರಬೇಕಾದ ಎಲ್ಲ ಶ್ರೇಷ್ಠ ಗುಣಗಳೂ ಮೇಳೈಸಿವೆ. ಕಲ್ಪನಾಶಕ್ತಿ, ನಿರೂಪಣಾ ಶಕ್ತಿ, ಚಿತ್ರಕಶಕ್ತಿ, ಸಹಜತೆ, ಲಾಲಿತ್ಯ, ರಸಾನಂದ ಭಾವನೆಗಳು, ಅವುಗಳಲ್ಲಿ ಕಂಡುಬರುವ ಅಲಂಕಾರಗಳು ಅತ್ಯಂತ ಮನೋಜ್ಞವಾಗಿವೆ. ತಾನು ಉಂಡ ಅನುಭವವನ್ನು ತಾನು ಕಂಡ ಸತ್ಯವನ್ನು ಅಷ್ಟೇ ಸಾರವತ್ತಾಗಿ, ಮನಮುಟ್ಟುವಂತೆ ಹಾಡಿದ್ದಾಳೆ. ಅವುಗಳ ವಚನಗಳಲ್ಲಿ ಪರಿಪೂರ್ಣತೆಯ ಅನುಭವಗಳ ನಿರೂಪಣೆಯನ್ನು ಕಾಣಬಹುದು.

ಅಕ್ಕನ ವಚನಗಳು ಚಿಕ್ಕಚಿಕ್ಕ ಸಾಲುಗಳಲ್ಲೇ ಅಮೂರ್ತವಾದದನ್ನು ಮೂರ್ತ ರೂಪದಲ್ಲಿ ಕಟ್ಟಿಕೊಡುತ್ತವೆ. ಆಕೆಯ ವಚನಗಳಲ್ಲಿ ಆಕೆಯ ಬದುಕಿನ ಅಂತರಂಗದರ್ಶನ ಸಾಧ್ಯ. ಅಕ್ಕನ ವಚನಗಳು ವಚನಸಾಹಿತ್ಯದಲ್ಲಿ ಎಲ್ಲಾ ದೃಷ್ಟಿಯಿಂದಲೂ ಪ್ರತ್ಯೇಕವಾದ ಸ್ಥಾನಪಡೆದಿವೆ. ಅಕ್ಕನ ವಚನಗಳು ಅವಳ ವ್ಯಕ್ತಿತ್ವಕ್ಕೆ ಬರೆದ ವ್ಯಾಖ್ಯಾನಗಳಂತಿವೆ.

ಅಕ್ಕಮ್ಮ

'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಎಂಬುದು ಅಕ್ಕಮ್ಮನ ವಚನಾಂಕಿತ-ವಾಗಿದ್ದು ಈಕೆಯ ವಚನಗಳಲ್ಲಿ ಆಚಾರನಿಷ್ಠೆ, ಡಾಂಭಿಕ ವಿರೋಧ, ವ್ರತನಿಷ್ಠೆ, ವ್ರತಾಚರಣೆ ಮುಂತಾದವುಗಳ ಪ್ರತಿಪಾದನೆಯನ್ನು ಕಾಣಬಹುದು. ಅಕ್ಕಮ್ಮನ ವಚನಾಂಕಿತವೇ ಆಕೆಯ ಆಚಾರನಿಷ್ಠೆಯನ್ನು ಅಭಿವ್ಯಕ್ತಿಸುತ್ತದೆ.

ಅಕ್ಕಮ್ಮನ ದೃಷ್ಟಿಯಲ್ಲಿ ವ್ರತವೆನ್ನುವುದು ಪರತತ್ತ್ವವನ್ನು ಕಾಣುವುದಕ್ಕೆ ಏಣಿಯಿದ್ದಂತೆ. ವ್ರತಭ್ರಷ್ಟರನ್ನು, ಆಚಾರಹೀನರನ್ನು ತೀರ ಅಸಹ್ಯವಾಗಿ ಕಂಡಿದ್ದಾಳೆ. ವ್ರತದ ಮೂಲ

ಗುರುಲಿಂಗ ಜಂಗಮದಲ್ಲಿ ಅಡಗಿದೆ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾಳೆ. ಎಂತಹ ಸಂದರ್ಭದಲ್ಲೂ ಹಿಡಿದ ನಿಯಮಗಳನ್ನು ಬಿಡದ ಛಲ, ತನ್ನ ಗುರಿ ಈಡೇರಿಸಿಕೊಳ್ಳುವ ಧೈರ್ಯವನ್ನು ಹೊಂದಿದ್ದ ಈಕೆಯು ವ್ರತ, ನೇಮ, ಶೀಲ, ಆಚಾರ ಹಾಗೂ ಏಕದೈವ ನಿಷ್ಠೆಗಳನ್ನು ತನ್ನ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾಳೆ.

ಅಕ್ಕಮ್ಮ ತನ್ನ ವಚನಗಳಲ್ಲಿ ಆಚಾರದ ಮಹತ್ವದ ಬಗೆಗೆ ತಿಳಿಸಿದ್ದಾಳೆ. ಆಚಾರಗಳನ್ನು ಪ್ರತಿಯೊಬ್ಬರು ಪಾಲಿಸಬೇಕೆಂಬುದು ಅಕ್ಕಮ್ಮನ ಅಭಿಮತ. ವ್ರತಭ್ರಷ್ಟರನ್ನು, ಆಚಾರಹೀನರನ್ನು ಕ್ರಿಮಿಗಳಂತೆ ಕಾಣುವ ಅಕ್ಕಮ್ಮ ತೀರಾ ಜುಗುಪ್ಸೆಯಿಂದ ಅಷ್ಟೇ ಕಟುವಾಗಿ ಖಂಡಿದ್ದಾಳೆ.

ಅಕ್ಕಮ್ಮ ಆಚಾರದ ಅನುಸರಣೆಯನ್ನು ಬಹುಎತ್ತರಕ್ಕೆ ಕೊಂಡೊಯ್ಯುತ್ತಾಳೆ. ಗುರು, ಲಿಂಗ, ಜಂಗಮ, ಇವುಗಳಲ್ಲಿ ಯಾವುದರಲ್ಲಿಯಾದರೂ ಆಚಾರ ಭ್ರಷ್ಟವಾದರೆ ಅವುಗಳನ್ನು ಕೂಡಲಾಗುವುದಿಲ್ಲ. ನಿಜಸಂತನಿಗೆ ಆಚಾರವೇ ವಸ್ತು; ವ್ರತವೇ ಪ್ರಾಣ. ಕ್ರಿಯೆಯೇ ಜ್ಞಾನ, ಜ್ಞಾನವೇ ಆಚಾರವಾಗಿ ಇರಬೇಕೆಂದು ಅಕ್ಕಮ್ಮ ಭಾವಿಸುತ್ತಾಳೆ. ಆ ಭಾವನೆಯೇ ಈ ಕೆಳಗಿನ ವಚನದಲ್ಲಿ ವ್ಯಕ್ತಗೊಂಡಿದೆ.

> **"ಗುರುವಾದರೂ ಆಚಾರ ಭ್ರಷ್ಟನಾದಡೆ ಅನುಸರಿಸಲಾಗದು,**
> **ಲಿಂಗವಾದರೂ ಆಚಾರದೋಹಳವಾದಲ್ಲಿ ಪೂಜಿಸಲಾಗದು,**
> **ಜಂಗಮವಾದಡೂ ಆಚಾರ ಅನುಸರಣೆಯಾದಲ್ಲಿ ಕೂಡಲಾಗದು,**
> **ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯೆಯ ಜ್ಞಾನ, ಜ್ಞಾನವೇ ಆಚಾರ,**
> **ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ತಾನೆ"**[9]

ಅಕ್ಕಮ್ಮ ವ್ರತ, ನೇಮ ಮತ್ತು ಆಚಾರಭ್ರಷ್ಟರನ್ನು ಪ್ರಾಣಿಗಳಿಗೆ ಹೋಲಿಸುತ್ತಾಳೆ. ಶಿವಾನುಭವದ ಉನ್ನತ ತತ್ತ್ವಗಳು ಆಕೆಯ ವಚನಗಳಲ್ಲಿ ಅಡಕಗೊಂಡಿವೆ. ಅಕ್ಕಮ್ಮನ ವಚನಾಂಕಿತವೇ ಆಕೆಯ ಆಚಾರ ನಿಷ್ಠೆಯನ್ನು ಅಭಿವ್ಯಕ್ತಿಸುತ್ತದೆ.

ಅಮುಗೆ ರಾಯಮ್ಮ

ಅಕ್ಕಮ್ಮನಂತೆ ಆಚಾರಶೀಲಳಾದ ಅಮುಗೆ ರಾಯಮ್ಮಳ ವಚನಗಳಲ್ಲೂ ಆಚಾರವೇ ಪ್ರಧಾನವಸ್ತು. ಈಕೆ ಸರಳ ಹಾಗೂ ನೇರನುಡಿಯ ವ್ರತಾಚಾರಿಣಿ, ಅಕ್ಕಮ್ಮನಿಗಿಂತಲೂ ಹೆಚ್ಚು ತೀಕ್ಷ್ಣ ಮತ್ತು ಕಟುವಾಗಿ ಸಮಾಜ ವಿಮರ್ಶೆ ಮಾಡಿದ್ದಾಳೆ. ಕಂಡದ್ದನ್ನು ಕಂಡ ಹಾಗೆ

ಹೇಳುವ ವೇಷಧಾರಿ ಭಕ್ತರನ್ನು ಬಡಿದೆಬ್ಬಿಸುವ ಚಾಟಿ ಏಟಿನ ಮಾತುಗಳು ರಾಯಮ್ಮನ ವಚನಗಳಲ್ಲಿ ಎದ್ದುಕಾಣುವ ಅಂಶಗಳು. ಆಕೆಯ ವಚನವೊಂದು ಹೀಗಿದೆ:

“ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ
ಎನ್ನ ಕಾಲೊಳಗಣ ಮುಳ್ಳ ತೆಗೆವವರನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರನಾರನೂ ಕಾಣೆ
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ
ಕೆಡಿಸುವವರನಾರನೂ ಕಾಣೆನಯ್ಯಾ
ಆದ್ಯರ ವೇದ್ಯರ ವಚನಗಳಿಂದ
ಅರಿದೆವೆಂಬವರು ಅರಿಯಲಾರರು ನೋಡಾ
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ತೆಗೆಯಬೇಕು
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು
ಎನ್ನ ಅಂಶಗದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೇ ಕಳೆಯಬೇಕು
ಅಮುಗೇಶ್ವರಲಿಂಗವ ನಾನೇ ಅರಿಯಬೇಕು”[೫]

ಈಕೆಯ ವಚನಗಳಲ್ಲಿ ಸಾಮಾಜಿಕ ಕಾಳಜಿಯೇ ಪ್ರಧಾನವಾಗಿ ಕಂಡುಬರುತ್ತದೆ. ವಿಚಾರವಂತಿಕೆ, ನಿಷ್ಠುರತೆ ಇವು ರಾಯಮ್ಮನ ಗುಣಸ್ವಭಾವ. ವ್ಯಂಗ್ಯ, ವಿಡಂಬನೆಯಿಂದ ಕೂಡಿದ ಕಟುಭಾಷೆ, ಮೊನಚು ಮಾತು ಈಕೆಯ ಅಭಿವ್ಯಕ್ತಿಯ ವಿಧಾನವಾಗಿದೆ. ರಾಯಮ್ಮ ತಾರತಮ್ಯನೀತಿ, ಡಾಂಭಿಕತೆ, ಅನಾಚಾರ, ಅಸಮಾನತೆಯನ್ನು ವಿರೋಧಿಸುತ್ತಾಳೆ. ಸಾಮಾಜಿಕವಾಗಿ ಚಿಂತನೆ, ಚರ್ಚೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳೇ ಅಧಿಕವಾಗಿ ಕಂಡುಬರುವ ರಾಯಮ್ಮನ ವಚನಗಳಲ್ಲಿ ಕಾವ್ಯಗುಣ ಗೌಣವಾಗಿದ್ದರೂ ಜೀವನಾನುಭವವು ಅರ್ಥಪೂರ್ಣ ಮಾತುಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿವೆ.

ರಾಯಮ್ಮ ಬಳಸುವ ಕೆಲವು ಸುಂದರ ಸೂತ್ರಬದ್ಧ ವಾಕ್ಯಗಳು, ಗಾದೆ, ನುಡಿಗಟ್ಟುಗಳು ವಚನಗಳಿಗೆ ವಿಶೇಷ ಧ್ವನಿ, ಸತ್ವವನ್ನು ತಂದುಕೊಟ್ಟಿವೆ. “ಆಕಾಶ ಹಾರುವಂಗೆ ಗೋವಿಯ ಕೋಲ ಹಂಗೇತಕಯ್ಯಾ? ಗಗನವ ಮುಟ್ಟಾವಂಗೆ ಅಗಣಿತವ ಸುದ್ದಿಯೇಕೆ”?, “ಮರುಜವಣಿ ಕಡ್ಡಿಕೆಯಲ್ಲಿದ್ದವಂಗೆ ಸರ್ಪ ಕಚ್ಚಬಲ್ಲುದೆ? ಕಾಗೆಮರಿ ಕೋಗಿಲೆಯಾಗಬಲ್ಲುದೆ?” ಈ ಮೂಲಕ ಹೋಲಿಕೆಗಳನ್ನು ನೀಡಿ ವಚನ ಕಟ್ಟುವ ರೀತಿ ಆಕರ್ಷಣೀಯವಾದುದು.

"ಹೆದರದಿರು ಮನವೆ, ಹಿಮ್ಮೆಟ್ಟದಿರು ಮನವೆ
ಹಿಡಿದ ಛಲವ ಬಿಡದಿರು ಮನವೆ"[೬]

ಎಂದು ತನುಮನ ಭಾವಗಳನ್ನು ಶುದ್ಧಗೊಳಿಸಿಕೊಂಡು ಛಲದಿಂದ ಮುನ್ನಡೆದ ಆಕೆ ಸಾಧನೆಯಿಂದ ಅರಿವನ್ನೇ ಗುರುವನ್ನಾಗಿ ಮಾಡಿಕೊಳ್ಳುತ್ತಾಳೆ.

ಸಂಖ್ಯೆಯ ದೃಷ್ಟಿಯಿಂದ ರಾಯಮ್ಮನ ವಚನಗಳ ಗುಣ ಹೆಚ್ಚಾಗಿದ್ದರೂ, ಸತ್ವದ ದೃಷ್ಟಿಯಿಂದ ಅಕ್ಕಮಹಾದೇವಿಯ ವಚನಗಳಲ್ಲಿನ ಭಾವತೀವ್ರತೆಯಾಗಲಿ, ಭಕ್ತಿಯ ಆರ್ತತೆಯಾಗಲಿ ಕಾಣಬರುವುದಿಲ್ಲ. ಬದಲಾಗಿ ಶರಣರ ವಚನಗಳ ಪ್ರಭಾವ ದಟ್ಟವಾಗಿ ಕಂಡುಬರುತ್ತದೆ. ಈಕೆಯ ವಚನಗಳಲ್ಲಿ ಹೆಚ್ಚು, ಧೈರ್ಯ, ಛಲ, ನಿಷ್ಠುರತೆ, ಆಧ್ಯಾತ್ಮ, ಸ್ವಾಭಿಮಾನ, ವಿಡಂಬನೆಗಳು ಒಡಮೂಡಿವೆ.

ಈಕೆಯ ವಚನಗಳಲ್ಲಿ ದೃಢಸಂಕಲ್ಪ, ನೇರನುಡಿಗಳು ಕಂಡುಬರುತ್ತವೆ. ವ್ರತಪರಿಪಾಲನೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಲಿಂಗಧಾರಿಗಳಿಲ್ಲದವರನ್ನು ಭವಿಗಳೆಂದು, ಇತರರನ್ನು ಅಜ್ಞಾನಿಗಳೆಂದೂ, ಶಿವಶರಣರೇ ಶ್ರೇಷ್ಠರೆಂದೂ ಹೇಳುತ್ತ, ನಿಜನಾಥ ಮತ್ತು ನಿಜಜ್ಞಾನಕ್ಕೆ ಮತ್ತು ವ್ರತಾಚರಣೆಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾಳೆ. ರಾಯಮ್ಮನ ವಚನಗಳು ಅನುಭವದಿಂದ ಬಂದ ವಚನೆಗಳೇ ಹೊರತು ಅನುಭಾವದಿಂದ ಮೂಡಿಬಂದ ವಚನಗಳಲ್ಲ. ಈಕೆಯ ವಚನಗಳಲ್ಲಿ ಸಾಮಾಜಿಕ ಕಳಕಳಿ, ಲೌಕಿಕ ಅನುಭವಗಳ ಸಾರವೇ ಹೆಚ್ಚಾಗಿ ಕಂಡುಬರುತ್ತದೆ ಎಂದು ಹೇಳಬಹುದು.

ಅಮುಗೆ ರಾಯಮ್ಮನ ಗುರು-ಲಿಂಗ-ಜಂಗಮ ನಿಷ್ಠೆ ಅಪೂರ್ವವಾದುದು. ಈಕೆ ಶರಣಧರ್ಮದ ತಾತ್ವಿಕ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾಳೆ. ಆದರೂ ರಾಯಮ್ಮನ ವಚನಗಳಲ್ಲಿ ವಿಡಂಬನೆಯೇ ಮೂಲ ಆಶಯವಾಗಿದೆ. ಕಟೂಕ್ತಿ ವ್ಯಂಗ್ಯೋಕ್ತಿಗಳೇ ಎದ್ದು ಕಾಣುವ ಅಂಶವಾಗಿದೆ.

ಶರಣೆಯರೆಲ್ಲರೂ ಸತ್ಯಶುದ್ಧ ಕಾಯಕ ಜೀವಿಗಳು. ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ, ಕೊಟ್ಟಣದ ಸೋಮವ್ವೆ, ಕನ್ನಡಿ ಕಾಯಕದ ರೇವಮ್ಮ, ಕದಿರ ಕಾಯಕದ ಕಾಳವ್ವೆ, ಆಯ್ದಕ್ಕಿ ಲಕ್ಕಮ್ಮ ಮುಂತಾದ ಶರಣೆಯರು ಕಾಯಕದಲ್ಲೇ ಕೈಲಾಸ ಕಂಡವರು.

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಹೇಳುವಂತೆ

"ಆವ ಕಾಯಕವ ಮಾಡಿದರೂ ಒಂದೇ ಕಾಯಕವಯ್ಯಾ
ಆವ ವ್ರತವಾದರೂ ಒಂದೇ ವ್ರತವಯ್ಯಾ
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ
ಕಾಕ ಪಿಕದಂತೆ ಕೂಡಲು ನಾಯಕನರಕ
ಗಂಗೇಶ್ವರಲಿಂಗದಲ್ಲಿ"[೭]

ಎಂಬ ಮಾತಿನಂತೆ ತಮ್ಮ ಕಾಯಕದಲ್ಲಿ ಮೇಲು-ಕೀಳು ಭಾವನೆ ತೊರೆದು ಪವಿತ್ರ ಭಾವನೆ ಹೊಂದಿದವರಾಗಿದ್ದರು. ಈಕೆ ಕಾಯಕದ ಮಹತ್ವದೊಂದಿಗೆ ವ್ರತದ ಮಹಿಮೆಯನ್ನು ಎತ್ತಿಹಿಡಿದಿದ್ದಾಳೆ.

ಈಕೆಯ ಮಾತಿನಲ್ಲಿ ತಾನು ಕೀಳು ಕುಲದಿಂದ ಬಂದವಳೆಂಬ ಧ್ವನಿ ಇದ್ದಂತಿದೆ. 'ಗಂಗೇಶ್ವರ' ಎಂಬ ಅಂಕಿತದಲ್ಲಿ ಈಕೆಯ ಒಂದೇ ಒಂದು ವಚನ ದೊರೆತಿದೆ. ಕಾಯಕ ಸಮಾನತೆ, ವ್ರತನಿಷ್ಠೆ ಇದರ ಮುಖ್ಯ ಆಶಯವಾಗಿದೆ. ಎಲ್ಲಾ ಕಾಯಕಗಳಲ್ಲಿ ಸಮಾನ ಗೌರವವನ್ನು ತಾಳಿದ ಗಂಗಮ್ಮ ಎಲ್ಲ ವ್ರತಗಳನ್ನು ಒಂದೇ ಎಂದು ಭಾವಿಸಿದ್ದಾಳೆ. ವ್ರತಭ್ರಷ್ಟರು, ವ್ರತನಿಷ್ಠರನ್ನು ಬೆರೆಯುವುದು 'ಕೋಗಿಲೆ ಕಾಗೆಯ ಸಂಗ ಬೆಳೆಸಿದಂತೆ' ಎನ್ನಿಸುತ್ತದೆ, ಅಂಥವರಿಗೆ ಘೋರ ನರಕ ತಪ್ಪಿದ್ದಲ್ಲ ಎಂದು ಹೇಳುತ್ತಾ ವ್ರತಾಚಾರದ ಮಹತ್ವವನ್ನು ಎತ್ತಿಹಿಡಿಯುತ್ತಾಳೆ.

ಕೊಟ್ಟಣದ ಸೋಮವ್ವೆ

ಕೊಟ್ಟಣ ಕುಟ್ಟುವ ಕಾಯಕದಿಂದ ಗುರುಲಿಂಗ ಜಂಗಮ ಸೇವೆ ಮಾಡುತ್ತಾ ಬಂದ ಕೊಟ್ಟಣದ ಸೋಮವ್ವ ತನ್ನ ವಚನದಲ್ಲಿ ಈ ರೀತಿಯಾಗಿ ಹೇಳಿದ್ದಾಳೆ.

"ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ ಅರಿದು ಬೆರೆದೆನಾದಡೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯ
ಬಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ"[೮]

ಮಾಡುವ ಕಾಯಕವನ್ನು ನಿಷ್ಠೆಯಿಂದ ಮಾಡಿದರೇನೆ ಫಲ ದೊರಕುವುದು, ಇಲ್ಲದಿದ್ದರೆ "ನುಚ್ಚಲ್ಲದೆ ಅಕ್ಕಿಯಿಲ್ಲ" ಎನ್ನುತ್ತಾ ವ್ರತಹೀನನನ್ನು ಸೇರಿದರೆ ನರಕವಲ್ಲದೆ ಮುಕ್ತಿ ದಕ್ಕುವುದಿಲ್ಲ ಎನ್ನುತ್ತಾಳೆ. ಸೋಮವ್ವ ವ್ರತಾಚಾರ ನಿಷ್ಠೆಯನ್ನು ತನ್ನ ಕಾಯಕ ದೃಷ್ಟಾಂತದ ಮುಖಾಂತರ ಪರಿಣಾಮಕಾರಿಯಾಗಿ ನಿರೂಪಿಸಿದ್ದಾಳೆ. ಈಕೆಯ ವಚನದಲ್ಲಿ ಮೊನಚು ಮತ್ತು ಪ್ರಾಮಾಣಿಕತೆ ಕಂಡುಬರುತ್ತದೆ. ಈಕೆಯ ವಚನಗಳ ಅಂಕಿತ 'ನಿರ್ಲಜ್ಜೇಶ್ವರಾ' ಬಹು ವಿಶಿಷ್ಟವಾದುದು.

ಕನ್ನಡಿ ಕಾಯಕದ ರೇವಮ್ಮ

ಕನ್ನಡಿ ಕಾಯಕದ ರೇವಮ್ಮನ ವಚನದಲ್ಲಿ ವ್ರತಾಚಾರ ನಿಷ್ಠೆಯು ಕಂಡುಬರುತ್ತದೆ. ಈಕೆ ತನ್ನ ವೃತ್ತಿ ಉಪಕರಣವಾದ ಕನ್ನಡಿಯನ್ನು ತನ್ನ ವಾದ ಸರಣಿಗೆ ಬಳಸಿಕೊಂಡಿದ್ದಾಳೆ. ಲಿಂಗ, ಜಂಗಮ ಮತ್ತು ಪ್ರಸಾದ ನಿಷ್ಠೆಯನ್ನು ಪ್ರತಿಪಾದಿಸುತ್ತಾಳೆ.

> **"ಕೈಯಲ್ಲಿ ಕನ್ನಡಿಯಿರಲು, ತನ್ನ ತಾ ನೋಡಬಾರದೆ?**
> **ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?**
> **ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ**
> **ಪಡಿಹಾರವ ಪಾದರಕ್ಷೆಯನಿಕ್ಕುವೆ**
> **ಮುಂಡಿಗೆಯನೆತ್ತಿರೊ ಭ್ರಷ್ಟ ಭವಿಗಳಿರಾ।**
> **ಎತ್ತಲಾರದಡೆ ಸತ್ತ ಕುನ್ನಿನಾಯ ಬಾಲವ**
> **ನಾಲಗೆ ಮುರಟಿರೋ ಸದ್ಗುರು ಸಂಗ ನಿರಂಗಲಿಂಗದಲ್ಲಿ"[೯]**

ಎಂಬ ತತ್ತ್ವ ಸಿದ್ಧಾಂತ ಈಕೆಯ ವಚನದಲ್ಲಿ ಕಂಡುಬರುತ್ತದೆ. ಭಕ್ತನಾದವನು ತನ್ನನ್ನು ತಾನು ಅರಿಯಬೇಕಾದರೆ ಗುರು, ಲಿಂಗ, ಜಂಗಮ ಮುಂತಾದ ಸದಾಚಾರಗಳನ್ನು ನಿಷ್ಠೆಯಿಂದ ಪಾಲಿಸಬೇಕು ಎನ್ನುವುದು ರೇವಮ್ಮನ ಅಭಿಮತವಾಗಿದೆ.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಕಾಯಕ, ವ್ರತನಿಷ್ಠೆ ಮತ್ತು ನುಡಿಯಲ್ಲಿ ನಿಷ್ಠೆಗೆ ಹೆಚ್ಚು ಮಹತ್ವ ನೀಡುತ್ತಾಳೆ.

> **"ಕಾಯಕ ತಪ್ಪಿದರೆ ಸೈರಿಸಬಾರದು;**
> **ವ್ರತ ತಪ್ಪಲೆಂತೂ ಸೈರಿಸಬಾರದು**
> **ಕರ್ಮಹರ ಕಾಳೇಶ್ವರಾ"[೧೦]**

ಶರಣ ಶರಣೆಯರ ನಿಯಮವಾದ ಕಾಯಕಕ್ಕೆ ಕಾಳವ್ವೆಯೂ ಪ್ರಾಮುಖ್ಯ ನೀಡಿ, ಅದಕ್ಕಿಂತಲೂ ಹೆಚ್ಚು ಮಹತ್ವವನ್ನು ವ್ರತಕ್ಕೆ ನೀಡುತ್ತಾಳೆ. ವ್ರತವೆಂದರೆ ಬದ್ಧತೆ. ಅಂತಹ ವ್ರತ ತಪ್ಪಿದರೆ ಸೈರಿಸಬಾರದೆನ್ನುತ್ತಾಳೆ.

ಕದಿರ ರೆಮ್ಮವ್ವೆ

ಕದಿರ ರೆಮ್ಮವ್ವೆಯ ವಚನಗಳಲ್ಲಿ ಕಾಯಕದ ಮಹತ್ವ, ವ್ರತ ಹಾಗೂ ನುಡಿಯ ಮಹತ್ವವನ್ನು ಕಾಣಬಹುದು.

> **"ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ**
> **ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು**
> **ನಿಂದ ಬೊಂಬೆ ಮಹಾರುದ್ರ"**
> **"ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲಿ ತಿರುಹಲಾತಿ,**
> **ಸುತ್ತಿತ್ತು ನೂಲು, ಕದಿರು ತುಂಬಿತ್ತು**
> **ರಾಟೆಯ ತಿರುಹಲಾರೆ – ಎನ್ನ ಗಂಡ ಕುಟ್ಟಿಹ**
> **ಇನ್ನೇವೆ; ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ?"**[೧೧]

ರೆಮ್ಮವ್ವೆಯ ಬದುಕಿನ ಸಕಲ ಚಟುವಟಿಕೆಗಳು ಆಕೆಯ ಕಾಯಕ ಮತ್ತು ಲಿಂಗಪೂಜೆ-ಯೊಂದಿಗೆ ಬೆರೆತುಕೊಂಡಿವೆ. ಶುದ್ಧ ಕಾಯಕಜೀವಿಯಾದ ರೆಮ್ಮವ್ವೆ ತನ್ನ ಕೆಲಸದ ಮೂಲ ಸಾಧನವಾದ ರಾಟೆಯ ಪ್ರತಿಯೊಂದು ಕ್ರಿಯೆಯಲ್ಲಿ ಪರಮಾತ್ಮ ಸಂಬಂಧವಾದ ಅನುಭವಕ್ಕೆ ಹೋಲಿಸಿದ್ದಾಳೆ.

ಭಕ್ತಿ, ಜ್ಞಾನ, ವೈರಾಗ್ಯಗಳ ಅನುಭಾವದ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನು ಎಳೆಎಳೆಯಾಗಿ ಬಿಡಿಸಿ ನೂಲನ್ನು ಕದಿರಿನಲ್ಲಿ ಸೇರಿಸುವಂತೆ ಅನುಭಾವವನ್ನು ಸಾಧಿಸಿದ್ದಾಳೆ. ಭಕ್ತಿಯಿಂದ ಕಾಯಕ ನಿರತನಾದರೆ, ಜ್ಞಾನ, ಮುಕ್ತಿ ತಾನಾಗಿ ದೊರಕುತ್ತದೆ ಎಂಬುದನ್ನು ಹೀಗೆ ಸುಂದರ ರೂಪದ ಮೂಲಕ ಸೊಗಸಾಗಿ ವಿವರಿಸಿರುವ ರೆಮ್ಮವ್ವೆ ಕಾಯಕದಲ್ಲಿಯೇ ಕೈಲಾಸವನ್ನು ಕಾಣಬಯಸಿದ ಶರಣೆ.

ಆಯ್ದಕ್ಕಿ ಲಕ್ಕಮ್ಮ

ಕಾಯಕ ಮತ್ತು ದಾಸೋಹಗಳಿಗೆ ಮತ್ತೊಂದು ಹೆಸರೇ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ. ಶರಣರು ರೂಪಿಸಿದ ಕಾಯಕ ಮತ್ತು ದಾಸೋಹ ತತ್ತ್ವಗಳನ್ನು ತನ್ನ ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದ ಲಕ್ಕಮ್ಮ ಒಬ್ಬ ಶಿವಶರಣೆ.

ಕಾಣದ ಕೈಲಾಸದ ಆಸೆಯಿಂದ ಶರಣ ಮಾರಯ್ಯ ಕಾಯಕವನ್ನೆ ಮರೆತು ಕೂತಾಗ ತತ್ತ್ವನಿಷ್ಠ ಶರಣೆ ಲಕ್ಕಮ್ಮ ಆತನನ್ನು ಎಚ್ಚರಿಸಿದ್ದಲ್ಲದೆ, ಕಾಯಕದ ನೇಮವನ್ನು ಸಡಿಲಿಸಿದ ಬಸವಣ್ಣನವರ ವಿರುದ್ಧವೇ ಸಿಡಿದು ನಿಲ್ಲುತ್ತಾಳೆ.

"ಒಮ್ಮನವ ಮೀರಿ, ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ, ಬಸವಣ್ಣನ ಅನುಮಾನ ಚಿತ್ತವೋ" ಎಂದು ಹೇಳುತ್ತ, ಗಂಡನ ಅರಿವಿಗೆ ಕವಿದ ಮಬ್ಬನ್ನು ಹೋಗಲಾಡಿಸಿ ಆತನಿಗೆ ಬುದ್ಧಿ ಹೇಳುವ ರೀತಿ ಅದ್ಭುತವಾದುದು.

"ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ
ರೋಷವೆಂಬುದು ಯಮದೂತರಿಗಲ್ಲದೆ,
ಅಜ್ಞಾತರಿಗುಂಟೇ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ"[೧೨]

ಹೀಗೆ ಯಾವುದೇ ರೀತಿಯ ಆಸೆಯ ಪಾಶಕ್ಕೆ ಬಲಿಯಾಗಬಾರದೆಂದು ಅರಿವು ಮೂಡಿಸುತ್ತಾಳೆ. ಕಾಯಕದಲ್ಲಿ ಮೇಲು-ಕೀಳುಗಳಿಲ್ಲ ಎಂದು ಸಾರಿದ ಲಕ್ಕಮ್ಮ ಶರಣ ಚಳವಳಿಯ ಕಾಯಕ ತತ್ತ್ವ ಮೌಲ್ಯಗಳಿಗೆ ಜೀವಂತ ಉದಾಹರಣೆಯಾಗಿ ನಿಂತಳು. ಲಕ್ಕಮ್ಮನ ಅಭಿವ್ಯಕ್ತಿ, ಅಸಂಗ್ರಹ ತತ್ತ್ವದ ಪ್ರತಿಪಾದನೆಗೆ, ಕಾಯಕ ತತ್ತ್ವದ ಶ್ರದ್ಧೆಗೆ, ಈ ವಚನವು ಅತ್ಯುತ್ತಮ ನಿದರ್ಶನವಾಗಿದೆ.

ಶರಣೆಯರು ವ್ರತಾಚರಣೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದವರು, ಯಾವುದೇ ಕಾರಣಕ್ಕೂ ವ್ರತಭ್ರಷ್ಟರಾಗುವುದಾಗಲಿ, ವ್ರತಭ್ರಷ್ಟರೊಡನೆ ಸೇರುವುದಾಗಲಿ ಅವರಿಗೆ ಇಷ್ಟವಾಗದ ವಿಷಯ ವ್ರತಭ್ರಷ್ಟರ ಬಗೆಗೆ ಅತೀವ ರೋಷ, ಕೆಚ್ಚುಗಳು ಈ ಶರಣೆಯರ ವಚನಗಳಲ್ಲಿ ಕಂಡುಬರುವ ಅಂಶವಾಗಿದೆ.

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ ವೀರಶೈವ ಸಿದ್ಧಾಂತದ ಬಯಲು ತತ್ತ್ವವನ್ನು ಒಂದೇ ಸಾಲಿನಲ್ಲಿ ಹೀಗೆ ವಿಶ್ಲೇಷಿಸುತ್ತಾಳೆ.

"ತನು ಬತ್ತಲೆಯಾದಡೇನು
ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನನಾದ ಬಳಿಕ?
ನೆರೆದಡೆ ನರಕವಯ್ಯಾ ನಿಂಬೇಶ್ವರಾ"[೧೩]

ಎನ್ನುವ ಗುಡ್ಡವ್ವೆ ಹೊರಗಿನ ಆಚಾರಗಳಿಗಿಂತ, ಒಳಗಿನ ಅಂದರೆ, ಅಂತರಂಗದ ವಿಚಾರಗಳು ಶುದ್ಧವಾಗಿರಬೇಕು ಎಂಬುದಕ್ಕೆ ಒತ್ತು ನೀಡುತ್ತಾಳೆ. ಅದರಲ್ಲೂ ಇವಳು ಹೇಳುವ ರೀತಿ ವಿಶಿಷ್ಟವಾಗಿದೆ. ಈಕೆಯ ವಚನದಲ್ಲಿ ಆಚಾರ ನಿಷ್ಠೆಯು ವ್ಯಕ್ತಗೊಂಡಿದೆ. 'ವ್ರತವಿದ್ದಡೇನು, ವ್ರತಹೀನನಾದ ಬಳಿಕ' ಎಂಬುದನ್ನು ಸೂತ್ರಬದ್ಧವಾಗಿ ಪ್ರಶ್ನಿಸುತ್ತಾಳೆ.

ವ್ರತಹೀನತೆಯನ್ನು ದೂರೀಕರಿಸುವುದರ ಜೊತೆಗೆ, ಮಾನಸಿಕ ಶುಚಿತ್ವವನ್ನು ಸಾರಿದ್ದಾಳೆ. ವ್ರತಹೀನನ ಸಂಗ ಮಾಡಿದರೆ ನರಕಕ್ಕೆ ದಾರಿ ಎನ್ನುವ ಗುಡ್ಡವ್ವೆಯ ಪ್ರತಿಪಾದನೆ ವಿಶಿಷ್ಟವಾಗಿದೆ.

ಮುಕ್ತಾಯಕ್ಕ

'ಮುಕ್ತಾಯಕ್ಕ' ಅನುಭಾವದ ಎತ್ತರಕ್ಕೇರಿದ ಮಹಾಶರಣೆ. ಉತ್ತಮ ನಡೆನುಡಿಗಳು, ಆಚಾರವಿಚಾರಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುವ ಮುಕ್ತಾಯಕ್ಕ ಪ್ರತಿಯೊಬ್ಬ ಸಾಧಕನೂ ತನ್ನ ಬದುಕಿನಲ್ಲಿ ಇವುಗಳನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿರುವಳು. ಆ ಮೂಲಕ ಪೂರ್ಣಜ್ಞಾನ ಪಡೆಯಬಹುದು ಎಂಬ ನಿಲುವು ಈ ಶರಣೆಯದಾಗಿದೆ.

"ನುಡಿಯಲು ಬಾರದು ಕೆಟ್ಟನುಡಿಗಳ
ನಡೆಯಲು ಬಾರದು ಕೆಟ್ಟನಡೆಗಳ
ನುಡಿದರೇನು, ನುಡಿಯದಿರ್ದರೇನು
ಹಿಡಿದ ವ್ರತವ ಬಿಡದಿರಲು ಅದೇ ಮಹಾಜ್ಞಾನಾದಾಚರಣೆ
ಎಂಬೆನು ಅಜಗಣ್ಣ ತಂದೆ।"[೧೪]

ನಡೆನುಡಿಯ ಶುದ್ಧತೆಗೆ ಮಹತ್ವವನ್ನು ನೀಡುವ ಮುಕ್ತಾಯಕ್ಕ ಸಾಧಕನು ನೈತಿಕ ಬಲದಿಂದ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಪ್ರತಿಪಾದಿಸಿರುವಳು. ಈಕೆಯ ಕೆಲವು ವಚನಗಳಲ್ಲಿ ಭಾವಪೂರ್ಣ ಸೊಗಸು ಕಂಡುಬರುತ್ತದೆ. ಈಕೆಯ ವಚನಗಳಲ್ಲಿ ಬೌದ್ಧಿಕ, ತಾತ್ವಿಕ ವಿಷಯಗಳ ಪ್ರತಿಪಾದನೆಯೆ ಹೆಚ್ಚಾಗಿದೆ.

ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಈಕೆಯ ವಚನಗಳಲ್ಲಿ ಭಕ್ತನ ಲಕ್ಷಣ, ಕಾಯಕನಿಷ್ಠೆ ವ್ರತಾಚರಣೆಯ ಮಹತ್ವ ಮುಖ್ಯ ಅಂಶಗಳಾಗಿ ಕಂಡುಬರುತ್ತವೆ. ದಲಿತ ವಚನಕಾರ್ತಿಯಾದ ಕಾಳವ್ವೆಯ ವಚನಗಳಲ್ಲಿ ಜಾತಿ ವ್ಯವಸ್ಥೆಯಿಂದ, ಅಸ್ಪೃಶ್ಯ ಆಚರಣೆಗಳಿಂದ ಅಪಮಾನಿತಗೊಂಡ ನೊಂದ ಮನಸ್ಸಿನ ಆಕ್ರೋಶ

ತುಂಬಿದೆ. ಕೀಳುಕುಲವೆಂಬ ಅಪಮಾನಕ್ಕೆ ಗುರಿಯಾದವರ ಪರವಾಗಿ ಮಾತನಾಡುವ ಕಾಳವ್ವೆಯು ತನ್ನೆಲ್ಲ ವಚನಗಳಲ್ಲಿಯೂ ವ್ರತಾಚಾರಗಳ ಬಗ್ಗೆ, ಕಾಯಕದ ಬಗ್ಗೆ, ಅಸಮಾನತೆ, ಜಾತೀಯತೆ, ಪುರೋಹಿತಶಾಹಿ ವ್ಯವಸ್ಥೆಯ ಬಗ್ಗೆ ಸಿಡಿದಿದ್ದಾಳೆ. ನೊಂದು ಬೆಂದು ಬಂದ ಈ ನುಡಿಗಳಲ್ಲಿ ಯಾರೂ ಅಳಿಸಲಾಗದ ದಟ್ಟ ಸತ್ಯ ಅಡಗಿದೆ.

ಕಾಯಕದ ಬಗೆಗೆ, ಭಕ್ತರ ಬಗೆಗೆ ತನ್ನ ವಚನವೊಂದರಲ್ಲಿ ಹೀಗೆ ಹೇಳುತ್ತಾಳೆ.

“ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯಮುಕ್ತಿ
ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಿಲ್ಲ ಕಾಣವ್ವಾ”[೧೫]

ಈಕೆ ಯಜ್ಞ-ಯಾಗಾದಿಗಳ ಹೆಸರಿನಲ್ಲಿ ಜೀವಹಿಂಸೆಗೈಯ್ಯುವುದನ್ನು ಅತ್ಯಂತ ಕಟುವಾಗಿ ಟೀಕಿಸುತ್ತಾಳೆ. ಕಾಳವ್ವೆಯ ಅಭಿವ್ಯಕ್ತಿಯಲ್ಲಿ ನೊಂದವರ ನೋವಿನ ಧ್ವನಿ ಇದೆ. ಒಬ್ಬ ಸಾಮಾನ್ಯ ಹೆಣ್ಣು ವ್ಯವಸ್ಥೆಯ ಎದುರು ಇಷ್ಟು ದಿಟ್ಟತನದಿಂದ ಧ್ವನಿಯೆತ್ತಿ ಮಾತನಾಡಿದ್ದು ಶರಣ ಚಳವಳಿ ನೀಡಿದ ಸ್ವಾತಂತ್ರ್ಯಕ್ಕೆ ಉದಾಹರಣೆ ಎನ್ನಬಹುದು. ಶತಮಾನಗಳಿಂದ ಪ್ರಶ್ನಾತೀತವಾಗಿದ್ದ ಜಾತಿ ವ್ಯವಸ್ಥೆಯನ್ನು, ದೌರ್ಜನ್ಯವನ್ನು ಪ್ರತಿಭಟಿಸುವ ಕಾಳವ್ವೆಯ ವಚನಗಳು ಅವಳ ಎದೆಗಾರಿಕೆಗೆ, ಕೆಚ್ಚಿಗೆ ಸ್ಪಷ್ಟ ನಿದರ್ಶನಗಳಾಗಿವೆ.

“ಕುರಿಕೋಳಿ, ಕಿರಿಮೀನು ತಿಂಬವರಿಗೆಲ್ಲ ಕುಲಜಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳುಜಾತಿಯಾದರು? ಜಾತಿಗಳ ನೀವೇಕೆ ಕೀಳಾಗಿರೊ?”[೧೬]

ಕದಿರ ಕಾಯಕದ ಕಾಳವ್ವೆ

ಕದಿರ ಕಾಯಕದ ಕಾಳವ್ವೆಯ ವಚನಗಳು ವ್ರತನಿಷ್ಠೆಯ ಮೌಲ್ಯವನ್ನು ಸಾರುತ್ತವೆ. ಕದಿರಿನಿಂದ ನೂಲು ತೆಗೆಯುವ ಕಾಯಕದವಳಾದ ಈಕೆ ಕದಿರು ಮುರಿಯಲು ಕಾರ್ಯ ನಿಲ್ಲುವಂತೆ ವ್ರತಹೀನನನ್ನು ಕೂಡಿದರೆ ಜೀವನ ವ್ಯರ್ಥ ಎನ್ನುವ ಆಶಯ ಈಕೆಯ ವಚನದಲ್ಲಿದೆ. ಈಕೆಯ ವಚನ ಹೀಗಿದೆ:

“ಕದಿರು ಮುರಿಯೆ ಏನೂ ಇಲ್ಲ
ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರ”[೧೭]

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆಯ ವಚನಗಳ ವ್ರತಾಚಾರವನ್ನು, ಧರ್ಮಶ್ರದ್ಧೆ-ಯನ್ನು, ಲಿಂಗನಿಷ್ಠೆಯನ್ನು, ಭಾವಶುದ್ಧಿಯನ್ನು ಪ್ರತಿಪಾದಿಸುತ್ತವೆ. ವ್ರತಹೀನನನ್ನು ಕುರಿತ ಆಕೆಯ ವಚನ ಈ ರೀತಿಯಾಗಿದೆ.

"ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಬೇಶ್ವರಾ"[೧೮]

ಈಕೆ ತನ್ನ ವಚನಗಳ ಉದ್ದಕ್ಕೂ ಕಾಯಕದ ಸಂಕೇತವನ್ನು ಧ್ವನಿಪೂರ್ಣವಾಗಿ ಬಳಸಿಕೊಂಡಿದ್ದಾಳೆ. ಅಕ್ಕ ನಾಗಮ್ಮ ಆಚಾರದ ಪ್ರಾಮುಖ್ಯತೆಯನ್ನು ಎತ್ತಿಹಿಡಿದಿರುವ ರೀತಿ ವಿಶಿಷ್ಟವಾದುದಾಗಿದೆ.

ಸತ್ಯಕ್ಕ

ಸತ್ಯಕ್ಕನ ವಚನಾಂಕಿತ 'ಶಂಭುಜಕ್ಕೇಶ್ವರಾ'. ಈಕೆಯ ಒಂದುಪ್ರಸಿದ್ಧ ವಚನ ಈ ರೀತಿಯಾಗಿದೆ.

"ಲಂಚವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈಮುಟ್ಟಿ ಎತ್ತಿರೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ,
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ"[೧೯]

ಸತ್ಯಕ್ಕ ಏಕದೇವತಾ ನಿಷ್ಠೆಗೆ ಹೆಸರಾದ ಶರಣೆ. ಶುಚಿಯಾದ ಬದುಕು, ನೇಮ ಎಂದರೇನು ಎಂಬುದನ್ನು ಸೂತ್ರಬದ್ಧವಾಗಿ ಹೇಳಿರುವಳು. ಸರಳವಾದ ಬದುಕಿನ ನಡೆನುಡಿಗಳು ಆಚಾರ-ವಿಚಾರಗಳು ಈಕೆಯ ವಚನಗಳಲ್ಲಿ ಕಂಡುಬರುತ್ತವೆ. ಪರಧನ, ಪರಸ್ತ್ರೀ, ಪರದೈವ

ಯಾವುದೇ ಫಲಾಪೇಕ್ಷೆಯಿಲ್ಲದೆ ಚಿತ್ತಶುದ್ಧಿಯಿಂದ ಆಚರಿಸುವುದೇ ವ್ರತ ಎಂದು ಪ್ರತಿಪಾದಿಸಿರುವಳು. ಈಕೆ ತೋರಿಕೆಯ ಪೂಜೆಯನ್ನು ಖಂಡಿಸಿದ್ದಾಳೆ. ಸತ್ಯಕ್ಕನದು ದೃಢ ನಿಲುವಿನ ನಿಷ್ಠೆಯ ಭಕ್ತಿಯಾಗಿದೆ.

ಸೂಳೆ ಸಂಕವ್ವೆ

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನವನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ"[೨೦]

ಎಂಬ ಸೂಳೆ ಸಂಕವ್ವೆಯ ವಚನ ಅವಳ ನಿಯತ್ತಿನ ಬದುಕಿನ ಪ್ರಾಮಾಣಿಕ ಚಿತ್ರ ಮೂಡಿಸಿ ನಿಂತಿದೆ. ಜೊತೆಗೆ ಏಕದೇವ ನಿಷ್ಠೆಯ ಧ್ವನಿಯೂ ಕೇಳಿಬರುತ್ತದೆ.

"ವ್ರತಹೀನನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕಿವಿ ಮೂಗ ಕೊಯ್ವರಯ್ಯ"[೨೧]

ಎಂಬಲ್ಲಿ ವ್ರತಹೀನನನ್ನು ಅರಿತು ಬೆರೆತವರಿಗೆ ಒದಗುವ ಕಠಿಣ ಶಿಕ್ಷೆ, ಆ ಕಾಲಕ್ಕೆ ವ್ರತಾಚಾರಕ್ಕಿದ್ದ ಮಹತ್ವ ವ್ಯಕ್ತವಾಗಿದೆ. ಸರಳ ದೇಶೀ ನುಡಿಗಳಲ್ಲಿ ಒಡಮೂಡಿದ ಸಾಮಾನ್ಯ ಸ್ತ್ರೀಯೊಬ್ಬಳ ಈ ಸಹಜ ಅಭಿವ್ಯಕ್ತಿ ಅಪೂರ್ವವೆನಿಸಿದೆ.

ಸೂಳೆ ಸಂಕವ್ವೆಯು ತನ್ನ ವೃತ್ತಿಯ ಅನುಭವದ ಹಿನ್ನೆಲೆಯಲ್ಲಿ ನಿರ್ಭೀತಿಯಿಂದ ತನ್ನ ಅಭಿವ್ಯಕ್ತಿಯನ್ನು ಸಾಧಿಸಿರುವುದು ಗಮನಾರ್ಹವಾದುದು. ಈಕೆಯ ವಚನದಲ್ಲಿ ವ್ರತಹೀನರ ಟೀಕೆ ಕಂಡುಬಂದರೂ, ಪ್ರಸ್ತಾಪಿಸಿರುವ ಸಂಗತಿಗಳು ವ್ರತಾಚಾರಕ್ಕಿರುವ ಮಹತ್ವ ಮತ್ತು ವ್ರತಹೀನರನ್ನು ಕೂಡಿದರೆ ಆಗಬಹುದಾದ ಶಿಕ್ಷೆಯ ಸ್ವರೂಪವನ್ನು ಚಿತ್ರಿಸುತ್ತದೆ. ಸಮಾಜದಲ್ಲಿ ಅವಮಾನಗಳಿಗೆ ಗುರಿಯಾಗಿ ಅಗೋಚರ ನೆಲೆಯಲ್ಲಿ ಜೀವಿಸುತ್ತಿದ್ದ ಅವಮಾನಿತ ವರ್ಗಗಳಲ್ಲಿ ಶರಣ ಚಳವಳಿ ಮೂಡಿಸಿದ ಎಚ್ಚರಕ್ಕೆ ಸೂಳೆಸಂಕವ್ವೆ ನಿದರ್ಶನ.

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ

ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ ದಲಿತ ವರ್ಗದ ಶರಣೆ "ಹಡಪದಪ್ಪಣ್ಣನೇ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು. ಚೆನ್ನಮಲ್ಲೇಶ್ವರನೇ ಎನ್ನ ಮನಸ್ಥಲಕ್ಕೆ

ಪ್ರಾಣವಾಗಿ ಬಂದು ಮೂರ್ತಿಗೊಂಡನು" ಎಂದು ಆತನನ್ನು ನೆನೆದು, ತನ್ನ ಗುರುಭಕ್ತಿಯನ್ನು ಪ್ರಕಟಿಸಿದ್ದಾಳೆ.

ಈಕೆಯ ವಚನಗಳಲ್ಲಿ ತತ್ತ್ವಬೋಧೆಯೇ ಮುಖ್ಯವಾಗಿ ಕಂಡುಬರುತ್ತದೆ. ಈಕೆಯ ವಚನಗಳಲ್ಲಿ ಕಾವ್ಯಗುಣ ಕಡಿಮೆ. ಬದಲಾಗಿ ಹೆಚ್ಚಿನ ವಚನಗಳು ಗದ್ಯಾತ್ಮಕ ಗುಣವನ್ನು ಹೊಂದಿವೆ. ಮನದ ಚಂಚಲತೆ, ಗುರುಲಿಂಗ ಜಂಗಮ ಭಕ್ತಿ, ಶರಣರ ನಡೆನುಡಿ, ಆಚಾರ, ತೋರಿಕೆಯ ಭಕ್ತಿ, ಡಾಂಭಿಕರ ಅವಹೇಳನ, ತನ್ನ ಸಾಧನೆಯ ರೀತಿ ಇವೆಲ್ಲವೂ ಲಿಂಗಮ್ಮನ ವಚನಗಳಲ್ಲಿ ಕಾಣುವ ಮುಖ್ಯ ವಿಷಯಗಳಾಗಿವೆ.

"ನಾನೊಂದು ಹಾಳೂರಿಗೆ ಹೋಗುತ್ತಿರಲು, ಆ ಹಾಳೂರ ಹೊಕ್ಕಡೆ,
ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು.
ಹುಲಿ ಕರಡಿ ಅಡ್ಡಲಾದವು
ಇವ ಕಂಡು ನಾ ಹೆದರಿಕೊಂಡು
ನನ್ನ ಕೈಗೊಂದು ಕಲ್ಲ ತೆಕ್ಕೊಂಡು ನೋಡುತ್ತ ಬರುತ್ತಿರಲು,
ಆ ನಾಯಿಗಳು ಓಡಿಹೋದವು.
ಹುಲಿ ಕರಡಿಗಳು ಅಲ್ಲಿಯೇ ಬಯಲಾದವು
ಆ ಊರು ನಿರ್ಮಲವಾಯಿತು
ಆ ನಿರ್ಮಲವಾದ ಊರ ಹೊಕ್ಕು ನೋಡಲು,
ಆ ನೋಡುವ ನೋಟವು, ಆ ಊರನಾಳುವ ಅರಸು,
ಆ ಊರು ಕೂಡಿ ಒಂದಾದವು
ಆ ಒಂದಾದುದನೆ ನೋಡಿ, ದ್ವಂದ್ವವನೆ ಹರಿದು
ನಿಮ್ಮ ಸಂಗಸುಖದೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ"[೨೮]

'ನಾನೊಂದು ಹಾಳೂರಿಗೆ ಹೋಗುತ್ತಿಲು' 'ಬಟ್ಟಬಯಲು', 'ಮಹಾಬೆಳಗು' – ಮೊದಲಾದ ಪದಗಳು ಲಿಂಗಮ್ಮ ಶರಣತತ್ತ್ವ ಪರಿಭಾಷೆಯನ್ನು ಮೈಗೂಡಿಸಿಕೊಂಡಿರುವುದಕ್ಕೆ ನಿದರ್ಶನವೆನಿಸಿವೆ. ಲಿಂಗಮ್ಮನ ವಚನಭಾಷೆ, ತತ್ತ್ವ ನಿರೂಪಣೆಯು ಬೆಡಗಿನಿಂದ ಕೂಡಿದ್ದರೆ, ಟೀಕಿಸುವಲ್ಲಿ ಸರಳ, ದೇಸಿ ಸೊಗಡಿನಿಂದ ಕೂಡಿದೆ.

ಕೀಳುಕುಲದಲ್ಲಿ ಹುಟ್ಟಿಬಂದ ಲಿಂಗಮ್ಮ ತನ್ನ ಕುಲದ ಸೂತಕವನ್ನು ಶರಣರ ಸಂಗದಿಂದ ಕಳೆದುಕೊಳ್ಳುತ್ತಾಳೆ. ಆದರೂ ಯಾವುದೇ ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುವಲ್ಲಿ ಆಕೆಯ ಪ್ರಾಮಾಣಿಕತೆ ಎದ್ದುತೋರುತ್ತದೆ.

ಮೋಳಿಗೆ ಮಹಾದೇವಿ

ಮೋಳಿಗೆ ಮಹಾದೇವಿಯ ವಚನದಲ್ಲಿ ತೀವ್ರವಾದ ಅಧ್ಯಾತ್ಮಪ್ರಜ್ಞೆಯನ್ನು ಕಾಣಬಹುದು. ಇಷ್ಟಲಿಂಗ, ಪ್ರಾಣಲಿಂಗಗಳ ಪರಸ್ಪರ ಸಂಬಂಧ, ಷಟ್‌ಸ್ಥಲಗಳ ಸ್ವರೂಪ ಮೊದಲಾದವುಗಳ ತಾತ್ತ್ವಿಕ ವಿವೇಚನೆ ಈಕೆಯ ವಚನಗಳಲ್ಲಿ ಕಂಡುಬರುತ್ತದೆ.

ಮೋಳಿಗೆ ಮಹಾದೇವಿ ಅಪ್ರತಿಮ ಜ್ಞಾನಿ. ಕೈಲಾಸಕ್ಕೆ ಹೋಗಬೇಕೆಂದು ಬಯಸಿದ ಪತಿಯನ್ನು ತಿದ್ದಿ ತಿಳಿಯಹೇಳಿ, ಕಾಯಕಕ್ಕೆ ಹಚ್ಚಿದ ಶರಣೆ. ಅರಿವಿನ ಬಗ್ಗೆ ತಾತ್ತ್ವಿಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾಳೆ. ಕ್ರಿಯೆಯಿಲ್ಲದ ಜ್ಞಾನ ಅರ್ಥರಹಿತವಾದದ್ದು ಎಂದು ಪ್ರತಿಪಾದಿಸಿದ್ದಾಳೆ.

"ನೀರು ನೆಲವಿಲ್ಲದೆ ಇರಬಹುದೆ?
ಬೀಜ ನೆಲೆಯಿಲ್ಲದೆ ಹುಟ್ಟಬಹುದೆ?
ಜ್ಞಾನ ಕ್ರಿಯೆಯಿಲ್ಲದೆ ಅರಿಯಬಹುದೆ?
ಚಿತ್ತ ಚಿತ್ತುವಿಲ್ಲದೆ ವಸ್ತುವ ಲಕ್ಷಿಸಿ ಗ್ರಹಿಸಬಲ್ಲುದೆ?
ಇಂತಿ ಶ್ರೀಜ್ಞಾನ ಸಂಬಂಧಸ್ಥಲಭಾವ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಉಭಯ ಸ್ಥಲಭೇದ"[೨೩]

ಕ್ರಿಯೆ, ಜ್ಞಾನಗಳೆರಡು ಅವಿನಾಭಾವವಾದುವು. ಜ್ಞಾನವು ಕ್ರಿಯಾಮೂಲವಾದುದು. ನೀರು ನೆಲವಿಲ್ಲದೆ ಇರಲಾರದು. ಹಾಗೆಯೇ ಬೀಜ ನೆಲವಿಲ್ಲದೆ ಹುಟ್ಟಲಾರದು, ಅದರಂತೆಯೇ ಜ್ಞಾನವು ಕ್ರಿಯೆಯ ಆಧಾರವಿಲ್ಲದೆ ಉಳಿಯದು. ಜ್ಞಾನ ಮತ್ತು ಕ್ರಿಯೆಗಳೆರಡೂ ಸಮರಸವಾದ ಸಂಬಂಧವನ್ನು ಹೊಂದಿವೆ. ಹಾಲು ನೀರಿದ್ದಂತೆ ಅರಿವು ಮತ್ತು ಕ್ರಿಯೆಗಳು ಬೆರೆತಿರಬೇಕು ಎಂದು ಜ್ಞಾನ ಕ್ರಿಯೆಯ ಮಹತ್ವವನ್ನು ಕುರಿತು ಹೇಳಿದ್ದಾಳೆ.

ಮಹಾದೇವಿ, ತನ್ನ ಪತಿಗೆ ಆಧ್ಯಾತ್ಮಿಕ ಸಲಹೆ, ಉಪದೇಶ ನೀಡಿ ಗುರುಸ್ಥಾನದಲ್ಲಿ ನಿಲ್ಲುವಂತಹ ಪತ್ನಿ "ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹನೆಂಬುದು ಕೈಕೂಲಿ". ಕಾಯಕವೇ ಕೈಲಾಸವೆಂದ ಮೇಲೆ ಮತ್ತೆ ಬೇರೆ ಕೈಲಾಸವುಂಟೇ ಎಂದು ಪ್ರಶ್ನಿಸಿ, ತನ್ನ ಪತಿ ಮಾರಯ್ಯನ ಕೈಲಾಸಕ್ಕೆ ಹೋಗಬೇಕೆಂಬ ಬಯಕೆಗೆ ಕಡಿವಾಣ ಹಾಕುತ್ತಾಳೆ.

ಈಕೆಯ ವಚನಗಳಲ್ಲಿ ಗಂಭೀರವಾದ ತಾತ್ತ್ವಿಕ ವಿಚಾರಗಳೇ ವಸ್ತುವಾಗಿದೆ. ವಚನ ರಚನೆಯಲ್ಲಿ ಅಷ್ಟಾಗಿ ಸಹಜತೆ ತೋರದಿದ್ದರೂ ತನ್ನ ತೀವ್ರವಾದ ಅಧ್ಯಾತ್ಮಪ್ರಜ್ಞೆಯಿಂದಾಗಿ ಮೋಳಿಗೆ ಮಹಾದೇವಿ ಇತರ ಶರಣೆಯರಿಂದ ಭಿನ್ನಳಾಗಿ ತೋರುತ್ತಾಳೆ.

ಬೊಂತಾದೇವಿ

ಬೊಂತಾದೇವಿಯ ವಚನಗಳಲ್ಲಿ ಚಿಂತನಶೀಲ ಗುಣಗಳಿವೆ. 'ಮಾನವರೆಲ್ಲ ಸಮಾನರು' ಎಂಬ ಆಶಯ ಈಕೆಯದು. ಶ್ರೇಷ್ಠ-ಕನಿಷ್ಠ, ಮೇಲು-ಕೀಳು ಎಂಬ ತಾರತಮ್ಯಗಳನ್ನು ಬೊಂತಾದೇವಿ ಖಂಡಿಸುತ್ತಾಳೆ. 'ಬಿಡಾಡಿ' ಎಂಬ ಈಕೆಯ ವಚನಗಳಲ್ಲಿ ಶಿವನ ಸ್ವರೂಪ, ಅವನ ಅನಂತತೆಯನ್ನು ಎತ್ತಿಹಿಡಿಯಲಾಗಿದೆ. ಈಕೆಯ ವಚನಗಳು ವೀರವೈರಾಗ್ಯ, ಗುಪ್ತಭಕ್ತಿಗಳನ್ನು ಪ್ರಕಟಿಸುತ್ತದೆ.

"ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಲ್ಲಿ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ"[೨೦]

ಈ ವಚನವು ಬೊಂತಾದೇವಿಯ ಆಧ್ಯಾತ್ಮಿಕ ಸಾಧನೆ, ಸಮತಾಭಾವ ಹಾಗೂ ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ.

ಗೊಗ್ಗವ್ವೆ

ಗೊಗ್ಗವ್ವೆ ಒಬ್ಬ ಪ್ರಜ್ಞಾವಂತ ದಿಟ್ಟ ವಚನಕಾರ್ತಿ, ಸ್ತ್ರೀ-ಪುರುಷ ಸಮಾನತೆಯು ಈಕೆಯ ವಚನಗಳಲ್ಲಿ ಕಂಡುಬರುತ್ತದೆ. ಗೊಗ್ಗವ್ವೆಯ ವಚನಾಂಕಿತ 'ನಾಸ್ತಿನಾಥ' ಎಂಬುದಾಗಿದೆ. 'ಗಂಡು ಮೋಹಿನಿ ಹೆಣ್ಣ ಹಿಡಿದಡೆ' ಎಂಬ ವಚನದಲ್ಲಿ ಹೆಣ್ಣುಗಂಡುಗಳಿಗೆ' ಪರಸ್ಪರ ಮೋಹಿಸುವ ಭಾವಸ್ವಾತಂತ್ರ್ಯವಿದೆ ಎನ್ನುವುದನ್ನು ಒಪ್ಪುತ್ತಾಳೆ. ಹನ್ನೆರಡನೆಯ ಶತಮಾನದ ಶಿವಭಕ್ತೆಯ ಈ ಮಾತುಗಳು ಅಚ್ಚರಿಮೂಡಿಸುತ್ತವೆ. ಸಮಾನತೆಯ ತತ್ತ್ವವನ್ನು ಹೇಳುವ ಗೊಗ್ಗವ್ವೆ ಏಕಕಾಲಕ್ಕೆ ಹನ್ನೆರಡನೆಯ ಶತಮಾನವನ್ನು ಮತ್ತು ಆಧುನಿಕ ವಿಚಾರಧಾರೆಗಳನ್ನು ಪ್ರತಿನಿಧಿಸುತ್ತಾಳೆ.

ಗೊಗ್ಗವೆಯು ಕಾಯಕ ನಿಷ್ಠಳು, ಭಾವರಹಿತಳು, ಲಿಂಗತತ್ತ್ವದ ಸಿದ್ಧಾಂತವನ್ನು ದೇವರಲ್ಲಿ ಒಂದಾಗುವ ಬಗೆಯನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾಳೆ.

"ಮಾರುತದಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮೆಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ"[೨೧]

ಅನುಭಾವದ ಹಾದಿಯು ಮಾರುತನಲ್ಲಿ ಬೆರೆದ ಗಂಧದಂತೆ, ಸುರತದಲ್ಲಿ ಬೆರೆತ ಸುಖದಂತೆ, ಮೆಚ್ಚಿದಲ್ಲಿ ಕೊಡುವ ಉಚಿತದಂತಿದ್ದು ಈ ಹಾದಿಯಲ್ಲಿ ಪಯಣಿಸುವ ಸಾಧಕ, ಅಂತ್ಯದಲ್ಲಿ ದೇವನೊಡನೆ ಒಂದಾಗುತ್ತಾನೆ ಎನ್ನುವ ಗೊಗ್ಗವ್ವೆ ಅಂಗಾಂಗ ಸಾಮರಸ್ಯ ಸುಖದ ಸವಿಯನ್ನು ವರ್ಣಿಸಿದ್ದಾಳೆ. ಭಕ್ತನಿಗೂ, ಲಿಂಗಕ್ಕೂ ಭೇದವಿರುವಂತೆ ಉಂಟಾಗುವ ಐಕ್ಯದ ಲಕ್ಷಣವನ್ನು ಗೊಗ್ಗವ್ವೆ ಈ ವಚನದಲ್ಲಿ ಉಪಮೆಗಳ ಮೂಲಕ ವಿವರಿಸುತ್ತಾಳೆ.

ದುಗ್ಗಳೆ

ದುಗ್ಗಳೆ ಕನ್ನಡದ ಮೊತ್ತಮೊದಲ ವಚನಕಾರ್ತಿ, ಲೇಖಕಿ, ಕವಯಿತ್ರಿ ಎಲ್ಲವು ಆಗಿರುವಳು. ಕಾಯಕ ನಿಷ್ಠಳಾದ ಈಕೆ ಮಹಾ ಮಾನವತಾವಾದಿ, ದಾಸೋಹ ಭಾವವೇ ಅವಳ ಉಸಿರಾಗಿತ್ತು, ಭಕ್ತಿಯ ಆಚರಣೆಯು ಆಕೆಯ ವಚನಗಳಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ.

ನೀಲಮ್ಮ

ನೀಲಮ್ಮ (ನೀಲಾಂಬಿಕೆ) ಈಕೆಯ ವಚನಾಂಕಿತ 'ಸಂಗಯ್ಯ' ಎಂಬುದಾಗಿದೆ. ಬಸವಣ್ಣನವರ ಪತ್ನಿಯಾದ ನೀಲಮ್ಮನ ಬಹುಪಾಲು ವಚನಗಳೆಲ್ಲವೂ ಬಸವ ಭಕ್ತಿ, ಬಸವನಿಷ್ಠೆ, ಬಸವಾನುಭಾವದ ಪರಾಮರ್ಶೆ ಮತ್ತು ಬಸವಣ್ಣನವರ ಅಗಲಿಕೆಯ ತೀವ್ರ ದುಃಖದ ಅಭಿವ್ಯಕ್ತಿಯಾಗಿವೆ. 'ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ' ಎಂಬ ಮಾತು ಆಕೆಯ ದೊಡ್ಡತನಕ್ಕೆ ಸಾಕ್ಷಿಯಾಗಿದೆ.

ಬಸವಣ್ಣನ ವಿಚಾರ ಪತ್ನಿಯಾದ ನೀಲಮ್ಮನು ಆಧ್ಯಾತ್ಮಿಕ ನೆಲೆಯಲ್ಲಿ ಹೆಣ್ಣು ಗಂಡು ಭೇದವಳಿದು ವರ್ತಿಸುವ ಬಗೆಯನ್ನು ವಿವರಿಸುತ್ತಾಳೆ,

> **"ಆಡಲಿಲ್ಲಯ್ಯ ನಾನು ಹೆಣ್ಣುರೂಪ ಧರಿಸಿ,**
> **ನುಡಿಯಲಿಲ್ಲವಯ್ಯಾ ನಾನು ಹೆಣ್ಣು ರೂಪ ಧರಿಸಿ**
> **ನಾನು ಉಭಯರ ಸಂಗವ ಕಂಡು ಕಾಣದಂತಿದ್ದೆವಯ್ಯಾ ಸಂಗಯ್ಯಾ**
> **ಬಸವ ಬಯಲು ಕಂಡ ಕಾರಣ"[೩೨]**

ಬಸವಣ್ಣನ ದಯೆಯಿಂದ, 'ನಾನು ಹೆಣ್ಣಲ್ಲದ ಕಾರಣ, ನಾನು ಇಹಪರ ನಾಸ್ತಿಯಾದವಳಯ್ಯಾ' ಎನ್ನುವಲ್ಲಿ ನೀಲಮ್ಮನ ಅನುಭಾವ-ಲಿಂಗಅಭೇದಗಳೆರಡನ್ನು ಬೆರೆಸಿರುವುದು ಕಂಡುಬರುತ್ತದೆ. ಬಸವಾದಿ ಶರಣರು ನೀಡಿದ ಸ್ವಾತಂತ್ರ್ಯದ ಕಾರಣದಿಂದಾಗಿ ಹೆಣ್ಣುಗಂಡುಗಳ ನಡುವಣ ಭೇದ ಅಳಿಸಿಹೋಗುವ ಪರಿ ನೀಲಮ್ಮನ ಅಭಿವ್ಯಕ್ತಿಯಿಂದ ಗೊತ್ತಾಗುತ್ತದೆ.

"ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ?
ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ
ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ
ಎನಗೆ ಹೆಣ್ಣು ನಾಮವಿಲ್ಲವಯ್ಯಾ"[೨೭]

ನೀಲಮ್ಮ ತನ್ನ ವಚನದಲ್ಲಿ ಹೆಣ್ಣು ಎಂಬ ಕಾರಣಕ್ಕಾಗಿ ಸ್ತ್ರೀ ತನ್ನ ಬದುಕಿನಲ್ಲಿ ಅನುಭವಿಸಬೇಕಾಗಿ ಬರುವ ಯಾತನೆ, ನೋವನ್ನು ಅಭಿವ್ಯಕ್ತಿಸುತ್ತಿದ್ದಾಳೆ ಎನಿಸಿದರೂ, ನಂತರದಲ್ಲಿ ಬಸವಾದಿ ಶರಣರ ದಯೆಯಿಂದ ಮಹಿಳೆಗೆ ಒದಗಿ ಬಂದ ಸ್ವಾತಂತ್ರ್ಯ, ಇದರಿಂದಾಗಿ ಅವರಲ್ಲಾದ ಪರಿವರ್ತನೆ, ಆಂದೋಲನದಿಂದ ಲಭಿಸಿದ ವಿಮೋಚನೆ ಮೊದಲಾದವುಗಳನ್ನು ಕುರಿತು ಹೊಸ ಅರಿವಿನ ಬೆಳಕಿನಲ್ಲಿ ಹೆಣ್ಣು ಅನುಭವಿಸಿದ ಆನಂದ, ಸಂತೋಷಗಳನ್ನು ಅಭಿವ್ಯಕ್ತಿಸುತ್ತಿದ್ದಾಳೆಂಬುದು ತಿಳಿದುಬರುತ್ತದೆ.

ಆತ್ಮಕ್ಕೆ ಗಂಡುಹೆಣ್ಣಿನ ರೂಪ ಎಂಬುದಿಲ್ಲ, ಸಾಧನೆ ಮಾಡಬಲ್ಲ ಜೀವಿ ಹೆಣ್ಣಾದರೇನು? ಗಂಡಾದರೇನು ಎಂಬ ತಾತ್ತ್ವಿಕ ನೆಲೆಗಟ್ಟು ವಚನಕಾರ್ತಿಯರಿಗೆ ನೀಡಿದ ಬೆಂಬಲ ದೊಡ್ಡದು. ಈ ತಾತ್ವಿಕ ನೆಲೆಗಟ್ಟೇ ಸ್ತ್ರೀ ಸಮಾನತೆ, ಸ್ವಾತಂತ್ರ್ಯ, ಸಮಾನತೆಗಳನ್ನು ಮೊದಲಬಾರಿಗೆ ಅನುಭವಿಸಿದ ಹೆಣ್ಣು ತಾನು ಹೆಣ್ಣೆಂಬ ಭಾವನೆಯನ್ನು ಮೀರಿ ಬೆಳೆಯಿತು. ಕೇವಲ ಪುರುಷನಿಗೆ ಸರಿಸಮಾನ ಎಂಬುದಷ್ಟೇ ಅಲ್ಲದೆ ತಾನೊಂದು ಚೈತನ್ಯ ಎಂಬ ಪ್ರಜ್ಞೆಯನ್ನು ಬೆಳೆಸಿಕೊಂಡದ್ದು ಗಮನಾರ್ಹವಾದುದಾಗಿದೆ.

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ

"ಪರದಿಂದಲಾಯಿತ್ತು ಪರಶಕ್ತಿ,
ಪರಶಕ್ತಿಯಿಂದಲೊದಗಿದ ಭೂತಂಗಳು
ಭೂತಂಗಳಿಂದಲೊದಗಿದ ಅಂಗ
ಅಂಗಕ್ಕಾದ ಕರಣೇಂದ್ರಿಯಗಳು
ಇಂದ್ರಿಯಗಳಿಂದಲೊದಗಿದ ವಿಷಯಂಗಳು
ಆ ವಿಷಯಂಗಳ ಪರಮುಖಕ್ಕೆ ತಾ ಶಕ್ತಿಯಾಗಿ ಭೋಗಿಸಬಲ್ಲಡೆ
ಆತ ನಿರ್ಲೇಪ ಮಸಣಯ್ಯಪ್ರಿಯ ಗಜೇಶ್ವರಾ"[೨೮]

ಅನುಭಾವದ ನೆಲೆಯನ್ನು ಕುರಿತು ಮಾತನಾಡುತ್ತಾ, ಈ ಅಜ್ಞಾತ ವಚನಕಾರ್ತಿ ಎಷ್ಟರಮಟ್ಟಿಗೆ ಚಿಂತನೆ ನಡೆಸಬಲ್ಲಳೆನ್ನುವುದಕ್ಕೆ ಈ ವಚನ ಉದಾಹರಣೆಯಾಗಿದೆ. ಅನುಭಾವಿಯಾದ ತಾನು ಇಂದ್ರಿಯಗಳನ್ನು ಜಯಿಸಬೇಕೆನ್ನುವುದು ಅನುಭಾವದ ನಿಲುವು.

ಈಕೆಯ ಹೆಸರು ತಿಳಿದು ಬಂದಿಲ್ಲವಾದರೂ, ಈಕೆಯ ವಚನಾಂಕಿತ 'ಮಸಣಯ್ಯ ಪ್ರಿಯ ಗಜೇಶ್ವರ' ಎಂಬುದಾಗಿದೆ. ಗಜೇಶ ಮಸಣಯ್ಯ ಸತಿಭಾವದ ಶ್ರೇಷ್ಠ ವಚನಕಾರ. ಆತನ ಪತ್ನಿಯಾದ ಈಕೆಯ ವಚನಗಳಲ್ಲಿ ಸೃಷ್ಟಿಯ ಉತ್ಪತ್ತಿ ಲಿಂಗದ ಸ್ವರೂಪ, ಅರಿವಿನ ಮಹತ್ವ, ಗುರು, ಲಿಂಗ–ಜಂಗಮ, ಭಕ್ತರ ಸಂಬಂಧ, ಶರಣರ ಸ್ತುತಿ ಈ ವಿಷಯಗಳನ್ನು ಕಾಣಬಹುದು.

ಸತಿಭಾವದ ವಚನಗಳಿಗೆ ಹೆಸರಾದ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಅನಾಮಿಕಳಾದರೂ, ತುಂಬು ಅನುಭಾವಿ, ಮಿಗಿಲಾಗಿ ಶಿವಜ್ಞಾನಿ:

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ ವ್ರತನಿಷ್ಠೆಯ ಬಗೆಗೆ ಹೆಚ್ಚು ಒತ್ತು ಕೊಡುತ್ತಾಳೆ.

> **"ಬಂಜೆಯಾವಿಂಗೆ ಕ್ಷೀರವುಂಟೆ?**
> **ವ್ರತಹೀನನ ಬೆರೆಯಲುಂಟೆ?**
> **ನೀ ಬೆರೆದಡೂ ಬೆರೆ; ನಾನೊಲ್ಲೆ ನಿಜಶಾಂತೇಶ್ವರಾ"**[೨೯]

ಬಂಜೆ ಹಸುವಿನಿಂದ ಹೇಗೆ ಕ್ಷೀರ ದೊರೆಯುವುದಿಲ್ಲವೋ, ಹಾಗೆಯೇ ವ್ರತಹೀನರನ್ನು ಸೇರುವುದರಿಂದ ಯಾವ ಫಲವು ದೊರೆಯುವುದಿಲ್ಲ ಎನ್ನುವ ರೇಚವ್ವೆ, ತನ್ನ ಆರಾಧ್ಯದೈವವಾದ ನಿಜಶಾಂತೇಶ್ವರನೇ ಬೇಕಾದರೂ ವ್ರತಭ್ರಷ್ಟರ ಸಹವಾಸ ಮಾಡಲಿ, ಆದರೆ ತಾನು ಮಾತ್ರ ಅಂತಹವರೊಡನೆ ಸೇರುವುದಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾಳೆ. ದೈವದ ಮುಲಾಜಿಗೂ ಕೂಡ ಒಳಗಾಗದಂತಹ ನಿಷ್ಠ ಮನೋಧರ್ಮ ಛಲಗಳು ಈ ವಚನದಲ್ಲಿ ಕಂಡುಬರುತ್ತದೆ.

ಕಾಲಕಣ್ಣಿಯ ಕಾಮಮ್ಮ

ಕಾಲಕಣ್ಣಿಯ ಕಾಮಮ್ಮನ ತನ್ನ ವಚನದಲ್ಲಿ ವ್ರತಭ್ರಷ್ಟರನ್ನು ಕಟುವಾಗಿ ಟೀಕಿಸಿದ್ದಾಳೆ.

> **"ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ**
> **ಗುರುಲಿಂಗಜಂಗಮದ ಕಾಲ ಕಟ್ಟುವೆ;**
> **ವ್ರತಭ್ರಷ್ಟರ ನಿಟ್ಟೊರೆಸುವೆ, ಸುಟ್ಟು ತುರತುರನೆ ತೂರುವೆ**
> **ನಿರ್ಭೀತಿ ನಿಜಲಿಂಗದಲ್ಲಿ"**[೩೦]

ಇಲ್ಲಿ ವ್ರತಭ್ರಷ್ಟರನ್ನು ಸುಟ್ಟು ತುರತುರನೆ ತೂರುವ ಕೆಚ್ಚು ಮನತಟ್ಟುತ್ತದೆ.

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

ಈಕೆ ತನ್ನ ಐಕ್ಯೈಕ ವಚನದಲ್ಲಿ ಗಣಾಚಾರ ನಿಷ್ಠೆಯನ್ನು ಮೆರೆದಿದ್ದಾಳೆ.

"ಆಯುಷ್ಯ ತೀರಲು ಮರಣ
ವ್ರತ ತಪ್ಪಲು ಶರೀರ ಕಡೆ
ಮೇಲುವ್ರತವೆಂಬ ತೂತರ ಮೆಚ್ಚ
ನಮ್ಮ ಅಗದೇಶ್ವರ ಲಿಂಗವು"[೩೧]

ವ್ರತಭಂಗವಾದರೆ ವ್ರತಸ್ವರೂಪವಾದ ಹರಣವೇ ಹಾರಿಹೋಗುತ್ತದೆ. ವ್ರತ ತಪ್ಪಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆನ್ನುವ ಡಾಂಭಿಕರನ್ನು ದೇವರು ಒಪ್ಪುವುದಿಲ್ಲ ಎನ್ನುತ್ತಾಳೆ.

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ವಚನಾಂಕಿತ 'ಭೀಮೇಶ್ವರ'. ವ್ರತಭ್ರಷ್ಟರನ್ನು ಮತ್ತು ಲಿಂಗ ಬಾಹ್ಯರನ್ನು ಕುರಿತಾದ ಕಟುಟೀಕೆ ಈಕೆಯ ವಚನದಲ್ಲಿ ಕಂಡುಬರುತ್ತದೆ.

"ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ
ಸತ್ತ ನಾಯ, ಕಾಗೆಯ ಕಂಡಂತೆ,
ಅವರೊಡನೆ ನುಡಿಯಲಾಗದು ಭೀಮೇಶ್ವರಾ"[೩೨]

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮನ ವಚನಾಂಕಿತ 'ಗುರುಶಾಂತೇಶ್ವರಾ' ಎಂಬುದಾಗಿದೆ. ಈಕೆಯದು ಮನಸ್ಸಿನ ಭಾವನೆಗಳನ್ನು ನಿರ್ಭಿಡೆಯಿಂದ ನೇರವಾಗಿ ಅಭಿವ್ಯಕ್ತಿಸುವ ಗುಣ, ಬೇರೆಯವರಿಗೆ ಉಪದೇಶಿಸುವುದಕ್ಕಿಂತ ತನ್ನನ್ನು ತಾನು ಅರಿತು ಆಚರಿಸುವುದು ಮೇಲೆಂಬ ಮನೋಧರ್ಮವನ್ನು ಈಕೆಯ ವಚನಗಳಲ್ಲಿ ಕಾಣಬಹುದು.

"ಚರಣಾಯುಧ ವೇಳೆಯನರಿವುದಯ್ಯಾ,
ಭಕ್ತವ್ರತಹೀನನರಿದು ನೆರೆಯನಯ್ಯಾ
ನೆರೆದಡೆ ನರಕ, ಗುರುಶಾಂತೇಶ್ವರಾ"[೩೩]

ಈ ಮೇಲಿನ ವಚನದಲ್ಲಿ ವ್ರತಹೀನನನ್ನು ಹೀಯಾಳಿಸುವುದು ಕಂಡುಬರುತ್ತದೆ. ಅಂತಹವರನ್ನು ಅಂದರೆ, ಡಾಂಭಿಕ ಭಕ್ತರನ್ನು ಸದ್ಭಕ್ತರು ಸೇರಿದರೆ ಅವರಿಗೆ ನರಕವೇ ಗತಿ ಎಂಬ ಅಭಿಪ್ರಾಯ ವೀರಮ್ಮನದು.

ಶರಣೆಯರ ವಚನಗಳ ಮಹತ್ವ

ಶರಣೆಯರ ವಚನಗಳು ಧಾರ್ಮಿಕ ವಿಚಾರಗಳಿಗಿಂತ ಸಾಮಾಜಿಕ ಸಂಗತಿಗಳನ್ನು ಒಳಗೊಂಡಿವೆ. ಸಮಾಜ ಸುಧಾರಣೆಯು ಅವರ ಬಹುಮುಖ್ಯ ಗುರಿಯಾಗಿದ್ದಿತು. ಶರಣೆಯರು ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಾ, ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಗುರಿ ಹೊಂದಿದ್ದರು. 'ತನ್ನ ತಾವರಿಯದೆ ಅನ್ಯರಿಗೆ ಬೋಧಿಸುವ ಭಂಡತನವು ಕುರುಡ ಕನ್ನಡಿ ಹಿಡಿದಂತೆ' (ಹಡಪದ ಲಿಂಗಮ್ಮ) ವ್ಯರ್ಥ ಸಾಹಸವಾಗುತ್ತದೆ ಎಂಬುದನ್ನು ಅರಿತವರು.

ಶರಣೆಯರು ಕಟ್ಟುನಿಟ್ಟಾಗಿ ವ್ರತಾಚಾರಗಳನ್ನು ಪಾಲಿಸಿದವರು. ಹಿಡಿದ ವ್ರತವ ಬಿಡದಿರಲು ಅದೇ ಮಹಾಜ್ಞಾನ, ವ್ರತವೆಂಬುದು ನಾಯಕರತ್ನ, ವ್ರತವೆಂಬುದು ಜೀವಕಳೆ, ವ್ರತ ಹೋದಾಗಲೇ ಇಷ್ಟಲಿಂಗದ ಕಳೆನಷ್ಟ ಎಂದು ವ್ರತದ ಮಹತ್ವವನ್ನು ಕೊಂಡಾಡಿದವರು, ಇವರು ಕೌಟುಂಬಿಕ ನೆಲೆಯನ್ನೂ ಮೀರಿ ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮನ್ನು ಗುರುತಿಸಿ-ಕೊಂಡವರು. ಬಹುಸಂಖ್ಯೆಯ ಶರಣೆಯರು, ಸಂಸಾರಿಗಳಾಗಿದ್ದು, 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ದಾಂಪತ್ಯ ಧರ್ಮವನ್ನು ಒಪ್ಪಿಕೊಂಡು ಅಪ್ಪಿಕೊಂಡು ನಡೆದವರು.

ಅಕ್ಕಮಹಾದೇವಿ, ಬೊಂತಾದೇವಿ, ಗೊಗ್ಗವ್ವೆ ಮೊದಲಾದವರು ವೈರಾಗ್ಯ ಶೀಲೆಯರು. ಶಿವನನ್ನೇ ತಮ್ಮ ಪತಿಯೆಂದು ನಂಬಿ ಅನುಭಾವದ ಎತ್ತರಕ್ಕೇರಿ ನಿಂತವರು. ಶರಣಸತಿಯರಾಗಿ ಲಿಂಗಪತಿಯ ಲಿಂಗಾಂಗ ಸಾಮರಸ್ಯದ ಸುಖವನ್ನು ಉಂಡು ಅಲೌಕಿಕ ಆನಂದವನ್ನು ಪಡೆದವರು.

ಶರಣರು ಪ್ರತಿಪಾದಿಸಿದ ಮೌಲ್ಯಗಳನ್ನು ತತ್ವಶಃ ಒಪ್ಪಿಕೊಂಡು ಅನುಸರಿಸಿದ ಶರಣೆಯರು, ಅವರ ವಿಚಾರಗಳನ್ನೇ ಪುನರುಚ್ಚರಿಸಿದರು. ಅವರಂತೆ ತಾವೂ ತತ್ತ್ವ, ಅಧ್ಯಾತ್ಮಗಳಂತಹ ಸೂಕ್ಷ್ಮ ವಿಚಾರಗಳನ್ನು ಚರ್ಚೆಗೆ ಎತ್ತಿಕೊಂಡರು. ಕೆಲವು ಶರಣೆಯರು ಶರಣರ ವಚನಗಳ ದಟ್ಟ ಪ್ರಭಾವಕ್ಕೆ ಒಳಗಾದರು.

ಸಾಹಿತ್ಯಕವಾಗಿ ಶರಣೆಯರ ವಚನಗಳು, ಶರಣರ ವಚನಗಳ ಅಲಂಕಾರ, ಭಾಷೆ, ಶೈಲಿ, ತಂತ್ರಗಳ ಪ್ರಭಾವಕ್ಕೆ ಒಳಗಾಗಿ ರಚನೆಗೊಂಡಿದ್ದರೂ, ಅಕ್ಕಮಹಾದೇವಿಯ ವಚನಗಳು ಹೆಚ್ಚಾಗಿ ಸ್ವಂತಿಕೆಯನ್ನು ತೋರುತ್ತವೆ. ಈಕೆಯ ವಚನಗಳ ಭಾವತೀವ್ರತೆ, ರಚನೆಯಲ್ಲಿ ತೋರುವ ನಯನಾಜೂಕು, ಲಯಗಾರಿಕೆ, ಅಭಿವ್ಯಕ್ತಿ, ಭಾವಗೀತಾತ್ಮಕತೆ ಬಸವಣ್ಣನವರನ್ನು ಬಿಟ್ಟರೆ ಬೇರಾವ ವಚನಕಾರರಲ್ಲಿ ಇಷ್ಟು ಪರಿಣಾಮಕಾರಿಯಾಗಿ ಕಂಡುಬರುವುದಿಲ್ಲ.

ಕೆಲವು ಶರಣೆಯರ ವಚನಗಳಲ್ಲಿ ವಚನಕಾರರ ಪ್ರಭಾವವನ್ನು ಮೀರಿದ ಕೆಲವು ವಿಶೇಷತೆಗಳು ಗೋಚರಿಸುತ್ತವೆ. ಕೆಲವು ಶರಣೆಯರ ವಚನಗಳಲ್ಲಿ ಅನುಭವ ಹಾಗೂ ವೈಯಕ್ತಿಕ ವೇದನೆಗಳು ವ್ಯಕ್ತಗೊಂಡಿವೆ. ಅಕ್ಕಮಹಾದೇವಿ, ನೀಲಾಂಬಿಕೆಯರ ಸಹಜ ಕಾವ್ಯ ಪ್ರತಿಭೆಯ ಅನುಭವ, ಅಭಿವ್ಯಕ್ತಿಯುಳ್ಳ ವಚನಗಳು ಕನ್ನಡದ ಶ್ರೇಷ್ಠ ಭಾವಗೀತೆಗಳಾಗಿವೆ.

ಅಕ್ಕಮ್ಮ, ರಾಯಮ್ಮ, ರೆಮ್ಮವ್ವೆ, ಸತ್ಯಕ್ಕ ಹಾಗೂ ಲಿಂಗಮ್ಮನ ವಚನಗಳಲ್ಲಿ ಜನಬಳಕೆಯ ಭಾಷೆ ಮತ್ತು ನುಡಿಗಟ್ಟುಗಳನ್ನು ಹೆಚ್ಚಾಗಿ ಕಾಣಬಹುದು. ಇವರ ವಚನಗಳಲ್ಲಿ ಹರಿತವಾದ ಭಾಷೆ, ಮೊನಚು ಕಂಡುಬರುತ್ತದೆ. ವಿವಿಧವರ್ಗ, ವೃತ್ತಿಗಳಿಂದ ಬಂದ ವಚನಕಾರ್ತಿಯರು ತಮ್ಮ ತಮ್ಮ ಪರಿಸರದ ಅನುಭವದ ಕಾಯಕದ ಪರಿಭಾಷೆಯನ್ನು ಬಳಸಿದ್ದಾರೆ. ಮುಕ್ತಾಯಕ್ಕನ ತಾತ್ತ್ವಿಕ ಚಿಂತನೆ, ವೈಚಾರಿಕತೆ, ಹಡಪದ ಲಿಂಗಮ್ಮನ ವಿಮರ್ಶೆ ಅವರ ವಚನಗಳಿಗೆ ವಿಶೇಷತೆ ತಂದಿದೆ.

ಕದಿರ ತಿಮ್ಮವ್ವೆ, ಕಾಳವ್ವೆ, ಸತ್ಯಕ್ಕ ಮುಂತಾದ ಕಾಯಕ ಜೀವಿಗಳಲ್ಲಿ ಕಾಯಕ ನಿಷ್ಠೆ, ಆಚಾರ ನಿಷ್ಠೆ ಪ್ರಧಾನವಾಗಿದೆ. ಕೊಟ್ಟಣದ ಸೋಮವ್ವೆ, ಕೇತಲದೇವಿ, ಕನ್ನಡಿಕಾಯಕದ ರೇವಮ್ಮ ಮುಂತಾದವರು ತಮ್ಮ ವೃತ್ತಿ ಮೂಲಕ ಪರಿಭಾಷೆಯನ್ನು ಬಳಸಿದ್ದಾರೆ. ಮುಕ್ತಾಯಕ್ಕನ ತಾತ್ತ್ವಿಕ ಚಿಂತನೆ, ವೈಚಾರಿಕತೆ, ಹಡಪದ ಲಿಂಗಮ್ಮನ ವಿಮರ್ಶೆ ಅವರ ವಚನಗಳಿಗೆ ವಿಶೇಷತೆ ತಂದಿದೆ. ಕೊಟ್ಟಣದ ಸೋಮವ್ವೆ, ಕೇತಲದೇವಿ, ಕನ್ನಡಿಕಾಯಕದ ರೇಮಮ್ಮ ಮುಂತಾದವರು ತಮ್ಮ ವೃತ್ತಿಮೂಲ ಪರಿಭಾಷೆಯಲ್ಲಿ ಅನುಭಾವವನ್ನು ವ್ಯಕ್ತಪಡಿಸಿದ್ದಾರೆ. ಮೋಳಿಗೆ ಮಹಾದೇವಿಯಮ್ಮನ ವಚನಗಳಲ್ಲಿ ಆಧ್ಯಾತ್ಮಿಕ ಪರಿಭಾಷೆಯ ಸಾಂಕೇತಿಕತೆಯಿದ್ದು, ಲಕ್ಕಮ್ಮನಲ್ಲಿ ಸತ್ಯಶುದ್ಧ ಕಾಯಕ ಪ್ರಾಮಾಣಿಕತೆ ಅಭಿವ್ಯಕ್ತಗೊಂಡಿದೆ. ಅಮುಗೆರಾಯಮ್ಮ ಮತ್ತು ಅಕ್ಕಮ್ಮನ ವಚನಗಳಲ್ಲಿ ಗದ್ಯಾತ್ಮಕ ಗುಣ ಹೆಚ್ಚು. ಆದರೆ ವ್ರತಾಚಾರಗಳ ನಿರೂಪಣೆ ವ್ರತಹೀನರ ನಿಂದೆಯಲ್ಲಿ ಬಳಕೆಯಾದ ಭಾಷೆ ತುಂಬ ಹರಿತ, ಚುರುಕು ಮುಟ್ಟಿಸುವಂತಹದು.

ಕೆಳವರ್ಗದಿಂದ ಬಂದ ಕೆಲವು ವಚನಕಾರ್ತಿಯರ ವಚನಗಳಲ್ಲಿ ತೀವ್ರತರನಾದ ಸಾಮಾಜಿಕ ವಿಮರ್ಶೆಯನ್ನು ಕಾಣಲು ಸಾಧ್ಯ. ಇಂತಹ ವಚನಕಾರ್ತಿಯರ ವಚನಗಳಲ್ಲಿ ಕೆಚ್ಚು ಪ್ರತಿಭಟನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಿರುವುದು ಸಹ ಇಲ್ಲಿ ಮುಖ್ಯವಾಗುತ್ತದೆ.

ಕೆಲವು ವಚನಕಾರ್ತಿಯರ ರಚನೆಗಳಲ್ಲಿ ಸಿದ್ಧಭಾಷೆ, ಶೈಲಿ, ವಿನ್ಯಾಸಗಳ ಅನುಕರಣೆ ಕಂಡುಬರುವುದುಂಟು, ಶರಣೆಯರ ರಚನೆಗಳಲ್ಲಿ ಅಂತರಂಗ ಶೋಧ, ಅನುಭಾವ ಚಿಂತನೆ, ಅನೇಕ ಲೌಕಿಕ ವಸ್ತುಗಳ ಉಪಮೆ, ರೂಪಕ, ಪ್ರತಿಮೆ, ಸಾದೃಶ್ಯಗಳ ಕಲೆಗಾರಿಕೆಯಲ್ಲಿ

ಮೂಡಿಬಂದಿವೆ. ಪ್ರಾಸ, ಅನುಪ್ರಾಸ, ಲಯಬದ್ಧತೆ, ಆಡುಮಾತಿನ ಸೊಗಸು, ಧ್ವನಿಶಕ್ತಿ, ಅರ್ಥಶಕ್ತಿಗಳೊಂದಿಗೆ ಅಭಿವ್ಯಕ್ತಿಗೊಂಡ ಹಲವು ರಚನೆಗಳನ್ನು ಶರಣೆಯರ ವಚನಗಳಲ್ಲಿ ಗಮನಿಸಬಹುದಾಗಿದೆ.

ಒಟ್ಟಾಗಿ ಹೇಳುವುದಾದರೆ, ಅಕ್ಕಮಹಾದೇವಿಯ ಭಾವೋತ್ಕಟತೆ, ಕವಿಪ್ರತಿಭೆ, ಮುಕ್ತಾಯಕ್ಕನ ಬೌದ್ಧಿಕ ಪ್ರಖರತೆ, ಅಕ್ಕಮ್ಮನ ವಿಚಾರಶೀಲತೆ, ಅಮುಗೆ ರಾಯಮ್ಮನ ಸಾತ್ವಿಕ ನಿಷ್ಠುರತೆ, ಲಿಂಗಮ್ಮ ಮೋಳಿಗೆ ಮಹಾದೇವಿಯರ ತಾತ್ವಿಕ ನಿಷ್ಠೆ ಆಯ್ದಕ್ಕಿ ಲಕ್ಕಮ್ಮನ ಕಾಯಕ ನಿಷ್ಠೆ, ಇತರ ಶರಣೆಯರ ವ್ರತನಿಷ್ಠೆ, ನೀಲಮ್ಮನ ಪತಿಭಕ್ತಿ, ನಾಗಮ್ಮನ ಭ್ರಾತೃಪ್ರೇಮ ಇವು ಒಬ್ಬೊಬ್ಬ ಶರಣೆಯರ ವ್ಯಕ್ತಿತ್ವ ಮತ್ತು ವಚನಗಳ ಮುಖ್ಯ ಮೌಲ್ಯಗಳೆನಿಸಿವೆ.

ಕೊನೆಟಿಪ್ಪಣಿಗಳು

೧. ಶಿವಶರಣೆಯರ ವಚನ ಸಂಪುಟ (೫); (ಸಂ.) ಡಾ. ವೀರಣ್ಣ ರಾಜೂರ, ವ-೩೩೬, ಪು. ೧೦೪.

೨. ಅದೇ., ವ -೨೫೩, ಪು. ೭೮

೩. ಅದೇ., ವ- ೨೮೨, ಪು. ೮೩

೪. ಅದೇ., ವ-೪೮೧, ಪು. ೧೪೭

೫. ಅದೇ., ವ-೫೩೨, ಪು. ೧೭೩

೬. ಅದೇ., ವ-೭೦೨, ಪು. ೨೧೭

೭. ಅದೇ., ವ-೧೧೦೨, ಪು. ೩೬೦

೮. ಅದೇ., ವ-೭೫೨, ಪು-೨೩೭

೯. ಅದೇ., ವ-೭೪೮, ಉ. ೨೩೩

೧೦. ಅದೇ., ವ-೮೪೫, ಪು. ೨೬೮

೧೧. ಅದೇ., ವ-೭೪೭, ಪು. ೨೩೨

೧೨. ಅದೇ., ವ-೬೨೮, ಪು. ೨೦೦

೧೩. ಅದೇ., ವ-೮೪೩, ಪು. ೨೬೭

೧೪. ಅದೇ., ವ-೧೧೨೨, ಪು.೩೩೨

೧೫. ಅದೇ., ವ-೭೩೫, ಪು. ೨೨೬

೧೬. ಅದೇ., ವ- ೭೩೩, ಪು. ೨೨೫

೧೭. ಅದೇ., ವ-೬೮೯, ಪು. ೨೨೫

೧೮. ಅದೇ., ವ-೬೮೦, ಪು. ೨೨೧

೧೯. ಅದೇ., ವ-೧೨೨೯, ಪು. ೩೭೧

೨೦. ಅದೇ., ವ-೯೮, ಪು. ೩೨೦

೨೧. ಅದೇ., ವ-೬೬೮, ಪು. ೨೧೫

೨೨. ಅದೇ., ವ-೧೩೧೩, ಪು. ೪೦೨

೨೩. ಅದೇ., ವ-೧೨೩೩, ಪು. ೩೭೩

೨೪. ಅದೇ., ವ-೧೧೯೪, ಪು. ೩೨೪

೨೫. ಅದೇ., ವ-೭೭೮, ಪು. ೨೪೬

೨೬. ಅದೇ., ವ-೮೪೦, ಪು. ೨೬೫

೨೭. ಅದೇ.,

೨೮. ಅದೇ., ವ-೭೭೮, ಪು. ೨೪೬

೨೯. ಅದೇ., ವ-೭೫೧, ಪು. ೨೩೬

೩೦. ಅದೇ., ವ-೭೫೦, ಪು. ೨೩೫

೩೧. ಅದೇ., ವ-೭೫೧, ಪು. ೨೩೬

೩೨. ಅದೇ., ವ-೧೨೩೩, ಪು. ೩೭೩

೩೩. ಅದೇ., ವ-೭೮೨, ಪು. ೨೪೯

*****

ಅಧ್ಯಾಯ – ೫

ಶರಣೆಯರ ವಚನಗಳಲ್ಲಿ ವೈಚಾರಿಕತೆ

ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಯೊಂದಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ ತಿರುವು ಒದಗಿಸಿದ ಕಾಲ ಹನ್ನೆರಡನೆಯ ಶತಮಾನದ ಶರಣಯುಗ ಎನ್ನಬಹುದು.

'ವೈಚಾರಿಕತೆ' ಎಂಬುದು ಜನಪರವಾದುದು. ಜನಸಾಮಾನ್ಯರ ಬೌದ್ಧಿಕ ಏಳಿಗೆಗಾಗಿ ಶ್ರಮಿಸುವುದೇ ವೈಚಾರಿಕತೆಯ ಗುಣ. ಪ್ರಶ್ನೆಗಳು ಮತ್ತು ಸಂದೇಹಗಳ ನಡುವಣ ಸಂಘರ್ಷದಲ್ಲಿ ಹೊಸ ವಿಚಾರಗಳು ಹುಟ್ಟಿಕೊಳ್ಳುತ್ತವೆ. ಇಂಥ ಹೊಸ ವಿಚಾರಗಳ ವಿಶ್ಲೇಷಣೆಯೇ ವೈಚಾರಿಕತೆ. ಇಲ್ಲಿ ಕುರುಡು ಅನುಸರಣೆಗಳಿಗೆ ಅವಕಾಶ ಇರುವುದಿಲ್ಲ. ವ್ಯಕ್ತಿಯನ್ನು ಅಕ್ಷರಸ್ಥನನ್ನಾಗಿಸುವುದು, ಸಮಾಜದ ಬಗ್ಗೆ ಚಿಂತನೆಗೆ ಹಚ್ಚುವುದು, ಹೊಸ ಹೊಸ ಆಲೋಚನಾ ವಿಧಾನಗಳೊಂದಿಗೆ ಸಮಾಜವನ್ನು ಬದಲಾವಣೆಯತ್ತ ಕೊಂಡೊಯ್ಯುವುದು ವೈಚಾರಿಕತೆಯ ಲಕ್ಷಣವಾಗಿದೆ.[೧]

ಚರ್ಚೆ, ವಾದ, ಪ್ರತಿವಾದ, ಅರಿವು, ತರ್ಕ, ಜ್ಞಾನ-ಕ್ರಿಯೆಗಳ ಪ್ರಕ್ರಿಯೆಯಲ್ಲಿ ವಿಚಾರ ಹುಟ್ಟಿ ಬೆಳೆಯುತ್ತದೆ. ಇಂತಹ ಅರಿವು, ವಿಚಾರಗಳು ವೈಚಾರಿಕತೆಯಿಂದ ಕೂಡಿದ್ದು ಸಾಮಾಜಿಕ ವ್ಯವಸ್ಥೆಯನ್ನು ಚಲನಶೀಲಗೊಳಿಸುವ ಮುಖ್ಯ ಮಾಧ್ಯಮವಾಗಿದೆ. ಹೀಗೆ ಜಡತೆಯಿಂದ ಕೂಡಿದ ಬದುಕನ್ನು ಕ್ರಿಯಾಶೀಲಗೊಳಿಸುವ ಕಾರ್ಯವನ್ನು ವೈಚಾರಿಕತೆ ಮಾಡುತ್ತದೆ.

ಹನ್ನೆರಡನೆಯ ಶತಮಾನದ ಸಾಮಾಜಿಕ, ಧಾರ್ಮಿಕ ಬದುಕು ನಿಂತ ನೀರಾಗಿತ್ತು. ಸಾಮಾನ್ಯ ಜನ ವೈದಿಕ ಹಿತಾಸಕ್ತಿಗಳ ಅಮಾನವೀಯವಾದ ಶೋಷಣೆಗೆ ಸಿಲುಕಿ ನಲುಗಿಹೋಗಿದ್ದರು. ಅವರ ಅರಿವಿಗೆ ಮಂಕು ಕವಿದು, ಆಲೋಚನಾರಹಿತವಾಗಿ ಕುರುಡು ಅಂಧಾನುಸರಣೆಯಲ್ಲಿ ಮುಳುಗಿಹೋಗಿದ್ದರು. ಅಜ್ಞಾನ, ಅವಿದ್ಯೆ, ಅಂಧಶ್ರದ್ಧೆ, ಅವಿಚಾರಗಳು ಎಲ್ಲೆಡೆ ತಾಂಡವವಾಡುತ್ತಿದ್ದವು.

ಇಂತಹ ಸಂದರ್ಭದಲ್ಲಿ ಕರ್ನಾಟಕ ಮಧ್ಯಯುಗದಲ್ಲಿ ಕಾಣಿಸಿಕೊಂಡ ಬಸವಾದಿ ಶಿವಶರಣರು ಅದುವರೆಗೂ ಸಮಾಜ ಒಪ್ಪಿಕೊಂಡು ಬಂದಿದ್ದ ಅಸಮಾನತೆಯ ತಳಹದಿಯ ಮೇಲೆ, ಅಜ್ಞಾನದಿಂದ ಕೂಡಿದ, ಅವಿದ್ಯೆಯನ್ನು ಒಳಗೊಂಡ, ಅವಿಚಾರಸಹಿತವಾದ ಜೀವನಸಿದ್ಧಾಂತವನ್ನು ಪ್ರಶ್ನಿಸುವುದರ ಮೂಲಕ, ತರ್ಕರಹಿತ ಆಚರಣೆಗಳನ್ನು

ತಿರಸ್ಕರಿಸುವುದರ ಮೂಲಕ ವೈಚಾರಿಕ ಸಂಘರ್ಷಕ್ಕೆ ಇಳಿದರು. ಜನಸಾಮಾನ್ಯರಲ್ಲಿ ಮನೆಮಾಡಿದ್ದ ಅಂಧಶ್ರದ್ಧೆ, ಮೂಢನಂಬಿಕೆ, ಕುರುಡು ಸಂಪ್ರದಾಯಗಳನ್ನು ತೊಡೆದುಹಾಕಲು ಶ್ರಮಿಸಿದರು. ಜಾತಿವ್ಯವಸ್ಥೆ ಮತ್ತು ಲಿಂಗತಾರತಮ್ಯವನ್ನು ತೊಡೆದುಹಾಕಲು ಯತ್ನಿಸಿದರು.

ವಚನಕಾರರ ಅಧ್ಯಯನದ ಅರಿವು, ಆರೋಗ್ಯಕರ ಚಿಂತನೆ, ಬದುಕಿನ ಅನುಭವ, ತರ್ಕಬದ್ಧವಾದ ಚರ್ಚೆಗಳು ನೂತನ ವಿಚಾರಗಳನ್ನು ಸೃಜಿಸಿದವು. ವಚನಕಾರರ ಅರಿವಿನ ಧಾಳಿಗೆ ಸಿಕ್ಕಿ ವೈದಿಕ ಹಿತಾಸಕ್ತಿಗಳು ತೂರಿಹೋದವು.

ವಚನಕಾರರು ಗುರುಲಿಂಗಜಂಗಮಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಅರಿವು, ಅನುಭಾವ, ವಿಚಾರಗಳಿಗೆ ನೀಡಿದರು. ವ್ಯಕ್ತಿಗೆ ಪ್ರತಿಯೊಂದನ್ನು ವಿಚಾರ ಮಾಡುವ ಮನೋಭಾವವಿರಬೇಕು. ಯಾವುದೇ ಮೌಢ್ಯಕ್ಕೆ ಒಳಗಾಗದೆ ಅದರ ಸರಿ–ತಪ್ಪನ್ನು ತಿಳಿದು, ಪರಿಶೀಲಿಸಿ ವಿಚಾರಕ್ಕೆ ಒಳಪಡಿಸಿ ಒಪ್ಪಿಕೊಳ್ಳಬೇಕು ಹಾಗೂ ಸ್ವತಂತ್ರ ಆಲೋಚನೆಯನ್ನು ಬೆಳೆಸಿಕೊಳ್ಳಬೇಕು ಎಂಬುದು ವಚನಕಾರರ ನಿಲುವಾಗಿತ್ತು.

ವಚನ ಚಿಂತಕರು ಹಾಕಿಕೊಟ್ಟ ಹಾದಿಯಲ್ಲಿ ನಡೆದುಬಂದ ವಚನಕಾರ್ತಿಯರಿಗೆ ವಚನಕಾರರ ನಡೆನುಡಿಗಳೆಲ್ಲವೂ ಆದರ್ಶವಾಗಿದ್ದವು. ಆಚಾರ–ವಿಚಾರ, ಅಭಿವ್ಯಕ್ತಿ ಸ್ವಾತಂತ್ರ್ಯಗಳಿಂದ ವಂಚಿತರಾಗಿದ್ದ ಮಹಿಳೆಯರಿಗೆ ವಚನಕಾರರ ವೈಚಾರಿಕ ಹೋರಾಟ ಮುಕ್ತ ಸ್ವಾತಂತ್ರ್ಯ ತಂದುಕೊಟ್ಟಿತು. ಇದರಿಂದಾಗಿ ಶರಣೆಯರು ತಾವು ವಿಧಿಸಿಕೊಂಡಿದ್ದ ಲಕ್ಷ್ಮಣರೇಖೆಗಳನ್ನು ತಾವೇ ದಾಟಿ ಬೆಳೆದರು.

ಶರಣ ಚಳವಳಿ ಬೌದ್ಧಿಕವಾಗಿ ವಚನ ರಚನೆಗೆ ಮಾತ್ರ ಸೀಮಿತವಾಗದೆ, ವಚನಗಳ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿತು. ಈ ಸಂದರ್ಭದಲ್ಲಿ ಶರಣೆಯರು ವೈಚಾರಿಕವಾಗಿ ಚಿಂತಿಸಿ, ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ವಚನಕಾರರ ಪ್ರಭಾವ ಪ್ರೇರಣೆಗಳಿಂದಾಗಿ ವಿಚಾರಪ್ರಜ್ಞೆಯನ್ನು ಮೈಗೂಡಿಸಿಕೊಂಡ ಮಹಿಳೆಯರು ತಮ್ಮ ಸಂವೇದನೆಯನ್ನು ಅಕ್ಷರ ರೂಪಕ್ಕಿಳಿಸಲು, ಅಭಿವ್ಯಕ್ತಿ ಸಾಧ್ಯತೆಗಳನ್ನು ಪಡೆದುಕೊಂಡರು.

ಜ್ಞಾನವೆಂಬುದು ಪುರುಷನ ಗುತ್ತಿಗೆಯಾಗಿದ್ದು, ಬದುಕಿಗೆ ಸಂಬಂಧಪಟ್ಟ ಯಾವುದೇ ತೀರ್ಮಾನ, ನಿರ್ಣಯಗಳೆಲ್ಲವು ಪುರುಷನಿಗಷ್ಟೇ ಸೀಮಿತವಾಗಿದ್ದವು. ಆದರೆ ಮಹಿಳೆಯ ಪಾಲಿಗೆ ಜ್ಞಾನದ ಬಾಗಿಲು ಸಂಪೂರ್ಣವಾಗಿ ಮುಚ್ಚಿಹೋಗಿತ್ತು. ಮಹಿಳೆಯ ಮನದಾಳದ ಮಾತುಗಳು ಹೊರಬೀಳಲು ಸಾಧ್ಯವಾಗದಂಥ ವಾತಾವರಣ ವ್ಯವಸ್ಥೆ ನಿರ್ಮಿತವಾಗಿತ್ತು. ಇಂತಹ ಸಂದರ್ಭದಲ್ಲಿ ಮಹಿಳೆಯರ ಪಾಲಿಗೆ ಶರಣರು ಬೆಳಕಿನ ಆಶಾಕಿರಣಗಳಾಗಿ

ಕಂಡುಬಂದರು. ಶರಣರ ಉದಾರವಾದಿ ನಿಲುವು ಹೆಣ್ಣಿನ ಬದುಕಿಗೆ ಅರ್ಥ ತಂದುಕೊಟ್ಟಿತು. ಇದರ ಫಲವಾಗಿ ಶತಶತಮಾನಗಳಿಂದ ಬಾಯಿ ಹೊಲಿದುಕೊಂಡಿದ್ದ ಸ್ತ್ರೀ ಒಮ್ಮೆಲೇ ಮಾತನಾಡಲಾರಂಭಿಸಿದಳು, ಚಿಂತಿಸಲಾರಂಭಿಸಿದಳು. ತನ್ನ ಆಲೋಚನೆಗಳನ್ನು ಅಭಿವ್ಯಕ್ತಿಸಿದಳು.[೨]

ವಚನಕಾರ್ತಿಯರ ಅಂತರಂಗ ನಿರೀಕ್ಷೆಯಷ್ಟೇ ಬಹಿರಂಗ ನಿರೀಕ್ಷೆಯು ತೀಕ್ಷ್ಣ-ವಾಗಿದ್ದಿತು. ಈ ನಿರೀಕ್ಷೆಯೇ ಅವರುಗಳನ್ನೂ ಸಮಾಜದ ವಿಮರ್ಶೆಗೆ ತೊಡಗಿಸಿತು. ಸಾಮಾಜಿಕ, ಧಾಮಿಕ ಬದಲಾವಣೆಗಳ ಬಗ್ಗೆ ಆಸಕ್ತಿ ಮೂಡಿಸಿತು. ಪರಿಣಾಮವಾಗಿ ವಚನಕಾರ್ತಿಯರ ವೈಚಾರಿಕತೆಗೆ ಹೊಳಪು ಸಿದ್ಧಿಸಿತು.

ಶರಣೆಯರು ತಮ್ಮ ವಚನಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಆಶಯಗಳನ್ನು ವ್ಯಕ್ತಪಡಿಸಿದ್ದಾರೆ. ಶರಣೆಯರಿಗೆ ವಚನಗಳು ಆತ್ಮಶೋಧನೆಗೆ, ಭಕ್ತಿಸಾಧನೆಗೆ, ಸಾಮಾಜಿಕ ಚಳವಳಿಗೆ ಮಾಧ್ಯಮವಾದವು. ಪರಂಪರಾಗತವಾದ ವೈಚಾರಿಕತೆಯ ಹಿನ್ನೆಲೆಯಾಗಿದ್ದ ವೇದ ಶಾಸ್ತ್ರಗಳ ಮಾತಿಗಿಂತ ತಮ್ಮ ಸುತ್ತಣ ಪರಿಸರದಲ್ಲಿ ಯಾವುದು ಸ್ವಂತ ಅನುಭವಕ್ಕೆ ಬರುತ್ತದೋ, ಆ ಸ್ವಾನುಭವವೇ ಎಲ್ಲಕ್ಕಿಂತ ಮಿಗಿಲಾದದ್ದು ಎಂಬುದನ್ನು ಶರಣೆಯರು ಕಂಡುಕೊಂಡರು. ಆದುದರಿಂದಲೇ "ವೇದಶಾಸ್ತ್ರ ಪುರಾಣಾಗಮಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ"[೩] ಎಂದು ಅಕ್ಕಮಹಾದೇವಿ ಅವುಗಳ ನಿರರ್ಥಕತೆಯನ್ನು ಸಾರಿದಳು.

ಧರ್ಮದ ಹೆಸರಿನಲ್ಲಿ ನಡೆಯುವ ಜೀವ ವಿರೋಧಿಯಾದ, ಅಮಾನವೀಯವಾದ ಹಿಂಸೆ, ಅನ್ಯಾಯ, ಶೋಷಣೆ, ಡಾಂಭಿಕ ವ್ರತಾಚರಣೆಗಳನ್ನು ಉಗ್ರವಾಗಿ ಖಂಡಿಸಿದ್ದಾರೆ. ಬಾಹ್ಯ ಆಡಂಬರಕ್ಕಿಂತ ಅಂತರಂಗದ ಅರಿವು ಮುಖ್ಯ ಎಂಬುದನ್ನು ಒತ್ತಿ ಹೇಳಿದ್ದಾರೆ. ಶರಣೆಯರ ಬಹುಮುಖ್ಯವಾದ ಗುರಿಯೆಂದರೆ ಸಮಾಜ ಸುಧಾರಣೆ. ಇವರು ಸಮಾಜದಲ್ಲಿ ಮೊದಲಿನಿಂದಲೂ ಬೇರೂರಿ ನಿಂತಿದ್ದ ಕುರುಡು ಸಂಪ್ರದಾಯ, ಮೂಢನಂಬಿಕೆ, ಡಾಂಭಿಕ ವ್ರತಾಚರಣೆಯನ್ನು ವಿರೋಧಿಸಿದ್ದಾರೆ.

ಅಂತಹ ಶರಣೆಯರ ವಚನಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ, ವೈಚಾರಿಕತೆ, ಲಿಂಗಾಧಾರಿತ ಪ್ರಜ್ಞೆ ಹಾಗೂ ಇತರೆ ವಿಚಾರಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ವಚನಕಾರ್ತಿಯರು ಪರಂಪರಾನುಗತವಾದ ಕುರುಡು ಸಂಪ್ರದಾಯಗಳಿಗೆ ತೆರೆ ಎಳೆಯುವ ಪ್ರಯತ್ನಗಳಿಗೆ ನಾಂದಿ ಹಾಡುತ್ತಾರೆ. ಸಾಮಾಜಿಕ ಮೌಲ್ಯಗಳನ್ನು ವಿಮರ್ಶಿಸು-ವುದರಿಂದ ಜಾತ್ಯತೀತವಾದ ಆದರ್ಶ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದಾರೆ.

ಅಕ್ಕಮಹಾದೇವಿ ಸ್ತ್ರೀ ಕುಲಕ್ಕೆ ಘನತೆಯನ್ನು, ಆತ್ಮಪ್ರತ್ಯಯವನ್ನು ತಂದುಕೊಟ್ಟವಳು. ಹೆಣ್ಣುತನದ ನಿರಾಕರಣೆ, ಲೌಕಿಕದ ನಿರಾಕರಣೆ, ಪತಿಯ ನಿರಾಕರಣೆ, ದೇಹ ನಿರಾಕರಣೆ, ವ್ಯವಸ್ಥೆಯ ನಿರಾಕರಣೆ ಮೊದಲಾದ ಕಾರಣಗಳಿಂದಾಗಿ ಅಕ್ಕ ಎಂದಿಗೂ ಪ್ರಸ್ತುತಳಾಗಿರುವಳು. 'ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಎಂದು ಲೌಕಿಕದ ಪತಿಯನ್ನು ತಿರಸ್ಕರಿಸಿ, ಪಾರಮಾರ್ಥಿಕ ಪತಿಯಾದ ಚೆನ್ನಮಲ್ಲಿಕಾರ್ಜುನನನ್ನು ಅರಸಿ ಹೊರಟ ಅಕ್ಕ ಹೇಳುವ ಮಾತುಗಳು ಅವಳ ಸ್ವಾಭಿಮಾನಕ್ಕೆ ಹಿಡಿದ ಕನ್ನಡಿಯಂತಿವೆ.

'ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಕಂಡೆಯಾ
ಏನ ಮಾಡಿದಡೆಯ ಆನಂಜುವಳಲ್ಲ
ತರಗೆಲೆಯ ಮೇಲಿದು ಆನಿಹೆನು
ಸರೆಯ ಮೇಲೊರಗಿ ಆನಿಹೆನು
ಚೆನ್ನಮಲ್ಲಿಕಾರ್ಜುನಯ್ಯಾ ಕರಕೇಡನೊಡ್ಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು"[೪]

ಈ ರೀತಿಯ ನಿರ್ಭೀತವಾದ ನೆಲೆಯಿಂದ ಆಕೆ ನಡೆದ ದಾರಿ, ಆ ಯುಗದಲ್ಲಿದ್ದ ಸ್ತ್ರೀ ಪ್ರಗತಿಪರ ಆಶಯಗಳಿಗೆ ಒಂದು ಖಚಿತವಾದ ಜೀವಂತ ಮಾದರಿ ಎನ್ನಬಹುದು.

ಶರಣೆಯರು ಸಾಮಾಜಿಕ ಪರಿಸ್ಥಿತಿಯನ್ನು ಅತ್ಯಂತ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು ಎಂಬುದಕ್ಕೆ ವೈಚಾರಿಕ ಚಿಂತನೆಗಳನ್ನು ಒಳಗೊಂಡ ಅವರ ವಚನಗಳು ಉತ್ತಮ ನಿದರ್ಶನಗಳಾಗಿವೆ. ಸಾಮಜಿಕ ವಿಷಮತೆ, ಡಾಂಭಿಕತೆ, ಆಹಾರಪದ್ಧತಿ, ಗೊಡ್ಡು ಬ್ರಾಹ್ಮಣ್ಯ, ಅರ್ಥಹೀನ ವೇದಾಗಮ ಪುರಾಣಗಳನ್ನು ನಿಷ್ಠುರವಾಗಿ ಖಂಡಿಸಿದ್ದಾರೆ, ಸಮಾಜದಲ್ಲಿ ಹಾದಿ ತಪ್ಪಿದವರನ್ನು, ಸಮಾಜದ ಅಂಕು ಡೊಂಕುಗಳನ್ನು, ಕಪಟ ಭಕ್ತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಅಂಗ ಲಿಂಗಗಳನ್ನು ಶಿವಾನುಭವಕ್ಕೆ ಹೋಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಮ್ಮ ತಮ್ಮ ವೈಚಾರಿಕ ಚಿಂತನೆಗಳನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

೧. ಸಾಮಾಜಿಕ ಪ್ರಜ್ಞೆ

ಶಿವಶರಣೆಯರ ಹೋರಾಟ ಕೇವಲ ದಾಂಪತ್ಯ ಜೀವನಕ್ಕಾಗಲೀ ವೈಯಕ್ತಿಕ ಏಳಿಗೆಗಾಗಲೀ ಸೀಮಿತವಾಗದೆ ಸಮಾಜದ ಉದ್ಧಾರಕ್ಕಾಗಿಯೂ ಸಹ ಸ್ಪಂದಿಸಿದೆ. ಸಮಾಜದ

ಹಲವು ಸಮಸ್ಯೆಗಳ ನಿವಾರಣೆಗೆ ಶ್ರಮಿಸಿದೆ. ಶರಣೆಯರ ಚಿಂತನೆಗಳು ಕೇವಲ ಹೆಣ್ತನದ ಪರಿಧಿಗೆ ಸೀಮಿತವಾಗದೆ ಎಷ್ಟೋ ಸಂದರ್ಭಗಳಲ್ಲಿ ಪುರುಷನನ್ನು ತಿದ್ದಿ ಸುಧಾರಣೆಗೆ ತರುವ, ಪುರುಷನಿಗಿಂತಲೂ ಎತ್ತರಕ್ಕೇರುವ ಶಕ್ತಿ ತೋರಿದ್ದಾರೆ. ಅವರ ಆತ್ಮಸ್ಥೈರ್ಯ, ದೃಢತೆ, ಶುದ್ಧಮನಸ್ಸುಗಳು ಪುರುಷವರ್ಗದ ತಪ್ಪುಗಳನ್ನು ನೇರವಾಗಿ ಎತ್ತಿತೋರಿ ಖಂಡಿಸಿದವು. ತಮ್ಮ ಅನುಭವಗಳನ್ನು ಯಾರ ಭಯವಿಲ್ಲದೆ ಅಭಿವ್ಯಕ್ತಿಸಿದರು. ಯಾರನ್ನೋ ಮೆಚ್ಚಿಸುವ ಕೆಲಸ ಇವರದಾಗಿರಲಿಲ್ಲ, ಸಾಮಾಜಿಕ ಹೊಣೆಗಾರಿಕೆಯಿಂದ ವಚನರಚನೆ ಮಾಡಿದರು.

ಶತಮಾನಗಳ ಶೋಷಣೆಗೆ ವೇದ, ಪುರಾಣ, ಶಾಸ್ತ್ರ ಆಗಮಗಳ ತಪ್ಪು ಗ್ರಹಿಕೆಯೆ ಕಾರಣ ಎಂಬುದನ್ನು ಮನಗಂಡ ಅಕ್ಕ ಅವುಗಳನ್ನು ಖಂಡಿಸುವುದರ ಮೂಲಕ, ಅವುಗಳ ಅರ್ಥಹೀನತೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾಳೆ.

"ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ
ಇವ ಕುಟ್ಟಲೇಕೆ ಕುಸುಕಲೇಕೆ?"[೨]

ಅವೈಜ್ಞಾನಿಕವಾದ ವೇದಶಾಸ್ತ್ರ ಪುರಾಣಗಳು, ವರ್ಣಭೇದ, ಲಿಂಗಬೇಧಗಳನ್ನು ಹುಟ್ಟು ಹಾಕುವುದರ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಹದಗೆಡಿಸಿ ಅಸಮಾನತೆಯನ್ನು ಬಿತ್ತಿ ಬೆಳೆಸಿರುತ್ತವೆ. ತಮ್ಮ ಉಳಿವಿಗಾಗಿ ಇವುಗಳನ್ನು ಸಮರ್ಥಿಸಿಕೊಳ್ಳುತ್ತವೆ.

ಕದಿರ ರೆಮ್ಮವ್ವೆ

ಶರಣೆಯರು ಸಮಾಜದ ಜಾತಿ ವ್ಯವಸ್ಥೆಯ ಬಗೆಗೆ ಧ್ವನಿ ಎತ್ತಿದ್ದಾರೆ. ತಲೆತಲಾಂತರದಿಂದ ಬಂದ ಜಾತಿಪದ್ಧತಿಯನ್ನು ಪ್ರಶ್ನಿಸಿದ್ದಾರೆ.

"ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲಿ ತಿರುಹಲಾತಿ,
ಸುತ್ತಿತ್ತು ನೂಲು, ಕದಿರು ತುಂಬಿತ್ತು
ರಾಟೆಯ ತಿರುಹಲಾರೆ – ಎನ್ನ ಗಂಡ ಕುಟ್ಟಿಹ
ಇನ್ನೇವೆ; ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ?"

ಕದಿರ ರೆಮ್ಮವ್ವೆಯು ತನ್ನ ವಚನದಲ್ಲಿ –

'ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ' ಎಂದು ಹೇಳುತ್ತ ಜಾತೀಯತೆಯನ್ನು ವಿರೋಧಿಸಿ ಅದರಂತೆ ಎಲ್ಲ ಒಂದೇ ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಈಕೆ ತನ್ನ ವಚನದಲ್ಲಿ ಅಂತರಂಗ–ಬಹಿರಂಗ ಎರಡು ಶುದ್ಧಿಯಾಗಿರಬೇಕು ಎಂದಿದ್ದಾಳೆ, ಆಗಲೇ ಅರಿವು ಸಾಧ್ಯವಾಗುತ್ತದೆ, ಕೇವಲ ತೋರಿಕೆಯ ವ್ರತ ಸಾಲದು, ಬಹಿರಂಗದಲ್ಲಿ ಮಾತ್ರ ವ್ರತಾಚರಣೆ ಮಾಡುವವ ವ್ರತಹೀನ ಅಂಥವನ ಸಹವಾಸದಿಂದ ನರಕವಾಸ ತಪ್ಪದು ಎಂಬುದು ಕಾಳವ್ವೆಯ ನಿಲುವು.

"ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾದಿರೋ?"[೬]

ಗೋಮಾಂಸ ತಿನ್ನುವವರನ್ನು ಕೀಳುಜಾತಿ ಎಂದು ಕರೆಯುವ ಜನರಿಗೆ ಕಟುವಾದ ಮಾತುಗಳನ್ನಾಡುತ್ತಾ ಕುರಿ, ಕೋಳಿ, ಮೀನು ಮುಂತಾದ ಪ್ರಾಣಿಗಳನ್ನು ತಿನ್ನುವ ವರ್ಗವೆಲ್ಲ ಕುಲಜರೆನ್ನಿಸಿಕೊಂಡರೆ, ಪಂಚಾಮೃತವನ್ನು ಕರೆಯುವ ಶ್ರೇಷ್ಠವಾದ ಗೋವನ್ನು ತಿನ್ನುವ ಮಾದಿಗ ಏಕೆ ಕುಲಜನೆನ್ನಿಸಿಕೊಳ್ಳುವುದಿಲ್ಲ ಎಂದು ಕಾಳವ್ವೆ ಪ್ರಶ್ನಿಸುತ್ತಾಳೆ. 'ಸಿದ್ದಲಿಕೆಯ ತುಪ್ಪವನ್ನು, ಸಗ್ಗಳೆಯ ನೀರನ್ನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದು' ಎಂದು ಎಚ್ಚರಿಸುತ್ತಾಳೆ, ಇಷ್ಟು ನೇರ ಪ್ರತಿಭಟನೆ ಮೆಚ್ಚುವಂತದ್ದು, ಶೂದ್ರ ವರ್ಗದ ಆಹಾರ ವ್ಯವಸ್ಥೆಯ ಬಗ್ಗೆ ಸ್ವಾಭಿಮಾನ ಮತ್ತು ಕೆಚ್ಚನ್ನು ಈಕೆ ತೋರಿದ್ದಾಳೆ.

ಆಹಾರ ಪದ್ಧತಿ ಮತ್ತು ಜಾತಿಯ ಅಪಮಾನತೆಗಳೆರಡನ್ನು ಒಂದೇ ನೆಲೆಯಲ್ಲಿ ಪ್ರಶ್ನಿಸುವ ಮತ್ತು ಪ್ರವಾದಿಸುವ ಗುಣಗಳನ್ನೊಳಗೊಂಡ ಈ ವಚನವು ಅತ್ಯಂತ ತಾರ್ಕಿಕತೆಯಿಂದ ಕೂಡಿದೆ. ಇಲ್ಲಿ ಕಾಳವ್ವೆ ತನ್ನ ಜನಾಂಗದ ಆಹಾರ ಪದ್ಧತಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವುದರ ಮೂಲಕವೇ ತನ್ನ ಜಾತಿಯೂ ಕೀಳಲ್ಲವೆಂಬ ಮಾತು ಸತ್ಯ ಶುದ್ಧ ತರ್ಕವಾಗಿದೆ.

ಈ ವಚನದಲ್ಲಿ ಕಾಳವ್ವೆ ಮೆರೆದಿರುವ ಆತ್ಮ ಪ್ರತ್ಯಯ ದೊಡ್ಡದು. ಹಸುವಿನ ಚರ್ಮ ಶ್ರೇಷ್ಠವಾದದ್ದೆಂದು ಬಗಲಿಗಿರಿಸಿಕೊಳ್ಳುವ ಬ್ರಾಹ್ಮಣ, ಹಸುವಿನ ಮಾಂಸ ತಿನ್ನುವ ಮಾದಿಗರನ್ನು ಹೀನಾಯವಾಗಿ ಕಾಣುವ ಬಗೆಯನ್ನು ಕಾಳವ್ವೆ ವಿಡಂಬಿಸಿದ್ದಾಳೆ.

ಬೊಂತಾದೇವಿ

ಬೊಂತಾದೇವಿಯ ಸಾಮಾಜಿಕ ಕಳಕಳಿಯನ್ನು ಪ್ರತಿನಿಧಿಸುವ ವಚನ ಇದಾಗಿದೆ:

"ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಯರ ಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ;
ಭಿತ್ತಿಯಿಂದ ಒಳಹೊರಗೆಂಬನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ"[೭]

ಈ ಬಗೆಯ ಮೇಲು-ಕೀಳು ಎಂಬ ಭಾವವಳಿದು ಸಮಾನತೆಯನ್ನು ಆಕೆ ಬಯಸುತ್ತಾಳೆ. ಸಮಾಜದ ವರ್ಣ, ಕುಲ, ಗೋತ್ರ, ಜಾತಿಗಳ ಬಗೆಗೆ ಆಕೆಗೆ ತಿರಸ್ಕಾರವಿದೆ. ಸಮಾಜದ ಬಗೆಗೆ ಕಳಕಳಿಯಿದೆ, ಅನುಕಂಪವಿದೆ, ಬ್ರಾಹ್ಮಣ, ಹೊಲೆಯ ಎಂಬ ಮೇಲು-ಕೀಳು ವ್ಯವಸ್ಥೆಯನ್ನು ವಿರೋಧಿಸುತ್ತಾಳೆ. ಇವೆಲ್ಲ ಮಾನವ ನಿರ್ಮಿತ ಕಟ್ಟುಪಾಡುಗಳು ಎಂದು ಹೇಳುತ್ತ ಸಾಮಾಜಿಕವಾಗಿ ಬ್ರಾಹ್ಮಣ - ಹೊಲೆಯ ಎಂಬ ತರತಮಗಳನ್ನು ಧಿಕ್ಕರಿಸಿ ಸ್ವತಂತ್ರ ಅಲೋಚನೆಗಳನ್ನು ಅಭಿವ್ಯಕ್ತಗೊಳಿಸಿದ್ದಾಳೆ.

ಇದನ್ನು ಹೋಲುವಂತೆ ಅಕ್ಕಮ್ಮ ತನ್ನ ವಚನವೊಂದರಲ್ಲಿ ಹೀಗೆ ಪ್ರಶ್ನಿಸುತ್ತಾಳೆ:

"ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯಾ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ"[೮]

ತೋರಿಕೆಯ ಭಕ್ತಿಯನ್ನು ವಿರೋಧಿಸುವ ಈಕೆ ಜಾತಿವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತಾಳೆ. ವ್ರತಭ್ರಷ್ಟರು, ಆಚಾರವಿಹೀನರು ಮತ್ತು ವೇಷಧಾರಿಗಳನ್ನು ಇವಳೆಂದಿಗೂ ಒಪ್ಪುವುದಿಲ್ಲ. ಅರಿವು, ಜ್ಞಾನ ಮುಖ್ಯವೇ ಹೊರತು ಯಾವ ಪ್ರಕಾರ ಎಂಬುದರಲ್ಲಿ ಇವರು ಇಂತಹ ಜಾತಿಯ ಜನ ಎಂದು ಬೊಟ್ಟು ಮಾಡಿ ತೋರುವ ನಡವಳಿಕೆಯನ್ನು ವಿರೋಧಿಸಿದವರು. ಅಂಧಶ್ರದ್ಧೆಯನ್ನು ನಂಬಿದ್ದ ಮೂಢ ಜನತೆಗೆ ತನ್ನನ್ನು ತಾನು ತಿಳಿಯುವ ಅರಿವೇ ಗುರು ಎಂಬುದನ್ನು ಬೋಧಿಸಿದರು. ಅರಿವು, ಅನುಭವ, ಅನುಭಾವ, ನಿತ್ಯ ನಿರಂತರವಾದ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ಅಕ್ಕಮ್ಮನಿಗೆ ಸಾಮಾಜಿಕ ಸುಧಾರಣೆಯ ಬಗ್ಗೆ ಅಪಾರ ಕಳಕಳಿಯಿದೆ.

ಧಾರ್ಮಿಕ ಪ್ರಜ್ಞೆ

ವಚನ ಚಳವಳಿ ಮೂಲತಃ ಧಾರ್ಮಿಕ ಚಳವಳಿಯೇ ಸರಿ. ಸಮಾಜದಲ್ಲಿ ಧರ್ಮದ ಸೋಗಿನಲ್ಲಿ ಹೊಟ್ಟೆ ಹೊರೆದುಕೊಳ್ಳುವ ವೇಷಧಾರಿಗಳನ್ನು ಕುರಿತು ತಮ್ಮ ವಚನಗಳಲ್ಲಿ ಶರಣೆಯರು ಟೀಕಿಸಿದ್ದಾರೆ. ಗುರು–ಲಿಂಗಜಂಗಮ ನಿಷ್ಠೆ ಹೇಗಿರಬೇಕು ಎಂದು ಹೇಳುತ್ತಲೇ ಕಟು ಟೀಕೆಗಳ ಮೂಲಕ ಡಾಂಭಿಕ ಭಕ್ತರನ್ನು ಎಚ್ಚರಿಸುವ ಕೆಲಸ ಮಾಡುತ್ತಾರೆ. ಕೆಲವು ವಚನಕಾರ್ತಿಯರ ವಚನಗಳು ನೇರವಾಗಿ ಮತ್ತು ಸರಳವಾಗಿ ಶಿವ ಮತ್ತು ಶಿವಶರಣರ ನೀತಿ, ನಿಯಮ, ಆಚರಣೆಗಳ ಬಗ್ಗೆ ಹೇಳುತ್ತವೆ. ತೋರಿಕೆಯ ಭಕ್ತರು, ವೇಷಧಾರಿ ಜಂಗಮರು, ವಿರಕ್ತಿಗಳ ಬಗ್ಗೆ ಅತ್ಯಂತ ನಿಷ್ಠುರವಾಗಿ ವಿಡಂಭಿಸಿದರು. ಆಚಾರಗಳಿಗೆ ತಪ್ಪಿದವರನ್ನು ಖಂಡಿಸುತ್ತಾರೆ. ಸಮಾಜವನ್ನು ತಿದ್ದುವ ಕೆಲಸ ಮಾಡುತ್ತ ತಪ್ಪಿದವರನ್ನೂ ನಿಂದಿಸುತ್ತಾರೆ. ತಾವು ಸ್ತ್ರೀಯರು, ಸಮಾಜದ ಕೆಳವರ್ಗದ ಜೀವಿಗಳು ಎಂಬುದು ಮುಖ್ಯವಾಗದೆ ಹೊಸ ಕನಸುಗಳನ್ನು ಹೊತ್ತು ಆದರ್ಶಸಮಾಜವನ್ನು ನಿರ್ಮಾಣ ಮಾಡಲು ಹೋರಾಟ ಮಾಡುತ್ತಾರೆ.

ಡಾಂಭಿಕತೆಯ ವಿರೋಧ

ವಚನಕಾರ್ತಿಯರ ಡಾಂಭಿಕ ವಿರೋಧಿ ವಚನಗಳಲ್ಲಿ, ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಗಳ ಖಂಡನೆಯಿದೆ. ಶರಣರ ಲಕ್ಷಣ, ಅರ್ಹತೆ, ಸ್ವರೂಪ, ಗುರುಲಿಂಗ ಜಂಗಮಗಳನ್ನು ಅನುಷ್ಠಾನಕ್ಕೆ ತರುವ ಬಗೆಯನ್ನು ಕಟುವಾದ ಟೀಕೆಗಳ ಮೂಲಕ ಎಚ್ಚರಿಸುವ ಜವಾಬ್ದಾರಿಯಿದೆ. ಶರಣರು ನೇಮ, ಶೀಲ, ವ್ರತಾಚಾರಣೆಗಳ ಬಗೆಗೆ ತಿಳಿಸುತ್ತ, ಅವುಗಳಗೆ ತಪ್ಪಿದವರನ್ನು ಟೀಕಿಸುವ ಭರ್ತ್ಯನೆ ಇದೆ. ಹೊಟ್ಟೆಪಾಡಿಗಾಗಿ ವಂಚಿಸುವ ವೇಷಧಾರಿ ಭಕ್ತ–ಜಂಗಮ ವಿರಕ್ತ ಗುರುಗಳನ್ನು ಕುರಿತಾದ ವಿಡಂಬನೆಯಿದೆ.

ವಚನಕಾರ್ತಿಯರ ಡಾಂಭಿಕತೆಯ ವಿರೋಧದ ಸ್ವರೂಪವನ್ನು ಅವರ ಅಭಿವ್ಯಕ್ತಿ ವಿಧಾನಗಳಲ್ಲಿ ಅರಿಯಬಹುದಾಗಿದೆ.

ಅಮುಗೆ ರಾಯಮ್ಮ

ಅಮುಗೆ ರಾಯಮ್ಮನ ಪ್ರತಿಯೊಂದು ವಚನದಲ್ಲಿಯೂ ನಿಷ್ಠುರದ ಕಾವು ಹೊರಸೂಸುತ್ತದೆ. ವೇಷಧಾರಿಗಳನ್ನು ಕಂಡರಂತೂ ಸಿಡಿನುಡಿಗಳೇ ಹೊರ ಚೆಲ್ಲುತ್ತವೆ.

"ಅಂಗದ ಅಪ್ಯಾಯನಕ್ಕೆ ಲಿಂಗವ ಮರೆದು ತಿರುಗುವ
ಭಂಡ ಭವಿಗಳನೇನೆಂಬೆನಯ್ಯಾ

ಲಿಂಗದಲ್ಲಿ ನಿತ್ಯರೆಲ್ಲ; ಜಂಗಮದಲ್ಲಿ ಪ್ರೇಮಿಗಳಲ್ಲ
ಹಿಡಿದ ಛಲದಲ್ಲಿ ಕಡುಗಲಿಗಳಲ್ಲ
ಮೃಢನ ಕಂಡಿಹೆನೆಂಬ ಮೂರ್ಖರ ಮುಖವ ನೋಡಲಾಗದು
ಅವರಡಿಯ ಮೆಟ್ಟಲಾಗದು ಕಾಣಾ ಅಮುಗೇಶ್ವರಾ"[೯]

ಅಂಗಸುಖಕ್ಕೋಸ್ಕರಕ್ಕಾಗಿ, ತುತ್ತಿನ ಚೀಲವನ್ನು ತುಂಬಿಸುವ ಅಂಗದ ಮೇಲಣ ಲಿಂಗವನ್ನು ಮರೆತು ಕೇವಲ ಅಂಗತೃಪ್ತಿಗಾಗಿ ಹಗಲಿರುಳು ಪರಿತಪಿಸುವ ಭಂಡ ಭವಿಗಳು ಲಿಂಗದಲ್ಲಿ ನಿರತರೂ ಅಲ್ಲ, ಇತ್ತ ಜಂಗಮ ಪ್ರೇಮಿಗಳು ಅಲ್ಲ, ಹಿಡಿದ ಕಾರ್ಯವನ್ನು ಕಡೆಗಣಿಸುವ ದೃಢನಿಷ್ಠೆಯುಳ್ಳವರೂ ಅಲ್ಲ. ಇಂತಹ ಮೂರ್ಖರ ಮುಖದರ್ಶನವನ್ನು ಮಾಡಬಾರದು, ಅವರು ತುಳಿದ ಹಾದಿಯನ್ನು ಕೂಡ ಅನುಸರಿಸಲಾಗದು ಎಂದು ನಿಷ್ಠುರವಾಗಿ ಟೀಕಿಸಿದ್ದಾಳೆ.

ಜ್ಞಾನಿ, ಭಕ್ತ ಎಂದೆಲ್ಲ ಹಣೆಪಟ್ಟಿ ಹಚ್ಚಿಕೊಂಡು ಹೊಟ್ಟೆ ಹೊರೆಯುವವರನ್ನು ವೇಷಧಾರಿಗಳು, ಅಜ್ಞಾನಿಗಳು, ಸಮಾಜಘಾತುಕರೆಂದು ಕರೆದಿದ್ದಾಳೆ.

"ವೇಷವ ತೊಟ್ಟು ಗ್ರಾಸಕ್ಕೆ ತಿರುಗುವ
ವೇಷಧಾರಿಗಳ ಕಂಡಡೆ ನಾಚಿತೆನ್ನ ಮನ
ಲಿಂಗವನರಿಯದೆ ಲಿಂಗೈಕ್ಯರೆಂಬ
ಅಂಗವಿಕಾರಿಗಳ ಕಂಡಡೆ ಹೊದ್ದದು ಎನ್ನಮನ
ಅರಿದು ಆಚರಿಸದೆನೆಂಬ ಅಜ್ಞಾನಿಗಳ ಕಂಡಡೆ
ಮೃಣನ ಶರಣರು ಮೆಚ್ಚುವರೆ ಅಮುಗೇಶ್ವರಾ?
ಲಿಂಗವನರಿಯದಿರ್ದಡೆ ಎಂತು ಲಿಂಗೈಕ್ಯರೆಂಬೆನಯ್ಯಾ?"[೧೦]

ರಾಯಮ್ಮ ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆನ್ನುವ ಜಾಯಮಾನಕ್ಕೆ ಸೇರಿದವಳು. ತಾನು ಪ್ರತ್ಯಕ್ಷವಾಗಿ ಕಂಡಿದ್ದನ್ನು ಅತ್ಯಂತ ನಿರ್ಭಯವಾಗಿ ನಿಸ್ಸಂಕೋಚದಿಂದ ಹೇಳುವ ಎದೆಗಾರಿಕೆ ಅವಳದು.

"ಮಂಡೆಯ ಬೋಳಿಸಿಕೊಂಡು
ತುಂಡುಗಂಬಳಿಯ ಹೊದ್ದವರ ಕಂಡೆ
ನಂಬಲಾರೆ ನಚ್ಚಲಾರೆ
ಈ ವೇಷವ ನಾಚಿದೆ ಅಮುಗೇಶ್ವರಾ"[೧೧]

ಭಕ್ತರು, ಶರಣರಿದ್ದಂತೆಯೇ ಹೊಟ್ಟೆಪಾಡಿಗಾಗಿ ಕೆಲವು ವೇಷಧಾರಿಗಳು ತಾವು ಜಂಗಮರು, ಶರಣರೆಂದು ಹೇಳಿಕೊಂಡು ಮುಗ್ಧಜನರನ್ನು ವಂಚಿಸುತ್ತಿದ್ದರು, ಇಂತಹ ವೇಷಧಾರಿಗಳ ನಿಜ

ನಿಲುವನ್ನರಿಯದ ಮುಗ್ಧಜನರು ಅವರನ್ನು ಸತ್ಕರಿಸಿ, ಪೂಜಿಸುತ್ತಿದ್ದರು. ಇಂತಹ ನಟನ ಮಣಿಗಳನ್ನು ಕಂಡು ರಾಯಮ್ಮ ಅಂತಹ ಡಾಂಭಿಕರ ಮೇಲೆ ಕಿಡಿ ಕಾರಿದ್ದಾಳೆ. ಉದರ ಪೋಷಣೆಗಾಗಿ ಜನರನ್ನು ಮೆಚ್ಚಿಸುವ ಇಂತಹ ಕುನ್ನಿಗಳನ್ನು ಪೂಜಿಸಿದರೆ ನರಕ ತಪ್ಪದು ಎಂದು ಜನರನ್ನು ಎಚ್ಚರಿಸುತ್ತಾಳೆ ರಾಯಮ್ಮ.

ಭಕ್ತಿ, ಜ್ಞಾನ, ವೈರಾಗ್ಯಗಳಿಲ್ಲದೆ ಡಂಭಾಚಾರಿಗಳಾಗಿ, ಕೇವಲ ತೋರಿಕೆಗೆ ಲಿಂಗಧಾರಿ–ಗಳಾಗಿರುವವರು ಬಹಿರಂಗದಲ್ಲಿ ಭಕ್ತರ ವೇಷ ಧರಿಸಿ ಅಂತರಂಗದಲ್ಲಿ ಆಷಾಡಭೂತಿ–ಗಳಾಗಿರುವವರನ್ನು ಕಂಡು ರಾಯಮ್ಮ ಕಿಡಿಕಾರುತ್ತಾಳೆ. ಅಂತಹ ವೇಷಧಾರಿಗಳಿಗೆ ಮಣೆಹಾಕಿ ಓಲೈಸುತ್ತಿರುವ ಜನರನ್ನು ಕಂಡು ಕನಿಕರ ಪಟ್ಟಿದ್ದಾಳೆ. ಜನಸಮುದಾಯದ ಅಜ್ಞಾನಕ್ಕೆ ಮರುಗಿದ್ದಾಳೆ. ಜನರಿಗೆ ವಿರಕ್ತಿಯ ಅರ್ಥವನ್ನು ತಿಳಿಸಿಕೊಟ್ಟು ನಿಜವಾದ ವಿರಕ್ತ ಯಾರು ಎಂಬುದನ್ನು ತಿಳಿಸಿಕೊಡುತ್ತಾಳೆ.

"ಅರಿಯಬಲ್ಲಡೆ ವಿರಕ್ತನೆಂಬೆನು
ಆಚಾರವನರಿದಡೆ ಅಭೇದ್ಯನೆಂಬೆನು
ಸ್ತುತಿನಿಂದನೆಗೆ ಹೊರಗಾದಡೆ ಸುಮ್ಮಾನಿ ಎಂಬೆನು
ಘನತತ್ವವನರಿದು ಶಿಶು ಕಂಡ ಕನಸಿನಂತೆ ಇದ್ದಡೆ
ಶಿವಜ್ಞಾನಿ ಎಂಬೆನಯ್ಯಾ ಅಮುಗೇಶ್ವರಾ"[೧೨]

ಈ ವಚನದಲ್ಲಿ ವಿರಕ್ತನ ಲಕ್ಷಣಗಳನ್ನು ಪಟ್ಟಿಮಾಡುತ್ತಾ ಸತ್ಯಶುದ್ಧರು, ನಿರ್ಮಲ ಭಕ್ತರು ಮಾತ್ರವೇ ನಿಜವಾದ ವಿರಕ್ತರೆನ್ನುವ ರಾಯಮ್ಮ ವೇಷಧಾರಿಗಳು ವಿರಕ್ತರಲ್ಲ ಎಂದು ಸ್ಪಷ್ಟಪಡಿಸುತ್ತಾಳೆ.

ಅಮುಗೆ ರಾಯಮ್ಮ ಹೇಳಬೇಕಾದುದನ್ನು ನೇರವಾಗಿ ಹೇಳುವ ಸ್ವಭಾವದವಳು. ಆದ್ಯರ ವೇದ್ಯರ ವಚನಗಳಿಂದ ಅರಿತಿದ್ದೇವೆ ಎಂಬ ಜನಗಳಿಗೆ ಚಾಟಿ ಬೀಸುತ್ತಾಳೆ. ಅವಳ ಪ್ರಕಾರ, ಜ್ಞಾನವೆಂಬುದು ಬೀದಿ ವಸ್ತುವಲ್ಲ, ನಿಜವಾದ ವಿರಕ್ತಿಯಾದವರು ಎಲ್ಲೂ ತನ್ನನ್ನು ಅನುಭಾವಿ ಎಂದು ವೈಭವೀಕರಿಸಿ ಹೇಳಿಕೊಳ್ಳುವುದಿಲ್ಲ ಎಂದು ಹೇಳುತ್ತ ಆಕೆ ಭಕ್ತಿ ಎನ್ನುವುದು ತೋರಿಕೆಗಲ್ಲ ಅದು ಅಂತರಂಗದೊಳಗೆ ಆಚರಿಸಬೇಕಾದದ್ದು ಎಂದು ಹೇಳುತ್ತಾಳೆ.

ಹಾಗೆಯೇ ಡಾಂಭಿಕ ಭಕ್ತರನ್ನು ಕುರಿತು ಟೀಕಿಸಿದ್ದಾಳೆ.

"ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನ ಮರಿ ಆನೆಯಾಗಬಲ್ಲುದೆ

ಸೀಳುನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ"[೧೩]

ಈ ವಚನದಲ್ಲಿ ರಾಯಮ್ಮ ಕೇವಲ ದೇವರ ಹೆಸರನ್ನು ಪಠಿಸುತ್ತ ತಿರುಗುವ ಮೂರ್ಖರ ಡಾಂಭಿಕತೆಯನ್ನು ವಿಡಂಬಿಸಿದ್ದಾಳೆ. ಒಂದೇ ಆಕಾರ, ಒಂದೇ ಬಣ್ಣವಿದ್ದ ಮಾತ್ರಕ್ಕೆ ಕಾಗೆ ಕೋಗಿಲೆಯಾಗುವುದಿಲ್ಲ. ಕೋಗಿಲೆ ಕಾಗೆಗಿಂತ ಭಿನ್ನವಾಗುವುದು ತನ್ನ ಇನಿದಾದ ಧ್ವನಿಯಿಂದ, ಆಡಿನ ಮರಿಯೂ ನಾಲ್ಕು ಕಾಲುಗಳುಳ್ಳದ್ದಾಗಿದ್ದು, ಸಸ್ಯಾಹಾರಿಯಾದ ಮಾತ್ರಕ್ಕೆ ದೈತ್ಯ ಆನೆಗೆ ಸರಿಗಟ್ಟುವುದಿಲ್ಲ. ಹೀಗಿರುವಾಗ ನಿಜಭಕ್ತರಂತೆ ನಾಮ ಪಠಿಸಿದ ಮಾತ್ರಕ್ಕೆ ಡಾಂಭಿಕರು ಭಕ್ತರಾಗುವುದಿಲ್ಲ. ನಿಜವಾದ ಭಕ್ತನಿಗೆ ಇರಬೇಕಾದ ಗುಣವೆಂದರೆ ಅರಿವು, ಆಚಾರ ಮತ್ತು ಇವುಗಳಿಂದ ಕೂಡಿದ ತಿಳಿವಳಿಕೆ ಅಂದರೆ ಸಮ್ಯಕ್‌ಜ್ಞಾನ ಎನ್ನುತ್ತಾಳೆ.

ಆಚಾರವೇ ಪ್ರಾಣವಾದ ಅಕ್ಕಮ್ಮ ಅಮುಗೆ ರಾಯಮ್ಮನಂತೆಯೇ ತೋರಿಕೆಯ ಭಕ್ತರನ್ನೂ, ವೇಷಧಾರಿಗಳನ್ನೂ, ಡಾಂಭಿಕ ಭಕ್ತರನ್ನು ಕಂಡರೆ ಕಿಡಿಕಾರುತ್ತಾಳೆ. ಈಕೆ ಯಾವುದೇ ಕಾರಣಕ್ಕೂ ಆಚಾರ ಭ್ರಷ್ಟತೆಯನ್ನು ಸಹಿಸುವವಳಲ್ಲ. ಆಚಾರ ಶುದ್ಧಿಯ ವಿಷಯದಲ್ಲಿ ಗುರುಲಿಂಗ ಜಂಗಮಕ್ಕೂ ರಿಯಾಯಿತಿ ನೀಡಿದವಳಲ್ಲ. ಇಂತಹ ಆಚಾರ ನಿಷ್ಠೆ ಅಕ್ಕಮ್ಮ ತೋರಿಕೆಯ ಭಕ್ತರನ್ನು, ವೇಷಧಾರಿಗಳನ್ನು ಡಾಂಭಿಕ ಭಕ್ತರನ್ನು ಕಂಡರೆ ಕಿಡಿಕಾರುತ್ತಾಳೆ.

"ವೇಷ ಎಲ್ಲಿರದು?
ಸೂಳೆಯಲ್ಲಿ, ಡೊಂಬನಲ್ಲಿ, ಭೈರೂಪನಲ್ಲಿರದೆ?
ವೇಷವ ತೋರಿ ಒಡಲ ಹೊರೆವ
ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೊ
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ"[೧೪]

ಸೂಳೆಯಂತೆ, ಡೊಂಬನಂತೆ, ಭೈರೂಪನಂತೆ, ಹೊಟ್ಟೆಪಾಡಿಗೆ ವೇಷಹಾಕುವವರಲ್ಲಿ ನಿಜಭಕ್ತಿಯನ್ನು ಅರಸಲು ಸಾಧ್ಯವೆ? ದಾಸವೇಳಿಯ ಮಕ್ಕಳಿಗೆ ನಿಜಭಕ್ತಿಯ ಅರಿವಾದರೂ ಎಲ್ಲಿಂದ ಬಂದೀತು ಎಂದು ಅಕ್ಕಮ್ಮ ವೇಷಧಾರಿಗಳ ಭಕ್ತಿಯನ್ನು ಚುಚ್ಚಿ ನುಡಿಯುತ್ತಾಳೆ. ಹೊಟ್ಟೆಪಾಡಿಗಾಗಿ ವೇಷಹಾಕುವ ಡಾಂಭಿಕರನ್ನು ಕಂಡು ಮೋಸ ಹೋಗಬಾರದೆಂಬ

ಎಚ್ಚರಿಕೆಯನ್ನು ಸಹ ನೀಡುತ್ತಾಳೆ. ಲಾಂಛನವನ್ನು ತೊಟ್ಟ ಮಾತ್ರಕ್ಕೆ ಭಕ್ತರೆನಿಸಿಕೊಳ್ಳುವುದಿಲ್ಲ. ಅಕ್ಕಮ್ಮನ ಈ ವಚನ ವೈಚಾರಿಕತೆಯ ತಳಹದಿಯ ಮೇಲೆ ಮೂಡಿದೆ.

ಗಡ್ಡ ಮಂಡೆ ಬೋಳಾದವರೆಲ್ಲ ಭಕ್ತರಲ್ಲ. ಆದರೂ ಅವುಗಳನ್ನೇ ಲಾಂಛನಗಳನ್ನಾಗಿ ಬಳಸಿಕೊಂಡು ಜ್ಞಾನಿಗಳಂತೆ ಅಧ್ಯಾತ್ಮವ ನುಡಿಯುತ್ತ ಒಡಲ ಹೊರೆಯುವ ವಿರಕ್ತರು ಮುಗ್ಧ ಭಕ್ತರನ್ನು ಶೋಷಿಸುತ್ತಾರೆ ಎಂದು ಟೀಕಿಸುವ ಅಕ್ಕಮ್ಮನದು ಆಚಾರ, ನೇಮ, ವ್ರತ, ನಿಷ್ಠೆಗಳೇ ವಚನಗಳ ಕೇಂದ್ರ ವಸ್ತು. ವೇಷಕ್ಕಿಂತ, ಬಾಹ್ಯಾಡಂಬರಕ್ಕಿಂತ ಒಳಗಿನ ಅರಿವು ಮುಖ್ಯ. ಹೊರಗೊಂದು, ಒಳಗೊಂದು ಆಚರಿಸುವವನು ಶರಣನೇ ಅಲ್ಲ ಎಂದು ಖಂಡಿತವಾಗಿ ನುಡಿಯುತ್ತಾಳೆ.

ಗಡ್ಡ ಬಿಟ್ಟ ಮಾತ್ರಕ್ಕೆ ಯಾರೂ ಹಿರಿಯರಲ್ಲ. ಹಾಗೆಯೇ ವೇಷಭೂಷಣಗಳು ಹಿರಿತನವನ್ನು ತಂದುಕೊಡುವುದಿಲ್ಲ. ಆಚಾರ, ಗುಣ, ನಡತೆಗಳಿಂದ ವ್ಯಕ್ತಿಯು ದೊಡ್ಡವನೆನಿಸಿಕೊಳ್ಳುತ್ತಾನೆಯೇ ಹೊರತು ಅನಾಚಾರಿಯಾಗಿದ್ದುಕೊಂಡು ಭಕ್ತರಲ್ಲಿ ಕ್ರೋಧ-ವನ್ನು, ಭ್ರಷ್ಟರಲ್ಲಿ ಕೂಟವನ್ನು ನಡೆಸುವವನು ನರಕ ಹೊಂದುತ್ತಾನೆ ಎಂಬುದು ಅಕ್ಕಮ್ಮನ ನಿಲುವು.

ವ್ರತ ಹಿಡಿದ ಭಕ್ತರು ಆಚಾರದಲ್ಲಿ ಶ್ರದ್ಧೆ ಹೊಂದಿರಬೇಕು, ಆಚಾರ ತಪ್ಪಿದರೆ ಪ್ರಾಯಶ್ಚಿತ ಮಾಡಿಕೊಳ್ಳಲು ಅದೇನು ವೆಚ್ಚ ಹೊನ್ನಲ್ಲ. ಸಂತೆಯ ವ್ಯವಹಾರವಲ್ಲ, ವ್ರತ ಹಿಡಿದ ನಿಜವಾದ ಭಕ್ತನು ಪರಧನ ಬಯಸದೇ ಪರಸತಿಗಾಶಿಸದೆ, ಅವರಿವರಲ್ಲಿ ಭಿಕ್ಷೆ ಬೇಡಿ ಜಂಗಮ ದಾಸೋಹ ಮಾಡದೆ ಸ್ವಂತ ದುಡಿಮೆಯಿಂದ ಬದುಕಬೇಕು ಎಂಬುದು ಅಕ್ಕಮ್ಮನ ವಾದವಾಗಿದೆ.

ಹಡಪದ ಅಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮನ ನಡೆಯೇ ಸಮಾಧಾನಕರವಾದುದು, ಸರಳವಾದುದು. ರಾಯಮ್ಮ, ಅಕ್ಕಮ್ಮನಂತೆ ಈಕೆ ತೀವ್ರ ಖಂಡನಾವಾದಿಯಲ್ಲ, ಹೇಳಬೇಕಾದುದನ್ನು ಸಮಾಧಾನದಿಂದ ತಿಳಿಸಿ ಹೇಳುವ ಮಾರ್ಗವಾಗಿದೆ. ಲಿಂಗಮ್ಮನ ಅಭಿವ್ಯಕ್ತಿ ಸಾತ್ವಿಕ ರೋಷವನ್ನು ಒಳಗೊಂಡಿದೆ. ಸಾಧನೆಯಲ್ಲಿ ನಂಬಿಕೆಯನ್ನು ಇಟ್ಟಿರುವ ಲಿಂಗಮ್ಮನಿಗೆ ಬರಿಯ ಮಾತಿನ ಮಲ್ಲರನ್ನು ಕಂಡರಾಗದು. ಹಾಗೆಯೇ ಬರೀ ಬೋಧನೆಯಲ್ಲಿಯೇ ಕಾಲಹರಣ ಮಾಡುವ ಕಾಯಕರಹಿತರು, ಮೈಗಳ್ಳರು, ಸೋಮಾರಿಗಳನ್ನು ಲಿಂಗಮ್ಮ ಸಹಿಸುವುದಿಲ್ಲ. ಅಂಥವರನ್ನು ಖಂಡಿಸುತ್ತಾಳೆ.

ಆಡಂಬರ, ವೈಭವದ ದೊಂಬರಾಟ ಮಾಡುವ ಜನರನ್ನು ಕುರಿತು ಕಟುವಾಗಿ ಟೀಕಿಸುತ್ತಾಳೆ. ಡಾಂಭಿಕ ಭಕ್ತರನ್ನು ಕುರಿತು ಟೀಕಿಸುತ್ತಾಳೆ. ಹಾಗೆ ಟೀಕಿಸುವ ಹಿಂದೆಯು ಲಿಂಗಮ್ಮನಲ್ಲಿ ಸಾತ್ವಿಕ ರೋಷವಿದೆ.

ಮೋಳಿಗೆ ಮಹಾದೇವಿಯು ವೈಚಾರಿಕ ಮಾರ್ಗದಲ್ಲಿ ಮುನ್ನಡೆದವಳು, ತಿಳುವಳಿಕೆಯುಳ್ಳವಳು. ನಡೆ–ನುಡಿ ಶುದ್ಧೀಕರಣವೇ ಅನುಭಾವದ ಗುರಿ ಎಂದಿರುವಳು.

"ಊರ್ವಸಿ ಕರ್ಪೂರವ ತಿಂದು
ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರಲ್ಲದೆ
ಹಂದಿ ಕರ್ಪೂರವ ತಿಂದು
ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರೆ
ಹುಡುಹುಡು ಎಂದಟ್ಟುವರಲ್ಲದೆ?
ನಡೆನುಡಿ ಶುದ್ಧವುಳ್ಳವರು ಪುರಾತನರ ವಚನವ ಓದಿದಡೆ
ಅನುಭಾವ ಮಾಡಿದಡೆ ಮೆಚ್ಚುವರಲ್ಲದೆ,
ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ
ಅನುಭಾವವ ಮಾಡಿದಡೆ ಮೆಚ್ಚುವರೆ?
ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ
ಆ ಹಂದಿಗಿಂತ ಕರಕಷ್ಟು
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ"[೧೫]

ನಡೆನುಡಿ ಶುದ್ಧವಿಲ್ಲದವರು ಆದ್ಯರ ವಚನಗಳನ್ನು ಓದುವುದನ್ನು "ಹಂದಿ ಕರ್ಪೂರವ ತಿಂದು ಮುತ್ತಿಡುವ ಪರಿಯನ್ನು" ಎಂಬುದಾಗಿ ಅತ್ಯಂತ ಅರ್ಥಪೂರ್ಣ ನೆಲೆಯಲ್ಲಿ ಹೋಲಿಸಿರುವ ಮಹಾದೇವಿ ನಡೆನುಡಿ ಶುದ್ಧವಿಲ್ಲದವರು ಹಂದಿಗಿಂತ ಕರಕಷ್ಟ ಎಂದು ಟೀಕಿಸುತ್ತಾಳೆ. ಆಚಾರಹೀನರಿಗೆ ಔಚಿತ್ಯಪ್ರಜ್ಞೆ ಎಂಬುದು ಇರುವುದಿಲ್ಲ. ಯಾವ ವಚನಗಳನ್ನು ಯಾವ ಸಂದರ್ಭದಲ್ಲಿ ಉದ್ದರಿಸಬೇಕು ಎಂಬ ಅರಿವು ಸಹ ಇರುವುದಿಲ್ಲ. ಮಣಮಣ ಮಂತ್ರ ಹೇಳುವಂತೆ ಮಾತಿಗೊಂದು ವಚನ ಉದ್ಧರಿಸಿದ ಮಾತ್ರಕ್ಕೆ ಅವನು ಅನುಭಾವಿ ಎನಿಸಿಕೊಳ್ಳುವುದಿಲ್ಲ, ಇದೆಲ್ಲ ಉದರ ಪೋಷಣೆಯ ನಿಮಿತ್ತ ನಡೆಸುವ ನಾಟಕ ಎಂದು ಮಹಾದೇವಮ್ಮ ಕಟುವಾಗಿ ಟೀಕಿಸುತ್ತಾಳೆ. ವಚನ ಓದುವ ಡಾಂಭಿಕರ ವಿಡಂಬನೆ ಇಲ್ಲಿ ಕಂಡುಬರುತ್ತದೆ.

ಕಾಳವ್ವೆಯು ಡಾಂಭಿಕ ಭಕ್ತರನ್ನು ಕುರಿತು ಕಟುವಾಗಿ ಟೀಕಿಸಿದ್ದಾಳೆ. ಹೊಟ್ಟೆಯ ಪಾಡಿಗಾಗಿ ಶಿವಭಕ್ತರ ಸೋಗು ಹಾಕಿದವರನ್ನು ಖಂಡಿಸುತ್ತಾಳೆ ಹಾಗೂ ಸಮಯ

ಸಾಧಕರಾಗಿ, ಸೋಮಾರಿಗಳಾಗಿ ಮೋಸ ವಂಚನೆಗಳನ್ನು ಮಾಡುತ್ತ ಕಾಲಹರಣ ಮಾಡುವವರು ನಿಜವಾದ ಶಿವಭಕ್ತರನ್ನು ನಿಂದಿಸುತ್ತಾರೆ. ಇಂತಹವರ ವಿರುದ್ಧ ಕಾಳವ್ವೆ ಸಿಡಿದುನಿಲ್ಲುತ್ತಾಳೆ.

"ಒಡೆಯರೆಂಬ ತುಡುಗಣಿಗಳು ತಾವು ಪೂಜೆಗೊಂಬಲ್ಲಿ
ಅವರ ಮನೆಗೆ ಹೂ ಹಣ್ಣು ಕಾಯಿ ಪತ್ರೆಗಳ ತಾಹ,
ಹೋಗುವ ಬರುವ ಊಳಿಗವ ಕೊಂಬಾತ ಭಕ್ತನಲ್ಲ;
ಅಲ್ಲಿ ಪೂಜೆಗೊಂಬಾತ ಜಂಗಮನಲ್ಲ
ಇವರಿಬ್ಬರೂ ನಾಯಕ ನರಕಕ್ಕೆ ಯೋಗ್ಯರಯ್ಯಾ
ಅವರ ಉರಿಲಿಂಗಪೆದ್ದಿಗಳರಸ ಒಲ್ಲೆನೊಲ್ಲನವ್ವಾ"[೧೬]

ಗುರು ಶಿಷ್ಯರ ಸಂಬಂಧವನ್ನು ಕುರಿತು ಹೇಳುವ ಈ ವಚನವು ಗುರುವಿನ ಹಿರಿಮೆ ಘನತೆಗಳನ್ನು ಕುರಿತು ಹೇಳುತ್ತದೆ. ಗುರುವು ಭಕ್ತನ ಆತ್ಮೋದ್ಧಾರಕ್ಕೆ ನೆರವಾಗಬೇಕೇ ಹೊರತು, ಅವನಿಂದ ಪಡೆದುಕೊಂಡು ಬದುಕಬಾರದು. ತನ್ನ ಭಕ್ತನಿಗೆ ಸಾಧನೆಯ ಹಾದಿಯನ್ನು ತೋರಿಸಬೇಕೇ ಹೊರತು ಅದಕ್ಕಾಗಿ ಅವನಿಂದ ಲಂಚವನ್ನು ಪಡೆಯಬಾರದು. ಅವನ ಜೊತೆಯಲ್ಲಿಯೇ ಇದ್ದುಕೊಂಡು ಕುಲವನರಸಬಾರದು. ಗುರುಭಕ್ತರ ಸಂಬಂಧ ಉತ್ತಮ ಚಾರಿತ್ರ್ಯ ಮತ್ತು ಸದ್ಗುಣಗಳಿಂದ ಕೂಡಿದ್ದಾಗಿರಬೇಕು. ಕಾಳವ್ವೆಯ ವೈಚಾರಿಕ ಪ್ರಜ್ಞೆಗೆ ಈ ವಚನ ಅತ್ಯುತ್ತಮ ನಿದರ್ಶನವಾಗಿದೆ.

ಪ್ರಸ್ತುತ ವಚನದಲ್ಲಿ 'ಒಡೆಯರು' ಮತ್ತು 'ತುಡುಗಣಿಗಳು' ಈ ಪದಗಳ ವಿಶೇಷವಾದ ಅರ್ಥವನ್ನು ಪಡೆದುಕೊಂಡಿವೆ. ಅಂದರೆ ಶ್ರೀಮಂತರು, ಜಮೀನ್ದಾರರು, ಪುರೋಹಿತರು ಮೇಲುವರ್ಗದವರು ಯಾರಾದರೂ ಆಗಬಹುದು. ಇಂತಹವರು ಸಂಪಾದಿಸಿದ್ದೆಲ್ಲವೂ ಕಳ್ಳತನವೇ ಆಗಿದೆ. ಹೀನಕುಲದವಳಾದ ತನಗೆ ಈ ವೃತ್ತಿ ಇಷ್ಟೊಂದು ಅಸಹ್ಯ, ಕ್ಷುದ್ರವಾಗಿರುವಾಗ ಸಮಾಜದ ಮೇಲುವರ್ಗದವರು ಎನ್ನಿಸಿಕೊಂಡವರು ನಿರ್ಭೀತಿಯಿಂದ ಈ ಕೆಲಸವನ್ನು ಅಧಿಕಾರದ ಮರೆಯಲ್ಲಿ ನಿರಂತರವಾಗಿ ನಡೆಸುತ್ತಿರುವುದನ್ನು ಕಂಡು ಕಾಳವ್ವೆಯ ಸಿಟ್ಟನ್ನು ಹೆಚ್ಚಿಸಿದೆ. ಹೀಗೆ ಕಾಳವ್ವೆ ಸ್ವಾರ್ಥ ಸಾಧಕರನ್ನು, ನಯವಂಚಕರನ್ನು, ವೇಷಧಾರಿಗಳನ್ನು ಅತ್ಯಂತ ಹೀನಾಯವಾಗಿ ಸಂಬೋಧಿಸುತ್ತಾಳೆ.

ಭಕ್ತಿ ಎನ್ನುವುದು ಬೂಟಾಟಿಕೆಯಾಗಬಾರದು. ಪರಿಶುದ್ಧ ಭಕ್ತಿ, ನಿಯಮಗಳನ್ನು ಮೀರದ ನಿಷ್ಠೆ ಇದ್ದಾಗಲೇ ಸಮಾಜದಲ್ಲಿ ಗೌರವವಾಗಿ ಬಾಳಲು ಸಾಧ್ಯ ಎನ್ನುವ ಕಾಳವ್ವೆಯ ಕಳಕಳಿ, ಚಿಂತನಶೀಲವೂ ವಿಚಾರಪ್ರದವೂ ಆಗಿದೆ.

ಲಿಂಗಧಾರಿತ ಪ್ರಜ್ಞೆ

ಸಾಮಾಜಿಕ ಸುಧಾರಣೆಯ ಚಳವಳಿಯಾದ ವಚನ ಚಳವಳಿಯ ಕಾಲದಲ್ಲಿ ಮುಖ್ಯವಾಗಿ 'ಸ್ತ್ರೀ ಸಂವೇದನೆ' ಎಂಬುದು ಅಭಿವ್ಯಕ್ತಿಯ ರೂಪ ಪಡೆಯಿತು, ಅದು ತನ್ನ ಅನಾದಿ ಕಾಲದ ನೋವು, ಹತಾಶೆ, ದುಃಖ, ಬೇಸರ, ಯಾತನೆ, ವಿರಹ, ಪ್ರತಿಭಟನೆಗಳನ್ನು ನೇರವಾಗಿ, ಸ್ವತಂತ್ರವಾಗಿ ಮುಚ್ಚು ಮರೆಯಿಲ್ಲದೆ ಸಾರಿತು. ಅಕ್ಷರ ಪ್ರಪಂಚದ ಗುತ್ತಿಗೆ ಕೇವಲ ಪುರುಷರದಲ್ಲ ಎಂಬ ಪ್ರತಿಭಟನಾತ್ಮಕ ಧೊರಣೆ ಎಂಬಂತೆ ಸಮಾಜದ ಹತ್ತು-ಹಲವು ಕಸುಬುಗಳ ಮಹಿಳೆಯರು ಬಸವಣ್ಣನವರ ಚಳವಳಿಯ ಮುಖ್ಯವಾಹಿನಿಗೆ ಬಂದರು. ವಚನಕಾರ್ತಿಯರು ಇದುವರೆಗೆ ಇಲ್ಲದ ಅಭಿವ್ಯಕ್ತಿ ಸ್ವಾತಂತ್ರ್ಯದ ಮುಖಾಂತರ ಸಾಧನೆ ಮಾಡಿದರು.

'ಮೋಕ್ಷದ ಹಾದಿಗೆ ಸ್ತ್ರೀಯರು ನಿಷಿದ್ಧ' ಎಂಬುದನ್ನು ಕಿತ್ತೊಗೆದು ಸರ್ವರೂ ಲಿಂಗದೀಕ್ಷೆಗೆ ಅರ್ಹರಾದರು. ಆ ಮೂಲಕ ಸಮಾನತೆಯನ್ನು ಗಳಿಸಿ ಆತ್ಮದ ಉದ್ಧಾರಕ್ಕೆ ಗಂಡು-ಹೆಣ್ಣು ಬೇಧವಿಲ್ಲ ಎಂಬ ಧೋರಣೆಯ ಮೂಲಕ ವಚನ ಚಳವಳಿ ಮಹಿಳಾ ಬದುಕಿನ ಬದಲಾವಣೆಯನ್ನು ತಂದಿತು. ಹೆಣ್ಣಿಗೂ ಸಹ ಗಂಡಿನಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ, ತಾನು ನಂಬಿದ ಮೌಲ್ಯಗಳನ್ನು ಆಚರಣೆಗೆ ತರುವ, ಪರಸ್ಪರ ಸಾಮರಸ್ಯದಿಂದ ಸ್ವತಂತ್ರವಾಗಿ ಬದುಕುವ ಚಿಂತಿಸುವ ಅವಕಾಶ ದೊರೆಯಿತು. 'ಶರಣಸತಿ-ಲಿಂಗಪತಿ'ಯ ತತ್ತ್ವದಡಿ ಲಿಂಗಾಂಗ ಸಾಮರಸ್ಯದ ಮಾರ್ಗದಲ್ಲಿ ಸಾಧಿಸಲು ಶರಣ-ಶರಣೆಯರ ಸಮೂಹ ಮುಂದಾಗಿ, ಗಂಡು-ಹೆಣ್ಣು ಎಂಬ ಅಸಮಾನತೆಯನ್ನು ತೊಡೆದುಹಾಕಲು ಶ್ರಮಿಸಿದರು.

ಶರಣೆ ಗೊಗ್ಗವ್ವೆಯ ವಚನ ಹೀಗಿದೆ:

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದೆಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ?"[೧೭]

ಆತ್ಮಜ್ಞಾನಕ್ಕೆ ಅನುಭಾವ ಸಾಧನಗೆ ಅರಿವನ್ನು ಗಳಿಸಲು ಸ್ತ್ರೀ ಪುರುಷ ಬೇಧವನ್ನು ನಿರಾಕರಿಸುವ ವಚನ ಇದಾಗಿದೆ. ಗಂಡು ಹೆಣ್ಣುಗಳ ಲಿಂಗ ವಿಶಿಷ್ಟತೆಯನ್ನು ಸೂಚಿಸುವ ಜೈವಿಕ ಲಕ್ಷಣಗಳು ದೇಹರಚನೆಗೆ ಮಾತ್ರ ಸಂಬಂಧಿಸಿದ್ದು, ಅರಿವಿಗೆ ಈ ಲಿಂಗಭೇದವಿಲ್ಲ. ಜೇಡರ ದಾಸಿಮಯ್ಯನ ವಚನವನ್ನು ಇದು ನೆನಪಿಸುವಂತಿದೆ. ಮಹಿಳೆಯರಿಗೆ ಆಧ್ಯಾತ್ಮಿಕ

ಅವಕಾಶಗಳನ್ನು ಮುಕ್ತಗೊಳಿಸಿದರೆ ಅರಿವಿಗೆ ಲಿಂಗತಾರತಮ್ಯವಿಲ್ಲ ಎನ್ನುವ ಗೊಗ್ಗವ್ವೆಯ ಧೋರಣೆ ಮಹಿಳೆಯರ ವೈಚಾರಿಕ ವ್ಯಕ್ತಿತ್ವವನ್ನು ಬಲಪಡಿಸಿದೆ ಎನ್ನಬಹುದು.

ಅಕ್ಕಮಹಾದೇವಿ

"ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗದಡೆ
ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ
ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ಗುರವಿಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ"[೧೮]

ತನ್ನಿಚ್ಛೆಯಂತೆ ಬದುಕಿದ ಅಕ್ಕ, ವ್ಯಕ್ತಿ ಸ್ವಾತಂತ್ರ್ಯವನ್ನು ಮೆರೆದವಳು, ಅಕ್ಕ ನಿರ್ಭಯವಾಗಿ ಹೇಳುವ ಪರಿಯೇ ಹೀಗಿದೆ. ಇಲ್ಲಿ ಗಂಡು ಹೆಣ್ಣುಗಳೆಂಬ ಅಹಂ ಕಳೆದುಕೊಂಡು ಸಾಧನೆ ಮಾಡಬೇಕೆಂದು ಅಕ್ಕ ಹೇಳುತ್ತಾಳೆ. ದೇಹದ ಮಾಯಾಭ್ರಮೆ ಕಳೆದುಕೊಂಡು ಚೆನ್ನಮಲ್ಲಿಕಾರ್ಜುನನ್ನು ಕಾಣಲು ಸಾಧ್ಯವಾಯಿತು ಎಂದಿರುವಳು. ಶರಣಸತಿ-ಲಿಂಗಪತಿ ಭಾವ ಪಡೆಯಬೇಕಾದ ಅನುಭಾವಿಕ ಫಲ ಇದಾಗಿದೆ.

ಗೊಗ್ಗವ್ವೆಯು, ಲಿಂಗತಾರತಮ್ಯ ಭಾವದಿಂದ ಪ್ರತಿಯೊಬ್ಬರೂ ಹೊರಬರಬೇಕು ಎಂಬುದನ್ನು ಒತ್ತಿ ಹೇಳಿದ್ದಾಳೆ.

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು"[೧೯]

ಎಂದು ಗೊಗ್ಗವ್ವೆ ಪ್ರಶ್ನಿಸುತ್ತಾಳೆ. ಗಂಡು ಹೆಣ್ಣನ್ನು ಮೋಹಿಸಿದಾಗ ಆ ಹೆಣ್ಣು ಒಬ್ಬರ ಒಡವೆಯೆಂದು ಭಾವಿಸಿ, ಅದಕ್ಕಾಗಿ ಮತ್ತೊಬ್ಬರು ಆಶಿಸಬಾರದು, ಅದೇ ರೀತಿ ಹೆಣ್ಣು ಗಂಡನ್ನು ಮೋಹಿಸಿದರೆ ಉತ್ತರ ಯಾವುದು ಎಂದು ಹೇಳಿದ ಗೊಗ್ಗವ್ವೆ ಗಂಡಿಗೊಂದು ಸೂತ್ರ, ಹೆಣ್ಣಿಗೊಂದು ಸೂತ್ರ ಎಂಬುದಿಲ್ಲ. ಇಬ್ಬರಲ್ಲಿಯೂ ದೈಹಿಕ ವ್ಯತ್ಯಾಸವಿದೆಯೇ ಹೊರತು ಮತ್ತೇನಲ್ಲ ಎಂದಿರುವಳು. ಆ ಮೂಲಕ ಹೆಣ್ಣಿಗೆ ಗಂಡಿನೊಂದಿಗೆ ಇರುವ ಯಾವ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಾಳೆ.

ಸತ್ಯಕ್ಕ ಕೂಡ ಗಂಡು ಹೆಣ್ಣಿಗಿರುವ ಲಿಂಗ ಅಸಮಾನತೆಯ ಮೂಲವಾಗಿರುವ ಜೈವಿಕ ಕಲ್ಪನೆಯನ್ನು ಖಂಡಿಸುತ್ತಾಳೆ.

> "ಏತರ ಹಣ್ಣಾದಡೂ ಮಧುರವೆ ಕಾರಣ
> ಅಂದವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ
> ಇದರಂದವ ನೀನೆ ಬಲ್ಲೆ ಶಂಭುಜಕ್ಕೇಶ್ವರಾ"[೧೫]

ಬಹಿರಂಗಕ್ಕೆ ಬೆಲೆ ಕಟ್ಟುವುದನ್ನು ವಿರೋಧಿಸುವ ಸತ್ಯಕ್ಕೆ ಮೊಲೆ ಮುಡಿ, ಮೀಸೆ ಕಾಸೆಯೇ ಹೆಣ್ಣು ಗಂಡುಗಳ ವ್ಯತ್ಯಾಸ ಬರೀ ದೈಹಿಕ ವ್ಯತ್ಯಾಸವೇ ಹೊರತು, ಅಂತರಂಗದಲ್ಲ, ಅಂತರಂಗ ಶುದ್ಧತೆಯ ಮೂಲಕ ಮೇಲ್ಜಾತಿಗಳಾಗಬೇಕು, ಯಾವುದೇ ಹಣ್ಣಾದರೂ ಅದರ ಸಿಹಿ ಮುಖ್ಯವೇ ಹೊರತು, ಅದರ ಬಾಹ್ಯ ಆಕಾರವಲ್ಲ. ಅದೇ ರೀತಿ ಹೂವಿಗೆ ಸುವಾಸನೆ ಮುಖ್ಯವಾಗಿರುವಂತೆ ಯಾವುದೇ ಲಿಂಗವಾದರೂ ಸಾಧನೆ ಮುಖ್ಯ ಎಂದು ಪ್ರತಿಪಾದಿಸಿದ್ದಾಳೆ.

ಶರಣೆಯರು ಎಂತಹುದೇ ಸಂದರ್ಭದಲ್ಲೂ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ 'ಶರಣಸತಿ–ಲಿಂಗಪತಿ' ಭಾವದೊಂದಿಗೆ ಅಂಗಾಂಗ ಸಾಮರಸ್ಯ ಸಾಧಿಸಿದರು.

ಆಹಾರ ಅಸಮಾನತೆಯ ವಿರೋಧ

ವರ್ಣ ವ್ಯವಸ್ಥೆಯ ನೆಲೆಯಲ್ಲಿ ದಲಿತರ ಆಹಾರ ಪದ್ಧತಿಯನ್ನು ಉದ್ದೇಶ–ವಾಗಿರಿಸಿಕೊಂಡು ಅವರನ್ನು ಕೀಳಾಗಿ ಕಾಣುತ್ತಿದ್ದ ಬಗೆಯನ್ನು ಕಾಳವ್ವೆ ಸಮಾಜದ ಮುಖಕ್ಕೆ ಹೊಡೆದಂತೆ ಪ್ರಶ್ನಿಸುತ್ತಾಳೆ. ಆಹಾರ ಪದ್ಧತಿಯನ್ನು ಮುಂದುಮಾಡಿಕೊಂಡು ಕುಲವನ್ನು ಎತ್ತಿ ಆಡುವ, ಹೀಯಾಳಿಸುವ ಪ್ರವೃತ್ತಿ ಇದ್ದಂತಹ ಸಂದರ್ಭದಲ್ಲಿ ದಲಿತ ಜನಾಂಗದಿಂದ ಬಂದ ಏಕೈಕ ವಚನಕಾರ್ತಿ ಕಾಳವ್ವೆ ತಾನು ಶಿವಶರಣೆಯಾದ ನಂತರವೂ ತನ್ನ ಕುಲವನ್ನು ಎತ್ತಿ ಆಡುತ್ತಿದ್ದವರ ಬಾಯಿ ಮುಚ್ಚಿಸುವ ಸಲುವಾಗಿ ನೇರವಾದ ಪ್ರತಿಭಟನೆಯನ್ನು ಸಲ್ಲಿಸಿದ್ದಾಳೆ. ಆ ಮೂಲಕ ತನ್ನ ಜನಾಂಗದ ಆಹಾರ ಪದ್ಧತಿಯನ್ನು ಸಮರ್ಥಿಸಿಕೊಳ್ಳುತ್ತಾಳೆ.

ಕುರಿ, ಕೋಳಿ, ಕಿರುಮೀನು ತಿನ್ನುವವರನ್ನು ಸಮಾಜ ಕುಲಜರೆಂದು ಗೌರವಿಸುತ್ತದೆ. ಅದೇ ರೀತಿ ಗೋಮಾಂಸ ತಿನ್ನುವವರನ್ನು ಹೊಲೆಯ, ಮಾದಿಗರೆಂದು ಕೀಳಾಗಿ ಕಾಣುತ್ತದೆ. ಗೋವು ಶ್ರೇಷ್ಠವಾದ ಪ್ರಾಣಿ, ಶಿವನಿಗೆ ಪಂಚಾಮೃತ ಅಭಿಷೇಕಕ್ಕೆ ನೆರವಾಗುವ, ಇಂತಹ ಶ್ರೇಷ್ಠ ಪ್ರಾಣಿಯನ್ನು ತಿನ್ನುವ ಮಾದಿಗರು ಮತ್ತಷ್ಟು ಶ್ರೇಷ್ಠರು ಎನಿಸಿಕೊಳ್ಳುತ್ತಾರೆಯೇ ಹೊರತು ಕೀಳಾಗಲು ಸಾಧ್ಯವೇ ಇಲ್ಲ ಎನ್ನುವುದನ್ನು ಕಾಳವ್ವೆಯ ತರ್ಕವಾಗಿದೆ. ಬ್ರಾಹ್ಮಣರು ಉಂಡು ಬಿಟ್ಟುದನ್ನು ನಾಯಿ ನೆಕ್ಕುತ್ತದೆ. ಅದೇ ರೀತಿ ಮಾದಿಗರು ತಿಂದು ಬಿಟ್ಟ ಗೋವಿನ

ಚರ್ಮದಿಂದ ತಯಾರಿಸಿದ ಸಗ್ಗಳೆಯನ್ನು ಬಳಸುವ ತುಪ್ಪವನ್ನು ಇರಿಸಿಕೊಂಡು ಸೇವಿಸುವ ವಿಪ್ರರು ಶ್ರೇಷ್ಠ ಹೇಗಾಗುತ್ತಾರೆ ಎಂಬುದು ಕಾಳವ್ವೆಯ ವಾದವಾಗಿದೆ. ಕಾಳವ್ವೆಗೆ ತನ್ನ ಜಾತಿಯ ಬಗ್ಗೆ, ತನ್ನ ಆಹಾರ ಪದ್ಧತಿಯ ಬಗ್ಗೆ ಸಹಜವಾದ ಹೆಮ್ಮೆ ಸ್ವಾಭಿಮಾನಗಳಿವೆ. ಸಮಾಜಕ್ಕೆ ಎದುರಾಗಿ ದಿಟ್ಟತನದಿಂದ ತನ್ನ ಆಹಾರ ಪದ್ಧತಿಯ ಬಗ್ಗೆ ಶ್ರೇಷ್ಠತೆಯನ್ನು ಸಾರುತ್ತ, ಭದ್ರಗೋಡೆಯಂತೆ ನಿಲ್ಲುವ ಕಾಳವ್ವೆ ಶೂದ್ರ ಸಮೂಹದ ಪ್ರತಿನಿಧಿಯಾಗಿ ನಿಲ್ಲುತ್ತಾಳೆ.

ಕಾಳವ್ವೆಯ ಆಹಾರ ಪದ್ಧತಿಯನ್ನು ಕುರಿತಾದ ತನ್ನ ವಚನದಲ್ಲಿ ವರ್ಣ ವ್ಯವಸ್ಥೆಯ ನೆಲೆಯನ್ನು ಪ್ರಶ್ನಿಸಿದರೆ, ಅಕ್ಕಮಹಾದೇವಿ ಸಾರ್ವತ್ರಿಕವಾಗಿ ಆಹಾರದ ಬಾಧಕಗಳನ್ನು ಕುರಿತು ಚರ್ಚಿಸುತ್ತಾಳೆ. ಅತಿಯಾದ ಆಹಾರ ಸೇವನೆಯಿಂದ ದೇಹದ ಮೇಲುಂಟಾಗುವ ಪರಿಣಾಮಗಳು ಅಪಾರ. ಅತಿಯಾದ ಆಹಾರ ಸೇವನೆ ವ್ಯಾಧಿಗೆ ಕಾರಣವಾಗುತ್ತದೆ. ನಿದ್ರೆ, ತಾಮಸ, ಅರಿವು ನಷ್ಟ. ಅತಿಯಾದ ಆಹಾರ ಸೇವನೆಯಿಂದ ಉಂಟಾಗುವ ದುಷ್ಪರಿಣಾಮ-ಗಳನ್ನು ಹೇಳುವ ಅಕ್ಕ ಕೊನೆಗೆ ಅತಿಯಾದ ಆಹಾರ ಸೇವನೆ ಸಾಧಕನಿಗೆ ಅನುಭಾವ ಸಾಧನೆಯ ಹಾದಿಗೆ ಅಡ್ಡಿಯನ್ನುಂಟುಮಾಡುತ್ತದೆ ಎಂದು ಸಲಹೆಯನ್ನು ನೀಡುತ್ತಾಳೆ.

ವಚನಕಾರ್ತಿಯರು ತಾವು ಸೇವಿಸುವ ಆಹಾರದ ಬಗೆಗೂ ಎಷ್ಟರಮಟ್ಟಿನ ಎಚ್ಚರವನ್ನು ಹೊಂದಿದ್ದರು ಎಂಬುದಕ್ಕೆ ಕಾಳವ್ವೆ ಮತ್ತು ಅಕ್ಕ ಇಬ್ಬರೂ ತಮ್ಮದೇ ಆದ ವಿಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಿಸಿರುವುದು ಕಂಡುಬರುತ್ತದೆ.

ಮೌಢ್ಯ ವಿರೋಧಿ ನಿಲುವು

ವಚನಕಾರ್ತಿಯರು ಅತ್ಯಂತ ವೈಚಾರಿಕವಾದ ನೆಲೆಗಳಲ್ಲಿ ಚಿಂತನೆ ನಡೆಸಿದ್ದಾರೆ. ಕೊಳೆತು ನಾರುತ್ತಿದ್ದ ವ್ಯವಸ್ಥೆಯ ಸುಧಾರಣೆಗಾಗಿ, ಸಾಮಾಜಿಕ ಶುದ್ಧೀಕರಣಕ್ಕಾಗಿ ಧ್ವನಿ ಎತ್ತಿರುವರು.

ಪ್ರಾಣಿಬಲಿಯನ್ನೇ ಪ್ರಧಾನವಾಗಿಸಿಕೊಂಡ ಯಜ್ಞ, ಯಾಗಾದಿಗಳ ಜೀವಹಿಂಸೆಯನ್ನು ಅಕ್ಕ ಅರ್ಥಪೂರ್ಣ ನೆಲೆಯಲ್ಲಿ ಖಂಡಿಸುವುದರ ಮೂಲಕ ಬದುಕಿಗೆ ಜೀವದಯೆ ಮತ್ತು ಮಾನವೀಯತೆಗಳ ಅಗತ್ಯವನ್ನು ಪ್ರತಿಪಾದಿಸಿದ್ದಾಳೆ.

> **"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ**
> **ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ**
> **ತನ್ನ ಮನೆಯಲೊಂದು ಶಿಶು ಸತ್ತಡೆ**
> **ಅದಕ್ಕೆ ಮರುಗುವಂತೆ ಅವಕೇಕೆ ಮರುಗ?"**[೨೧]

ಲೌಕಿಕ ಹಾಗೂ ಅಲೌಕಿಕ ನೆಲೆಗಳೆರಡರಲ್ಲೂ ಸಂಚರಿಸುವ ವಚನದ ಭಾವವು ಜೀವಹಿಂಸೆ ಮಾಡುವವರನ್ನು ಮಾದಿಗರೆನ್ನಬಹುದೇ ಹೊರತು, ಕುಲದ ನೆಲೆಯಲ್ಲಿ ಮಾದಿಗ ಎನ್ನುವುದು ಜಾತಿಯಲ್ಲ, ಎನ್ನುವ ಮನೋಧರ್ಮ ಮತ್ತು ಸತ್ಯವನ್ನು ವಚನದ ನಿಚ್ಚಳ ಬೆಳಕಿನಲ್ಲಿ ಸ್ಪಷ್ಟಪಡಿಸುತ್ತಾಳೆ.

ಯಜ್ಞ, ಯಾಗಾದಿಗಳು, ಅವುಗಳನ್ನು ಆಶ್ರಯಿಸಿ ಬೆಳೆದು ಬಂದಿರುವ ಪ್ರಾಣಿಬಲಿ, ಜೀವಹಿಂಸೆ, ಮೌಢ್ಯ, ಅನಿಷ್ಠ ಸಂಪ್ರದಾಯಗಳು ಇವುಗಳೆಲ್ಲವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಗೊಡ್ಡು ಬ್ರಾಹ್ಮಣ್ಯವನ್ನು ಕಾಳವ್ವೆ ತನ್ನ ವಚನದಲ್ಲಿ ತೀವ್ರವಾಗಿ ಪ್ರತಿಭಟಿಸಿದ್ದಾಳೆ. ಎಮ್ಮೆ, ಕುದುರೆ, ಆನೆ ಮುಂತಾದ ಪ್ರಾಣಿಗಳನ್ನು ಕೊಂದು ಹೋಮಗಳನ್ನು ನಡೆಸಿದ ಬ್ರಾಹ್ಮಣರ ಸ್ವಾರ್ಥವನ್ನು ಕಟುವಾಗಿ ಟೀಕಿಸಿದ್ದಾಳೆ. ಕಾಳವ್ವೆ ಹೀಗೆ ಅಭಿಪ್ರಾಯ ಪಡಲು ಅವಳದೇ ಕಾರಣಗಳಿವೆ. ಈ ಕ್ರೂರ ದ್ವೇಷದ ಹಿಂದೆ ಶತಮಾನಗಳ ಕಾಲದ ನೋವು ಅಡಗಿದೆ. ಆದ್ದರಿಂದಲೇ ಅವಳಲ್ಲಿ ದಿಟ್ಟತನವಿದೆ. ಕೆಚ್ಚು, ಎದೆಗಾರಿಕೆಯಿದೆ.

ಆಚಾರವೇ ಪ್ರಾಣವಾದ ಅಕ್ಕಮ್ಮ ಆಚಾರ ನಿಷ್ಠೆ ನೇಮ, ವ್ರತಗಳಿಗೆ ಹೆಚ್ಚಿನ ಮಹತ್ವ ನೀಡಿರುವಳು. ಶಿವಶರಣೆಯರು ವ್ರತಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದವರು.

ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮನದು ಅಪ್ರತಿಮ ವ್ರತನಿಷ್ಠೆ. ಈಕೆ ತನ್ನ ವಚನದಲ್ಲಿ ವ್ರತಭ್ರಷ್ಟರ ಬಗ್ಗೆ ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾಳೆ.

> **"ಕಾಗೆಯ ನಾಯ ತಿಂದವರಿಲ್ಲ?**
> **ವ್ರತಭ್ರಷ್ಟನ ಕೂಡಿದವರಿಲ್ಲ**
> **ನಾಯಿಗೆ ನಾರಂಗವಕ್ಕುವುದೆ**
> **ಲೋಕದ ನರಂಗೆ ವ್ರತವಕ್ಕುಮದೆ ಶಿವಬೀಜಕ್ಕಲ್ಲದೆ?**
> **ನೀವೇ ಸಾಕ್ಷಿ ನಿಜಗುಣೇಶ್ವರ ಲಿಂಗದಲ್ಲಿ"**[೨೨]

ವ್ರತದ ಬಗ್ಗೆ, ವ್ರತಭ್ರಷ್ಟರ ಬಗ್ಗೆ ಮಸಣಮ್ಮನ ಆಶಯಗಳು ಈ ವಚನದಲ್ಲಿ ಪ್ರತಿಧ್ವನಿಸಿವೆ. ವ್ರತದ ಬಗ್ಗೆ ಅತಿಯಾದ ಸಾಂಪ್ರದಾಯಿಕ ನಿಷ್ಠೆ ಕಂಡುಬರುತ್ತದೆ. ಲೋಕದಲ್ಲಿ ಹುಟ್ಟಿದ ಬಳಿಕ ನರರಿಗೆ ವ್ರತವೇ ಶಿವಬೀಜ, ವ್ರತವು ಶಿವಭಕ್ತನಾದವನಿಗೆ ಮಾತ್ರ ಸಲ್ಲುತ್ತದೆಂದು ವ್ರತದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾಳೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಗೆ ವ್ರತಾಚಾರಗಳ ಬಗ್ಗೆ ಅತಿಯಾದ ನಿಷ್ಠೆ, ವ್ರತವೇ ಮನುಷ್ಯ ಬದುಕಿನ ಜೀವಕಳೆ ಎಂದು ಪ್ರತಿಪಾದಿಸಿದ್ದಾಳೆ. ಉರಿಲಿಂಗಪೆದ್ದಿಗಳ

ಪುಣ್ಯಸ್ತ್ರೀ ಕಾಳವ್ವೆಯು ಎಂತಹ ಕಠಿಣ ಸಂದರ್ಭದಲ್ಲಿಯೂ ವ್ರತಹೀನರೊಡನೆ ಬೆರೆಯಬಾರದೆಂದು ತನ್ನ ವಚನದಲ್ಲಿ ವ್ಯಕ್ತಪಡಿಸಿದ್ದಾಳೆ.

> **"ಅರ್ಥ ಪ್ರಾಣಾಭಿಮಾನದ ಮೇಲೆ ಬಂದಡೂ ಬರಲಿ**
> **ವ್ರತಹೀನನ ನೆರೆಯಲಾಗದು;**
> **ನೋಡಲು ನುಡಿಸಲು ಎಂತೂ ಆಗದು**
> **ಹರಹರಾ ಪಾಪ ವಶದಿಂದ ನೋಡಿದಡೆ**
> **ರುದ್ರಜಪ, ಮಾಹೇಶ್ವರಾರಾಧನೆಯ ಮಾಳ್ಪುದು**
> **ಇಂತಲ್ಲದವರ ಉರಿಲಿಂಗಪೆದ್ದಿಗಳರಸ ನಕ್ಕು ಕಳೆ ಏನವ್ವಾ"**[೨೩]

ಅರ್ಥಹಾನಿ, ಪ್ರಾಣಹಾನಿ, ಅಭಿಮಾನ ಹಾನಿಯಾಗುವ ಪರಿಸ್ಥಿತಿಯಲ್ಲಿ ಕೂಡ ವ್ರತಹೀನನೊಡನೆ 'ನೆರೆಯಲಾಗದು' ಎನ್ನುವ ಕಾಳವ್ವೆ ಅಂತಹ ವ್ರತಹೀನನನ್ನು ಕಣ್ಣಿಂದ ನೋಡುವುದೂ, ಅವನೊಡನೆ ಮಾತನಾಡುವುದು ಸಹ ಕೂಡದು ಎಂದು ಕಟ್ಟಪ್ಪಣೆ ಮಾಡುತ್ತಾಳೆ. ವ್ರತಹೀನರ ಬಗೆಗೆ ಒಂದಷ್ಟು ಮರುಕ ಹಾಗೂ ಉದಾರಭಾವಗಳು ಕಾಳವ್ವನ ಕಠಿಣವಾದ ವ್ರತನಿಷ್ಠೆಯಲ್ಲಿ ಕಾಣಲು ಸಾಧ್ಯವೇ ಇಲ್ಲ.

ವ್ರತಭಂಗವಾದರೆ ವ್ರತ ಸ್ವರೂಪವಾದ ಹರಣವೇ ಹಾರಿ ಹೋಗುತ್ತದೆ, ವ್ರತ ತಪ್ಪಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ ಎನ್ನುವ ಡಾಂಭಿಕರನ್ನು ದೇವರು ಒಪ್ಪುವುದಿಲ್ಲ ಎನ್ನುತ್ತಾಳೆ. ರೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ ವ್ರತಭ್ರಷ್ಟರ ಕುರಿತ ಟೀಕೆಯೊಂದಿಗೆ ವ್ರತಾಚರಣೆಗೆ ಒತ್ತು ಕೊಟ್ಟಿರುವುದು ಮುಸಣಮ್ಮನ ಅಭಿವ್ಯಕ್ತಿ. ಅಂತೆಯೇ ಕದಿರ ಕಾಯಕದ ಕಾಳವ್ವೆ ಕದಿರು ಮುರಿದರೆ ಕಾಯಕ ನಿಲ್ಲುವಂತೆ, ವ್ರತಹೀನರನ್ನು ಕೂಡಿದರೆ ಜೀವನ ವ್ಯರ್ಥ ಎನ್ನುತ್ತಾಳೆ. ಕನ್ನಡಿ ಕಾಯಕದ ರೆಮ್ಮವ್ವೆ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಕೇತಲದೇವಿ ಮುಂತಾದವರು ವ್ರತನಿಷ್ಠೆಯನ್ನು ಮೆರೆಯುವುದರೊಂದಿಗೆ ವ್ರತಹೀನರನ್ನು ಟೀಕಿಸುತ್ತಾರೆ.

ಹೀಗೆ ಬಹುತೇಕ ವಚನಕಾರ್ತಿಯರು ಅಂದಿನ ಸಮಾಜದಲ್ಲಿ ಮನೆ ಮಾಡಿದ್ದ ಡಾಂಭಿಕ ಭಕ್ತಿ, ವೇಷಧಾರಿ ಜಂಗಮ, ಕಪಟಿ ವಿರಕ್ತರುಗಳನ್ನು ಕಂಡು, ಅವರುಗಳನ್ನು ನಿಷ್ಠುರವಾಗಿ ಖಂಡಿಸುವುದರ ಮೂಲಕ ಸಾಮಾಜಿಕ ಪ್ರಜ್ಞೆ, ವೈಚಾರಿಕ ಜಾಗೃತಿಯನ್ನು ಬಡಿದೆಬ್ಬಿಸಿರುವುದು ವಿಚಾರಾರ್ಹವಾಗಿದೆ.

ಭಕ್ತಿಯ ಅನಾವರಣ

ವಚನ ಸಾಹಿತ್ಯದ ಜೀವದ್ರವ್ಯವೇ ಭಕ್ತಿ. ಎಲ್ಲ ಶರಣೆಯರ ಬದುಕಿನಂತೆಯೇ ಅಭಿವ್ಯಕ್ತಿಯೂ ಸಹ ಭಕ್ತಿಯ ನೆಲೆಗಳನ್ನು ಶೋಧಿಸಿರುವುದನ್ನು ಗುರುತಿಸಬಹುದು.

ಅಕ್ಕಮಹಾದೇವಿ ತನ್ನ ಇಷ್ಟದೈವವಾದ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ದಿಸೆಯಲ್ಲಿ ಆಕೆ ಎದುರಿಸಿದ ಕಷ್ಟ, ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಆದರೂ 'ನೀ ಒಲಿದರೂ ಸರಿ, ಒಲಿಯದಿದ್ದರೂ ಸರಿ' ಎಂಬ ದೃಢತೆಯಿಂದ ಬೆಂಬಿಡದೆ ಕಾಡಿ, ಆರ್ತಳಾಗಿ ಬೇಡಿ ದೇವನನ್ನು ತನ್ನವನನ್ನಾಗಿಸಿಕೊಂಡಳು.

"ಅಯ್ಯಾ ನೀನು ಕೇಳಿದಡೆ ಕೇಳು, ಕೇಳದಡೆ ಮಾಣು
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ನೋಡಿದಡೆ ನೋಡು ನೋಡದಡೆ ಮಾಣು;
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ ನೀನು ಮೆಚ್ಚಿದಡೆ ಮೆಚ್ಚು, ಮೆಚ್ಚದಿರೆ ಮಾಣು
ಆನು ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ ನೀನು ಒಲಿದರೆ ಒಲಿ, ಒಲಿಯದಿರೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ
ಆನು ನಿಮ್ಮನರ್ಚಿಸಿ ಪೂಜಿಸಿ ಹರುಷದೋಳಲಾಡುವೆನಯ್ಯಾ"[೨೪]

ದೇವನನ್ನು ಉದ್ದೇಶಿಸಿ ತನ್ನ ಭಕ್ತಿಯ ಅಸಹಾಯಕತೆಯನ್ನು ನಿವೇದಿಸಿಕೊಳ್ಳುತ್ತಾಳೆ.

ಭಕ್ತಿ ಎನ್ನುವುದು ಸತ್ಯಶುದ್ಧವಾಗಿರಬೇಕು. ನಿಶ್ಚಲವಾಗಿರಬೇಕು, ಪ್ರಾಮಾಣಿಕ-ವಾಗಿರಬೇಕು, ಅಕ್ಕ ಬಲುಹಳಿದು, ಭವಗೆಟ್ಟು, ಛಲವಳಿದು ಭಕ್ತೆಯಾದಳು.

"ಸಜ್ಜನೆಯಾಗಿ ಮಜ್ಜನಕ್ಕೆರೆವೆ
ಶಾಂತಳಾಗಿ ಪೂಜೆ ಮಾಡುವೆ
ಸಮರತಿಯಿಂದ ನಿಮ್ಮ ಹಾಡುವೆ,
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮನಗಲಿದ ಪೂಜೆ ಅನುವಾಯಿತ್ತೆನಗೆ"[೨೫]

ದೇವರಿಗೆ ನೆರವೇರಿಸುವ ಮಾರ್ಗದಲ್ಲಿ ಮಜ್ಜನಪೂಜೆ, ಗಾಯನಗಳು ದೈವವನ್ನು ಒಲಿಸಿಕೊಳ್ಳುವ ಬಗೆಗಳಾಗಿವೆ. ಆದರೆ ಭಕ್ತಸ್ಥಲದಲ್ಲಿ ತನುವಂಚನೆ, ಮನವಂಚನೆ, ಧನವಂಚನೆಗಳಿಗೆ ಅವಕಾಶವಿಲ್ಲ, ದೇವರು ಧರ್ಮ, ನೀತಿ ಇವುಗಳಲ್ಲಿ ನಂಬಿಕೆ, ಶ್ರದ್ಧೆ ಇರುವವನೇ ನಿಜವಾದ ಭಕ್ತ, ಅಂತರಂಗ ಶುದ್ಧಿಯೇ ನಿಜಭಕ್ತಿಯ ನಿಲುವಾಗಿದೆ ಎಂದು ಪ್ರತಿಪಾದಿಸಿದ್ದಾಳೆ.

ಭಕ್ತನು ಸಚ್ಚಾರಿತ್ರ್ಯವನ್ನು ಉಳ್ಳವನಾಗಿರಬೇಕು. ನಂಬಿಕೆ, ಶ್ರದ್ಧೆ, ಇರುವವನೇ ನಿಜವಾದ ಭಕ್ತ, ಅಂತರಂಗ ಶುದ್ಧಿಯೇ ನಿಜ ಭಕ್ತಿಯ ನಿಲುವು. ಭಕ್ತನು ಸತ್ಯ ಶುದ್ಧ ಕಾಯಕದಲ್ಲಿ ನಿರತನಾಗಿರಬೇಕು ಎಂದು ಹೇಳುತ್ತ ಭಕ್ತಿ ಮತ್ತು ಕಾಯಕಗಳ ಸಂಬಂಧದ ಸ್ವರೂಪವನ್ನು ಕಾಳವ್ವೆ ಅರ್ಥಪೂರ್ಣವಾಗಿ ನಿರೂಪಿಸಿದ್ದಾಳೆ.

ವಚನ ಯುಗದ ಏಕೈಕ ದಲಿತ ವಚನಕಾರ್ತಿಯಾದ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ತೀವ್ರ ವಿಚಾರಣೀಯವಾದ ವಚನಗಳನ್ನು ರಚಿಸಿದ್ದಾಳೆ. ಡಾಂಭಿಕ ಭಕ್ತರನ್ನು ಕುರಿತಾದ ವಿಡಂಬನೆ ಕಾಳವ್ವೆಯಲ್ಲಿ ತೀರಾ ಪ್ರಖರವಾಗಿ ಮೂಡಿಬಂದಿದೆ.

> **"ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?**
> **ಹುಸಿದು ತಂದು ಮಾಡುವಾತ ಭಕ್ತನೆ?**
> **ಭಕ್ತರ ಕುಲವನ್ನೆತ್ತಿ ನಿಂದಿಸುವಾತ ಭಕ್ತನೆ?**[೨೬]

ಹೊಟ್ಟೆಯ ಪಾಡಿಗಾಗಿ ಶಿವಭಕ್ತರ ಸೋಗು ಹಾಕಿದವರು ಸಮಯ ಸಾಧಕರಾಗಿ, ಸೋಮಾರಿಗಳಾಗಿ ಮೋಸ ವಂಚನೆಗಳನ್ನು ಮಾಡುತ್ತ ಕಾಲಹರಣ ಮಾಡುವುದಲ್ಲದೆ, ನಿಜವಾದ ಶಿವಭಕ್ತರನ್ನು ನಿಂದಿಸುತ್ತಾರೆ. ಇಂತಹ ಡೋಂಗಿ ಭಕ್ತರನ್ನು ಕಂಡು ಕುದಿಯುತ್ತಾಳೆ. ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೇ? ಹುಸಿದು ತಂದು ಮಾಡುವಾತ ಭಕ್ತನೆ? ಭಕ್ತರ ಕುಲವನ್ನೇ ನಿಂದಿಸುವಾತ ಭಕ್ತನೇ? ಎಂದು ಭಕ್ತರ ವೇಷದ ಡಾಂಭಿಕರನ್ನು ಕಾಳವ್ವೆ ಟೀಕಿಸುತ್ತಾಳೆ.

ಕಾಳವ್ವೆಯು ನಿಜವಾದ ಭಕ್ತನ ಲಕ್ಷಣಗಳನ್ನು ಸೊಗಸಾದ ದೃಷ್ಟಾಂತದೊಂದಿಗೆ ಸ್ಪಷ್ಟಪಡಿಸಿದ್ದಾಳೆ.

> **"ಕೃತ್ಯಕಾಯಕವಿಲ್ಲದವರು ಭಕ್ತರಲ್ಲ!**
> **ನಿತ್ಯಶುದ್ಧವಿಲ್ಲದುದು ಕಾಯಕವಲ್ಲ;**
> **ಆಸೆಯಂಬುದು ಭವದ ಬೀಜ;**
> **ನಿರಾಸೆಯೆಂಬುದು ನಿತ್ಯಮುಕ್ತಿ**
> **ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ"**[೨೭]

ಈ ವಚನವು ಭಕ್ತಿಯ ಸ್ವರೂಪವನ್ನು ನೇರವಾಗಿ ಪರಿಚಯಿಸುತ್ತದೆ. ಸತ್ಯಶುದ್ಧವಾದ ಕಾಯಕವನ್ನು ಕೈಗೊಂಡು ಸದಾಚಾರ ಸದ್ವರ್ತನೆಗಳಿಂದ ದಾಸೋಹ ನಡೆಸುವವನೇ ನಿಜವಾದ ಭಕ್ತ ಎಂದು ಕಾಳವ್ವೆ ತನ್ನ ಭಕ್ತ ಸಂಬಂಧಿ ವಚನಗಳಲ್ಲಿ ಭಕ್ತನ ಲಕ್ಷಣ, ಅರ್ಹತೆ,

ಸ್ವರೂಪಗಳನ್ನು ಕುರಿತು ಗಂಭೀರವಾಗಿ ಚಿಂತಿಸಿ ಮಥಿಸಿದ್ದಾಳೆ. ದಲಿತವರ್ಗದಿಂದ ಬಂದ, ಕಟ್ಟಿಗೆ ಮಾರುವ ಹೆಣ್ಣು ಮಗಳೊಬ್ಬಳು ಇಷ್ಟೊಂದು ಉನ್ನತ ಸ್ತರದಲ್ಲಿ ದಾರ್ಶನಿಕಳಂತೆ ಚಿಂತಿಸಬಲ್ಲಳು ಎಂಬುದು ಅತಿಮುಖ್ಯವೆನಿಸುತ್ತದೆ.

ಆಚಾರವೇ ಪ್ರಾಣವಾದ ಅಕ್ಕಮ್ಮ ನಿಷ್ಠಾಹೀನನ ಪೂಜೆ, ಭಕ್ತಿ ಇಲ್ಲದವನ ಮಾಟ, ಕೂಟಗಳೆರಡು ಸತ್ಯವಲ್ಲ ಎಂದು ಸಾರುವ ಅಕ್ಕಮ್ಮ ಭಕ್ತನ ಲಕ್ಷಣಗಳನ್ನು ಈ ರೀತಿ ಹೇಳಿರುವಳು.

"ಭಕ್ತಂಗೆ ಬಯಕೆ ಉಂಟೆ? ನಿತ್ಯಂಗೆ ಸಾವುಂಟೆ?
ಸದ್ಭಕ್ತರಿಗೆ ಮಿಥ್ಯ ತಥ್ಯ ಉಂಟೆ?
ಕರ್ತೃ ಭೃತ್ಯನಾದ ಠಾವಿನಲ್ಲಿ ಪ್ರತ್ಯುತ್ತರಂಗೆಯ್ವಡೆ
ಸತ್ಯ ಸದಾಚಾರಕ್ಕೆ ಹೊರಗು
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಾಣತಿ"[೨೮]

ಭಕ್ತ ಬಯಕೆಗಳಿಗೆ ಅತೀತನಾದವನು. ಆತನಿಗೆ ಹುಟ್ಟು ಸಾವುಗಳಿಲ್ಲ. ಆತ ನಿತ್ಯನು. ಆತನಲ್ಲಿ ಹುಸಿವಂಚನೆಗಳಿಲ್ಲ. ನಿಶ್ಚಲ ಮನೋಭಾವವೇ ಭಕ್ತಿ. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿಗಳಿಂದ ಸತ್ಯಶುದ್ಧ ಕಾಯಕದಿಂದ ತನುಮನ ಬಳಲಿಸಿ, ಭಕ್ತಿಯಿಂದ ಪೂಜಿಸಿದಲ್ಲಿ ಮಾತ್ರವೇ ಲಿಂಗಕ್ಕೆ ಸಲ್ಲುತ್ತದೆ. ಅಂತಹವನೇ ನಿಜವಾದ ಭಕ್ತನೆನಿಸಿಕೊಳ್ಳುತ್ತಾನೆ.

ಶರಣ ಸಮಾಜದಲ್ಲಿ ಮನೆ ಮಾಡಿದ್ದ ಡಾಂಭಿಕತೆಯನ್ನು ತೀವ್ರವಾಗಿ ಖಂಡಿಸುವ ಅಮುಗೆ ರಾಯಮ್ಮ ಭಕ್ತನಾದವನು ತನ್ನೆಲ್ಲಾ ಮಾನಸಿಕ ದೌರ್ಬಲ್ಯಗಳನ್ನು ಮೆಟ್ಟಿನಿಂತು ಸದ್ಭಕ್ತನೆನಿಸಿಕೊಳ್ಳಬೇಕೆಂದು ಬಯಸುತ್ತಾಳೆ. ಭಕ್ತನಾದವನು ಮಾನಸಿಕವಾಗಿ ದುರ್ಬಲನಾಗಿರಕೂಡದು. ಚಂಚಲತೆ, ಚಪಲತೆಗಳಿಂದ ಕೂಡಿದ ಮನಸ್ಸನ್ನು ಏಕಾಗ್ರತೆಗೆ ಅನುಗೊಳಿಸಬೇಕು.

"ಎನ್ನ ದೇಹವ ದಗ್ಧವ ಮಾಡಯ್ಯಾ
ಎನ್ನ ಕಾಯದಲ್ಲಿಪ್ಪ ಕರ್ಮವ ತೊಡೆಯಯ್ಯಾ
ಎನ್ನಭಾವದಲ್ಲಿಪ್ಪ ಭ್ರಮೆಯ ಜರಿಯಯ್ಯಾ
ನಾ ಹಿಡಿದ ಛಲವ ಬಿಡದೆ ನಡೆಸಯ್ಯಾ ಅಮುಗೇಶ್ವರ ಲಿಂಗವೆ"[೨೯]

ಕಾಯಕದಲ್ಲಿರುವ ಕರ್ಮಭಾವದಲ್ಲಿರುವ ಭ್ರಮೆಗಳನ್ನು ತೊಡೆದು ಹಿಡಿದ ಛಲವ ಬಿಡದೆ ಮುಂದುವರೆಸಲು ನೆರವಾಗೆಂದು ಕೋರುವ ಹಿನ್ನೆಲೆಯಲ್ಲಿ ರಾಯಮ್ಮನ ಭಾವ, ಭಕ್ತನ

ಅಂತರಂಗ–ಬಹಿರಂಗಗಳೆರಡು ಶುದ್ಧವಾಗಿರಬೇಕು. ಭಕ್ತನಾದವನು ಸಾಧನೆಯ ಹಾದಿಯಲ್ಲಿ ಗುರಿಮುಟ್ಟಲು ಛಲಹೊಂದಿರಬೇಕು ಎಂಬ ನಿಲುವಾಗಿದೆ.

ಆಯ್ದಕ್ಕಿ ಲಕ್ಕಮ್ಮ ಭಕ್ತನಿಗೆ ಬಡತನ ಎಂಬುದಿಲ್ಲ, ಭಕ್ತಿಯ ಸಿರಿ ಅವನಲ್ಲಿ ತುಂಬಿರುವವರೆಗೂ ಅವನು ಬಡವನಲ್ಲ ಎಂದು ಹೇಳುತ್ತಾಳೆ. ನಿಜವಾದ ಭಕ್ತಿ ಗರ್ವರಹಿತವಾದುದಾಗಿರಬೇಕು. ಮಾಟಕೂಟಗಳಿಂದ ಕೂಡಿರಬೇಕು, ಅಷ್ಟಮದಗಳನ್ನು ಮೆಟ್ಟಿ, ಅರಿಷಡ್ವರ್ಗಗಳನ್ನು ಹತ್ತಿಕ್ಕಿ ನಡೆ–ನುಡಿಯಲ್ಲಿ, ಸದಾಚಾರ–ಸದ್ವರ್ತನೆಗಳನ್ನು ಹೊಂದಿರುವವನೇ ನಿಜವಾದ ಭಕ್ತ ಎಂಬ ನಿಲುವು ಲಕ್ಕಮ್ಮನದು.

"ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಗೆ ಹಾನಿ,
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಗಿಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮರೇಶ್ವರ ಲಿಂಗವ ಮಟ್ಟದ ಭಕ್ತಿ"[೩೦]

ಈ ವಚನವು ಭಕ್ತಿಯ ಸ್ವರೂಪವನ್ನು ನೇರವಾಗಿ ಪರಿಚಯಿಸುತ್ತದೆ.

ಮೋಳಿಗೆ ಮಹಾದೇವಿ ಭಕ್ತನಾದವನು ಸದಾ ಸತ್ಯಶುದ್ಧನಾಗಿರಬೇಕು, ಎಲ್ಲಿ ಸತ್ಯ ಶುಚಿತ್ವಗಳಿವೆಯೋ ಅಲ್ಲಿ ದೇವರಿದ್ದೇ ಇರುತ್ತಾನೆಂದು ನಂಬಿದವಳು, ಭಕ್ತಿಯ ಆಚರಣೆಗೆ ಶ್ರದ್ಧೆ, ಸನ್ಮಾರ್ಗಗಳು ಅತ್ಯಗತ್ಯ. ಇವುಗಳಿಂದ ಹೊರತಾದ ಭಕ್ತಿಯಿಂದ ಗುರು, ಲಿಂಗ ಜಂಗಮ ಸೇವೆ ನಡೆಸಿದಾಗ್ಯೂ ಸಹ ತ್ರಿವಿಧಗಳು ಫಲ ನೀಡುವುದಿಲ್ಲ. ಆದ್ದರಿಂದ ಭಕ್ತಿ ಸಾರ್ಥಕವಾಗಬೇಕಾದರೆ ಶ್ರದ್ಧೆಯೆಂಬುದು ದೃಢವಾಗಿರಬೇಕು, ಭಾವಶುದ್ಧವಾಗಿರಬೇಕು, ಭಕ್ತಿಯೆಂಬುದು ನಿಶ್ಚಲವಾಗಿರಬೇಕೆಂದು ಮಹಾದೇವಮ್ಮ ಅಭಿಪ್ರಾಯಪಟ್ಟಿದ್ದಾಳೆ.

ಬಸವಣ್ಣನವರ ವಿಚಾರಪತ್ನಿಯಾದ ನೀಲಮ್ಮ ಸಾಧನೆಯ ಪಥದಲ್ಲಿ ಮುನ್ನಡೆವ ಭಕ್ತನ ಮನಸ್ಸು ದೃಢವಾಗಿರಬೇಕು, ನಿರ್ಲಿಪ್ತತೆಯಿಂದ ಕೂಡಿರಬೇಕು. ಅತ್ತಿತ್ತ ಹರಿದಾಡುವ ಮನಸ್ಸಿನಲ್ಲಿ ಭಕ್ತಿಯೆಂಬುದು ಬೇರೂರಿ ಬೆಳೆಯಲು ಸಾಧ್ಯವಿಲ್ಲ. ಭಕ್ತಿಗೆ ಮಾನಸಿಕ ಏಕಾಗ್ರತೆ, ನಿಶ್ಚಲತೆ, ನಿಷ್ಠೆಯಿರಬೇಕೆನ್ನುವುದನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತಾರೆ.

ಸತ್ಯಕ್ಕ ಶಿವನೊಲುಮೆಗೆ ಭಕ್ತನ ಸಮರ್ಪಣೆ ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದಾಳೆ.

"ದೇವರ ದೇವ ನೀನೆಂದುಕೊಂಡೆ
ಬಾಣನ ಬಾಗಿಲ ಕಾಯ್ವರೇನಯ್ಯಾ?

ನಿತ್ಯತೃಪ್ತ ನೀನೆಂದೆನಿಸಿಕೊಂಡೆ
ಕರುಣಾಕರ ನೀನೆಂದೆನಿಸಿಕೊಂಡೆ
ಸಿರಿಯಾಳನ ಮಗನ ಬೇಡುವರೇನಯ್ಯಾ
ನಿಮ್ಮ ಮಹಿಮೆಯ ನೀವೇ ಬಲ್ಲಿರಿ
ಎನ್ನನುದ್ಧರಿಸಯ್ಯಾ ಶಂಭುಜಕ್ಕೇಶ್ವರಾ"[೩೧]

ಭಕ್ತನನ್ನು ನಾನಾ ವಿಧಗಳಲ್ಲಿ ಪೀಡಿಸಿ, ಕಾಡಿಸಿ, ಬೆದರಿಸಿ, ಪರೀಕ್ಷಿಸಿ, ಕೊನೆಗೆ ಬೆದರದೆ, ಬೆಚ್ಚದೆ, ಬಗ್ಗದೆ, ಕುಗ್ಗದೆ ಇದ್ದಲ್ಲಿ ಪರಮಾತ್ಮ ತನ್ನನ್ನೇ ಭಕ್ತರಿಗೆ ಅರ್ಪಿಸಿಕೊಳ್ಳುತ್ತಾನೆ ಎಂದಿರುವಳು.

ಹೀಗೆ ವಚನಕಾರ್ತಿಯರು ಐಹಿಕ ಬದುಕಿನಲ್ಲಿ ನಿಜ ಭಕ್ತಿಯ ನಿಲುವನ್ನರಿತು ತಾವು ನಿಷ್ಠಾವಂತ ಭಕ್ತರೆನಿಸಿಕೊಂಡಿದ್ದಾರೆ. ಭಕ್ತಿ ಸಂಬಂಧವಾದ ಅರ್ಥ, ಸ್ವರೂಪ, ಲಕ್ಷಣ, ಅರ್ಹತೆಗಳ ಬಗ್ಗೆ ಸೈದ್ಧಾಂತಿಕ ನೆಲೆಯಲ್ಲಿ ಚಿಂತಿಸಿದ್ದಾರೆ. ವಚನಕಾರ್ತಿಯರು ಭಕ್ತಿಯ ಮೂಲಸ್ವರೂಪದ ಬಗ್ಗೆ, ಭಕ್ತನ ಲಕ್ಷಣಗಳ ಬಗೆ ಎಳೆಎಳೆಯಾಗಿ ತಮ್ಮ ಚಿಂತನೆಗಳನ್ನು ಹರಿಯಬಿಟ್ಟಿರುವುದು ಗಮನಾರ್ಹವಾದುದಾಗಿದೆ.

ಒಟ್ಟಾರೆ ವಚನಕಾರ್ತಿಯರ ವಚನಗಳಲ್ಲಿ ಅಂತರಂಗ ಶುದ್ಧಿ, ಬಹಿರಂಗಶುದ್ಧಿ, ನಡೆ ಮತ್ತು ನುಡಿಗಳ ಸಮನ್ವಯಕ್ಕೆ ಮಹತ್ವ ನೀಡಿರುವುದನ್ನು ಗಮನಿಸಬಹುದು. ಪರಿಶುದ್ಧ ಮನಸ್ಸಿನಿಂದ ಕೈಕೊಳ್ಳುವುದೇ ನಿಜವಾದ ಪೂಜೆ ಎಂದು ಸಾರಿದ ಅವರು ವೈಚಾರಿಕ ಮಾರ್ಗವನ್ನು ಬಿಂಬಿಸಲು ಅರಿವಿನ ಕುರುಹನ್ನು ಆಧರಿಸಿದರು. ವಚನಕಾರ್ತಿಯರು ಕೇವಲ ಉಪದೇಶಿಗಳಾಗಿರದೆ ವೈಚಾರಿಕತೆಯನ್ನು ತಮ್ಮ ಜೀವನ ವಿಧಾನವನ್ನಾಗಿಸಿಕೊಂಡು ಆದರ್ಶಯುತ ಜೀವನ ನಡೆಸಿ, ಆದರ್ಶ ಸಮಾಜದ ನಿರ್ಮಾಣಕ್ಕೆ ನೆರವಾಗಿದ್ದಾರೆ.

*****

ಕೊನೆಟಿಪ್ಪಣಿಗಳು

೧. ವಚನಕಾರ್ತಿಯರು : ಮಹಿಳಾ ಸಂವೇದನೆ: ಡಾ. ಶಶಿಕಲಾ ಶಿವಶಂಕರ್, ಪು. ೪೨೪

೨. ಅದೇ, ಪು. ೯೪

೩. ಶಿವಶರಣೆಯರ ವಚನ ಸಂಪುಟ – ೫, ಡಾ. ವೀರಣ್ಣರಾಜೂರ (ಸಂ), ವ–೩೭೨, ಪು. ೧೧೦

೪. ಅದೇ., ವ–೬೪, ಪು. ೨೫.

೫. ಅದೇ., ವ–೭೪೭, ಪು. ೨೩೨.

೬. ಅದೇ., ವ–೭೩೩, ಪು. ೨೨೫.

೭. ಅದೇ., ವ–೧೦೯೩, ಪು. ೩೨೪.

೮. ಅದೇ., ವ–೫೨೬, ಪು. ೧೬೩.

೯. ಅದೇ., ವ–೫೯೧, ಪು. ೧೮೬.

೧೦. ಅದೇ., ವ–೬೮೯, ಪು. ೨೧೪

೧೧. ಅದೇ., ವ–೬೭೩, ಪು. ೨೦೯.

೧೨. ಅದೇ., ವ–೬೨೮, ಪು. ೧೯೭.

೧೩. ಅದೇ., ವ–೫೯೬, ಪು. ೧೮೮

೧೪. ಅದೇ., ವ–೫೫೭, ಪು. ೧೭೪

೧೫. ಅದೇ., ವ–೧೧೪೬, ಪು. ೩೪೦

೧೬. ಅದೇ., ವ–೭೩೨, ಪು. ೨೨೭

೧೭. ಅದೇ., ವ–೭೭೬, ಪು. ೨೪೬

೧೮. ಅದೇ., ವ–೪೨೯, ಪು. ೧೨೯

೧೯. ಅದೇ., ವ–೭೭೬, ಪು. ೨೪೬

೨೦. ಅದೇ., ವ–೧೨೨೮, ಪು. ೩೭೦

೨೧. ಅದೇ., ವ–೭೪೨, ಪು. ೨೨೯

೨೨. ಅದೇ., ವ–೭೩೦, ಪು. ೨೨೫.

೨೩. ಅದೇ., ವ–೭೧೬, ಪು. ೨೨೧.

೨೪. ಅದೇ., ವ–೧೨೨೦, ಪು. ೩೬೮.

೨೫. ಅದೇ., ವ–೩೪೬, ಪು. ೧೧೭.

೨೬. ಅದೇ., ವ–೫೩೦, ಪು. ೧೬೫

೨೭. ಅದೇ., ವ-೬೧೫, ಪು. ೧೯೪

೨೮. ಅದೇ., ವ-೫೩೦, ಪು. ೧೬೫

೨೯. ಅದೇ., ವ-೬೧೫, ಪು. ೧೯೪

೩೦. ಅದೇ., ವ-೭೧೬, ಪು. ೨೨೧

೩೧. ಅದೇ., ವ-೧೨೨೦, ಪು. ೩೬೮

*****

ಅಧ್ಯಾಯ – ೬

ಸಮಾರೋಪ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನ ಒಂದು ಉಜ್ವಲವಾದ ಘಟ್ಟ. ಈ ಕಾಲದಲ್ಲಿ ಕಾಣಿಸಿಕೊಳ್ಳುವ ವಚನಕಾರರು ಅರ್ಥಪೂರ್ಣವೂ, ಅದ್ವಿತೀಯವೂ ಆದ ವೈಚಾರಿಕ ಪರಂಪರೆಯನ್ನು ಸೃಷ್ಟಿಸಿದವರು. ವಚನಪೂರ್ವ ಯುಗದಲ್ಲಿ ಇದ್ದಂತಹ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಕುರಿತು ಕೂಲಂಕಷವಾಗಿ ಪರಿಶೀಲಿಸುವುದಾದರೆ ಸಮಾಜದಲ್ಲಿ ನೆಲೆಯೂರಿರುವ ವರ್ಣವ್ಯವಸ್ಥೆ, ಮೌಢ್ಯ, ಶೋಷಣೆ ಎಲ್ಲದರ ವಿರುದ್ಧ ಧ್ವನಿ ಎತ್ತುವ ಸಲುವಾಗಿ ನಡೆದಂತಹ ಚಳುವಳಿಯೇ ವಚನ ಚಳವಳಿ. ಈ ಕ್ರಾಂತಿಯಿಂದಾಗಿ ಸಾಮಾಜಿಕ ಸುಧಾರಣೆ, ಧಾರ್ಮಿಕ ಸುಧಾರಣೆ ಕಂಡುಬಂದಿತು. ಮಹಿಳೆಯರಿಗೆ ಉನ್ನತವಾದ ಸ್ಥಾನಮಾನಗಳು ಹಾಗೂ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದ್ದು ಈ ವಚನಯುಗದಲ್ಲಿ.

ಶರಣೆಯರ ವಚನಗಳು ವಿಚಾರಶೀಲತೆ, ಸತ್ಯನಿಷ್ಠುರತೆ, ತಾತ್ತ್ವಿಕತೆ, ಭಕ್ತಿ ಕಾಯಕ ನಿಷ್ಠೆ ಸಂಸಾರ ಇವುಗಳನ್ನು ಒಳಗೊಂಡಿದೆ. ಶರಣೆಯರ ವಚನಗಳು ವೈಚಾರಿಕತೆಯಿಂದ ಕೂಡಿದ್ದು, ಸಾಮಾಜಿಕ ಪ್ರಜ್ಞೆ, ಲಿಂಗಾಧಾರಿತ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ ಮುಂತಾದ ವಿಚಾರಗಳು ಇವುಗಳನ್ನು ಕುರಿತು ಅಧ್ಯಯನ ನಡೆಸುವ ಪುಟ್ಟ ಪ್ರಯತ್ನ ಈ ನಿಬಂಧದ ರಚನೆಯ ಮೂಲಕ ಸಾಧ್ಯವಾಗಿದೆ.

ಪ್ರಸ್ತುತ ನಿಬಂಧದ ಶೀರ್ಷಿಕೆ "ಶರಣೆಯರ ವಚನಗಳಲ್ಲಿ ವೈಚಾರಿಕತೆ" ಎಂಬುದಾಗಿದೆ. ಇದು ಸಮಾರೋಪವನ್ನು ಒಳಗೊಂಡಂತೆ ಮುಖ್ಯವಾಗಿ ಆರು ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡಿದೆ.

ಹನ್ನೆರಡನೆಯ ಶತಮಾನದಲ್ಲಿ ಮತಧರ್ಮಗಳ ಹೆಸರಿನಲ್ಲಿ ಪೂಜೆ ಸಂಪ್ರದಾಯಗಳ ಸೋಗಿನಲ್ಲಿ, ಅನೈತಿಕ ಆಚಾರಗಳು ವ್ಯಾಪಕವಾಗಿದ್ದವು. ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆ, ಜಾತಿಭೇದ, ವೈಯಕ್ತಿಕ ಉಪಾಸನೆ, ಸಂಪ್ರದಾಯ ಅಂಧಶ್ರದ್ಧೆಗಳ ಪ್ರಭಾವದಿಂದ ಬೆಳೆದುಬಂದ ಶೋಷಣೆಯ ಸಾಧನವಾಗಿದ್ದಿತು. ಇಂತಹ ಸಂದರ್ಭದಲ್ಲಿ ಬಸವಾದಿ ಶರಣರು ಅಂಧಶ್ರದ್ಧೆಗಳ ಕತ್ತಲಲ್ಲಿ ಬದುಕುತ್ತಿದ್ದ ಅಂದಿನ ಜನತೆಯನ್ನು ವೈಚಾರಿಕತೆಯ ಬೆಳಕಿನತ್ತ ಕರೆದು ತಂದರು. ಪುರೋಹಿತಶಾಹಿ ವಿರುದ್ಧ, ಅದು ಸೃಷ್ಟಿಸಿದ ಅಸಮಾನತೆಯ ವಿರುದ್ಧ ಆ ಯುಗದ ವಚನಕಾರರು ಸಂಘರ್ಷಕ್ಕೆ ಇಳಿದರು.

ಜಾತಿವ್ಯವಸ್ಥೆಯಲ್ಲಿನ ಮೇಲು-ಕೀಳು, ಬಡವ-ಶ್ರೀಮಂತ, ಸ್ತ್ರೀ-ಪುರುಷ ಎಂಬ ತರತಮವನ್ನು ಕಿತ್ತೊಗೆದು ಎಲ್ಲರೂ ಮುಖ್ಯವಾಹಿನಿಗೆ ಬಂದು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಪಡೆದದ್ದು ಈ ಸಂದರ್ಭದ ಬಹುಮುಖ್ಯ ಅಂಶವಾಗಿದೆ. ಹನ್ನೆರಡನೆಯ ಶತಮಾನದ ಶರಣ ಚಳವಳಿ ಬೌದ್ಧಿಕವಾಗಿ ವಚನ ರಚನೆಗೆ ಸೀಮಿತವಾಗಿದೆ, ವಚನಗಳ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿತು. ಈ ವಚನಯುಗದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಕಾಣಿಸಿಕೊಂಡವು. ಎಲ್ಲಾ ವರ್ಗದ ಮಹಿಳೆಯರು ಚಳವಳಿಯಲ್ಲಿ ಪಾಲ್ಗೊಂಡು ತಮ್ಮ ವಚನಗಳ ಮೂಲಕ ಸ್ವತಂತ್ರವಾಗಿ ಅಭಿವ್ಯಕ್ತಿಸಿದರು.

'ಆತ್ಮಕ್ಕೆ ಗಂಡು-ಹೆಣ್ಣು ಭೇದವಿಲ್ಲ' ಎಂಬ ಉದಾರ ಚಿಂತನೆಗಳು ಬಂದ ಕಾಲಘಟ್ಟ ಅದಾಗಿತ್ತು. ಸಾಹಿತ್ಯ ರಚನೆ ಕೇವಲ ಪುರುಷರ ಹಕ್ಕಲ್ಲ ಎಂಬುದನ್ನು ಸಾರಿದ ಶರಣೆಯರು ಪುರುಷ ಸಮಾನ ಅಭಿವ್ಯಕ್ತಿ ಸ್ವಾತಂತ್ರ್ಯ ಗಳಿಸಿದರು. ಈ ಯುಗದಲ್ಲಿ ಆದರ್ಶ ದಾಂಪತ್ಯ ನಡೆಸಿದ ಹಲವರು ಶರಣ-ಶರಣೆಯರನ್ನು ಕಾಣಬಹುದು. ವಚನ ಚಳವಳಿಯಿಂದಾಗಿ ಹನ್ನೆರಡನೇ ಶತಮಾನದ ಎಲ್ಲಾ ಕ್ಷೇತ್ರಗಳಲ್ಲಿಯೂ ಆಮೂಲಾಗ್ರ ಬದಲಾವಣೆ ಕಂಡುಬಂದಿತು. ವಚನಕಾರರು ಸಾರಾಸಗಟಾಗಿ ಲಿಂಗಭೇದವನ್ನು ನಿರಾಕರಿಸಿದ್ದರ ಫಲವಾಗಿ ವಚನಕ್ರಾಂತಿಯಲ್ಲಿ ಸ್ತ್ರೀಯರು ಬಹುಸಂಖ್ಯೆಯಲ್ಲಿ ಭಾಗವಹಿಸಲು ಸಾಧ್ಯವಾಯಿತು.

ಅನುಭವ ಮಂಟಪದಲ್ಲಿ ಗಂಡಿಗೆ ಸರಿಸಮಾನವಾದ ಆಧ್ಯಾತ್ಮಿಕ ಸ್ವಾತಂತ್ರ್ಯ ಸ್ತ್ರೀಯರಿಗೂ ದೊರೆಯಿತು. ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ತಮ್ಮ ಮನದ ನೋವು-ನಲಿವು ಮುಂತಾದ ಅನುಭವಗಳನ್ನು ತಮ್ಮ ವಚನಗಳಲ್ಲಿ ಮುಕ್ತವಾಗಿ ಅಭಿವ್ಯಕ್ತಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆಯನ್ನು ಖಂಡಿಸಿದರು. ಈ ಚಳವಳಿಯು ಸಂಪ್ರದಾಯವಾದಿ ಮಡಿಮೈಲಿಗೆ ನಿಯಮಗಳನ್ನು, ಜಾತಿಪದ್ಧತಿಯನ್ನು ವೈಚಾರಿಕ ದೃಷ್ಟಿಯಿಂದ ತೀವ್ರವಾಗಿ ಖಂಡಿಸಿತು. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂದು ಸಾರಿದ ವಚನಕಾರರು ಬಹುದೇವೋಪಾಸನೆಯನ್ನು ಖಂಡಿಸಿ, ಏಕದೇವೋಪಾಸನೆಯನ್ನು ಜಾರಿಗೆ ತಂದರು. "ದೇಹವೇ ದೇಗುಲ" ಎಂಬ ವಚನಕಾರರ ಕಲ್ಪನೆಯೇ ಅದ್ಭುತವಾದದ್ದು.

ಅಂಧ ಆಚರಣೆಗಳನ್ನು ನಂಬಿ ಕತ್ತಲಲ್ಲಿ ಬದುಕುತ್ತಿದ್ದ ಜನತೆಯನ್ನು ಬೆಳಕಿನತ್ತ ಕೊಂಡೊಯ್ದು ಆ ಮೂಲಕ ಉನ್ನತಮಟಟದ ಬದುಕನ್ನು ಜನರಿಗೆ ದೊರಕಿಸಿಕೊಟ್ಟದ್ದು ವಚನಕ್ರಾಂತಿಯ ಸಫಲತೆಯ ಗುರುತಾಗಿದೆ. ವಚನ ಚಳವಳಿಯ ಮೂಲ ತತ್ತ್ವವೇ ಕಾಯಕ. ವಚನಕಾರರು ಕಾಯಕದ ಮೂಲಕ ಸಾಮಾಜಿಕ ಏಕತೆಯನ್ನು ಹುಟ್ಟುಹಾಕಿದರು.

ವಚನಾಂದೋಲನದಿಂದಾಗಿ ಸಮಾಜದಲ್ಲಿ ಉಂಟಾದ ಹಲವಾರು ಬೆಳವಣಿಗೆಗಳನ್ನು ಕುರಿತು ಈ ನಿಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಭಾರತೀಯ ಪರಂಪರೆಯಲ್ಲಿ ಅತ್ಯುಚ್ಚ ಆದರ್ಶೀಕರಣ, ತುಚ್ಛ ಅವಹೇಳನ ಎರಡಕ್ಕೂ ಗುರಿಯಾಗಿದ್ದ ಮಹಿಳೆ ಸಂಪೂರ್ಣ ಸ್ವಾತಂತ್ರ್ಯವನ್ನು ತನ್ನದಾಗಿಸಿಕೊಳ್ಳಲು ವಚನಯುಗ-ದವರೆಗೂ ಕಾಯಬೇಕಾಯಿತು. ಮೌನದ ಗೋಳಿನ ನಡುವೆ, ಕತ್ತುಹಿಸುಕುವಂತಿದ್ದ ವಾತಾವರಣದಲ್ಲಿ ಜೀವಚ್ಛವದಂತೆ ಬದುಕಿದ್ದ ಹೆಣ್ಣಿಗೆ ಎಲ್ಲಾ ಅರ್ಥಗಳಲ್ಲಿಯೂ ಜೀವವನ್ನು ತುಂಬಿಕೊಟ್ಟವರು ಹನ್ನೆರಡನೆಯ ಶತಮಾನದ ಶಿವಶರಣರು. ಇದರಿಂದಾಗಿ ಜಗತ್ತಿನ ಮಹಿಳಾ ವಿಮೋಚನೆಯ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನಕ್ಕೆ ಮತ್ತು ಕನ್ನಡ ನಾಡಿನ ಶರಣರಿಗೆ ವಿಶಿಷ್ಟವಾದ ಸ್ಥಾನವಿದೆ.

ಶತಶತಮಾನಗಳಿಂದಲೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಕವಾಗಿ ಮೂಲೆಗುಂಪಾಗಿದ್ದ ಹೆಣ್ಣು ಮಾನಸಿಕವಾಗಿ ಮೇಲೆದ್ದು ಶರಣಕ್ರಾಂತಿಯಲ್ಲಿ ಪಾಲ್ಗೊಂಡು ತನ್ನ ಶಕ್ತಿ ಮತ್ತು ಅಸ್ತಿತ್ವಗಳನ್ನು ಗುರುತಿಸಿಕೊಂಡಳು. ವೈಚಾರಿಕವಾಗಿ ಚಿಂತನೆ ನಡೆಸಿ, ಶರಣರಿಗೆ ಸ್ಫೂರ್ತಿಯಾಗಿ ಜವಾಬ್ದಾರಿ ನಿರ್ವಹಿಸುತ್ತಾ ಬಂದಿದ್ದು ಆ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಆರಂಭದಲ್ಲಿ ಶರಣೆಯೆನಿಸಿಕೊಂಡವಳು ಅನಂತರ ಕವಯತ್ರಿಯಾಗಿ ರೂಪುಗೊಂಡಳು. ಸ್ತ್ರೀ ಪುರುಷನಿಗಿಂತ ಕೀಳಲ್ಲ, ಶ್ರದ್ಧೆ, ಆಸಕ್ತಿಗಳಿಂದ ಕೂಡಿದ ಆಚರಣೆಗಳಿಂದ ಅವಳಿಗೂ ಪುರುಷನನ್ನು ಮೀರಿ ಬೆಳೆಯಬಲ್ಲ ಶಕ್ತಿ ಇದೆ ಎಂಬುದನ್ನು ಶರಣೆಯರು ಜಗತ್ತಿಗೆ ತೋರಿಸಿಕೊಟ್ಟರು.

ವಚನ ಸಾಹಿತ್ಯ ಸಂದರ್ಭಧಲ್ಲಿ ಸುಮಾರು ಮೂವತ್ಮೂರಕ್ಕೂ ಹೆಚ್ಚು ವಚನಕಾರ್ತಿಯರು ತಮ್ಮ ವಿಚಾರಗಳನ್ನು ಅನುಭವಗಳನ್ನು ಲೋಕದ ಮುಂದೆ ತೆರೆದಿಟ್ಟರು. ಕೆಲವು ಶರಣೆಯರು ತಮ್ಮ ಅನುಭಾವ ಸಾಧನೆಗಳ ಮೂಲಕ ವ್ಯಕ್ತಿ ವೈಶಿಷ್ಟ್ಯತೆಗಳನ್ನು ಮೆರೆದು ಸಾಹಿತ್ಯ ಜಗತ್ತಿಗೆ ವಿಶೇಷ ಕೊಡುಗೆ ನೀಡಿದ್ದಾರೆ.

ಸ್ತ್ರೀಪುರುಷರ ನಡುವಣ ವ್ಯತ್ಯಾಸಗಳ ಬಗ್ಗೆ ಶರಣರ ಪ್ರಜ್ಞಾಪೂರ್ವಕ ನಿಲುವು ಅತ್ಯಂತ ಸ್ವಾಗತಾರ್ಹವಾದುದು, ಮನುಷ್ಯ ಮನುಷ್ಯರ ನಡುವಣ ಸಂಬಂಧವನ್ನು ಸುಧಾರಿಸಿದ ಶರಣರು ಮೊದಲು ಒತ್ತುಕೊಟ್ಟಿದ್ದು ಸ್ತ್ರೀಪುರುಷ ಸಮಾನತೆಗೆ; 'ಹೆಣ್ಣು, ಹೆಣ್ಣಲ್ಲ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಗೌರವಿಸಿದರು.

ಸ್ತ್ರೀಪುರುಷ ಭೇದಭಾವ ಆತ್ಮೋದ್ಧಾರಕ್ಕೆ ಅನಗತ್ಯ ಹಾಗೂ ವಿರುದ್ಧವಾದುದಾಗಿದೆ. ಹೆಣ್ಣಿಗೂ ಗಂಡಿನಂತೆ ತನ್ನ ವ್ಯಕ್ತಿತ್ವವನ್ನು ಉನ್ನತೀಕರಿಸಿಕೊಳ್ಳುವ, ಸಾಧಿಸುವ ಅಧಿಕಾರವಿದೆ. ಜೊತೆಗೆ ಆಕೆ ತನ್ನದೇ ಆದ ರೀತಿಯಲ್ಲಿ ಸಮಾಜವನ್ನು ಕಾಣಬಲ್ಲಳು. ಹಾಗಾಗಿ ಸ್ವಾವಲಂಬನೆ ಮತ್ತು ಸ್ವಾಭಿಮಾನಗಳಿಂದ ಕೂಡಿದ ಸ್ವತಂತ್ರ ಚಿಂತನೆಗಳನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ. ಹಾಗೆಯೇ ಹೆಣ್ಣನ್ನು ಸ್ವತಂತ್ರ ವ್ಯಕ್ತಿಯನ್ನಾಗಿ ಮನ್ನಿಸಿದ ಶರಣರ ವೈಚಾರಿಕತೆಯನ್ನು ಗಮನಿಸಬಹುದಾಗಿದೆ.

ಮಹಿಳೆಯರಿಗೆ ಸಾಮಾಜಿಕ ಕ್ಷೇತ್ರದಲ್ಲಿ ಮಹತ್ವ ನೀಡುವುದರ ಮೂಲಕ ಮಹಿಳೆಯರ ಸಾಮಾಜಿಕ ಅನುಭವಗಳನ್ನು ಅವರ ಬದುಕಿನ ಸೂಕ್ಷ್ಮತೆಗಳನ್ನು ಸಿದ್ಧಾಂತದ ಹಾಗೆ ಸ್ವೀಕರಿಸಿದ್ದು, ಚರಿತ್ರೆಯಲ್ಲಿ ವಚನಕಾರರ ಸಂದರ್ಭದಲ್ಲಿ ಮಾತ್ರ ಎಂಬುದು ಗಮನಾರ್ಹವಾದುದು. ಮಹಿಳೆಯರು ತಮಗೆ ದೊರೆತ ಸ್ವಾತಂತ್ರ್ಯ, ಅವಕಾಶಗಳನ್ನು ಉಪಯೋಗಿಸಿಕೊಂಡು ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಪ್ರಸ್ತುತ ನಿಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಶರಣೆಯರು ಜನಪರ ಕಾಳಜಿಯುಳ್ಳವರಾಗಿದ್ದು, ಅದಕ್ಕೆ ಸೃಜನಶೀಲವಾಗಿ ಸ್ಪಂದಿಸಿದರು. ಶರಣೆಯರು ತಾವು ನಂಬಿದ ಮೌಲ್ಯಗಳಿಗೆ ಸ್ಪಷ್ಟ ನಿಲುವು ಹೊಂದಿದ್ದಾರೆ. ಹಾಗೆಯೇ ದಿಟ್ಟತನದ ಪ್ರತಿಕ್ರಿಯೆ ತೋರಿದ್ದಾರೆ. ಸತ್ಯಕ್ಕ, ಗೊಗ್ಗವ್ವೆ, ಉರಿಲಿಂಗ ಪೆದ್ದಿಗಳ ಕಾಳವ್ವೆ, ಹಡದಪ್ಪಣ್ಣಗಳ ಪುಣ್ಯಸ್ತ್ರೀ ಲಿಮಗಮ್ಮ ಸೂಳೆ ಸಂಕವ್ವೆ ಮೊದಲಾದ ಅನೇಕ ಶರಣೆಯರ ವಚನಗಳಲ್ಲಿ ದಟ್ಟವಾದ ಸಾಮಾಜಿಕ ಪ್ರಜ್ಞೆ ಜನಪದ ಆಲೋಚನೆಗಳು ಕಂಡುಬರುತ್ತವೆ. ಸತ್ಯಶುದ್ಧ ಕಾಯಕವನ್ನು ಗೌರವಿಸಿ, ಮೋಸ, ವಂಚನೆಗಳನ್ನು ವಿರೋಧಿಸುವ ಸ್ವತಂತ್ರ ಆಲೋಚನೆಗಳು ವ್ಯಕ್ತವಾಗಿವೆ. ಡಾಂಭಿಕರನ್ನು ವ್ರತಭ್ರಷ್ಟರನ್ನು ಖಂಡಿಸುತ್ತಾರೆ.

ಶರಣೆಯರು ತಮ್ಮ ವಿಚಾರಶಕ್ತಿಯನ್ನು ಅರಿವಿನ ಒರೆಗಲ್ಲಿಗೆ ಹಚ್ಚಿದರು. ಹೆಣ್ಣಿನ ಶೋಷಣೆಗೆ, ದುರಂತಕ್ಕೆ ಮೂಲ ಬೀಜಗಳಾದ ಸಾಮಾಜಿಕ ರೀತಿನೀತಿಗಳನ್ನು ಕುರಿತು ಚಿಂತಿಸಿದರು. ತಮಗೆ ತಿಳಿದಿದ್ದನ್ನು ಅಕ್ಷರ ರೂಪಕ್ಕಿಳಿಸಿದರು. ವಚನಕಾರ್ತಿಯರ ಸಂವೇದನೆಯ ಸ್ವರೂಪ ವೈವಿಧ್ಯಮಯ ನೆಲೆಯಲ್ಲಿ ತನ್ನ ವಿಶಿಷ್ಟತೆಯನ್ನು ದಾಖಲು–ಗೊಳಿಸಿತು. ಜ್ಞಾನ, ಕಾವ್ಯಗುಣ, ಅನುಭಾವಗಳಲ್ಲಿ ಅಕ್ಕಮಹಾದೇವಿ ವಚನಕಾರರು–ಗಳಿಗಿಂತಲೂ ಕೈಮಿಗಿಲೆನಿಸಿಕೊಂಡಳು. ಅಕ್ಕ ಇಲ್ಲದ ಅನುಭವ ಮಂಟಪಕ್ಕೆ ಅಸ್ತಿತ್ವವೆ ಇಲ್ಲವೆನ್ನುವಂತಾಯಿತು. ಕೆಳವರ್ಗಗಳಿಂದ ಬಂದ ಸಾಮಾನ್ಯ ಸ್ತ್ರೀಯರು ಉತ್ತಮ

ವಿಚಾರವೇತ್ತರಾಗಿ, ಅನುಭಾವಿಗಳಾಗಿ, ರೂಪುಪಡೆದಿದ್ದು, ವೈಚಾರಿಕ ಚರ್ಚೆಗಳಲ್ಲಿ ಪಾಲುಗೊಂಡು ಸಾಹಿತ್ಯದಲ್ಲಿ ಸಂವೇದಿಸಿದ್ದು ಮಹತ್ವದ ಘಟನೆಯಾಗಿದೆ. ಶರಣೆಯರ ವಚನಗಳಲ್ಲಿ ಕಾಯಕ ನಿಷ್ಠೆ, ಭಕ್ತಿ, ಅರಿವು, ವೈಯಕ್ತಿಕ ವೇದನೆ, ತಾತ್ವಿಕತೆ ಇನ್ನು ಮುಂತಾದ ವಿಚಾರಗಳನ್ನು ಕುರಿತು ನಿಬಂಧದಲ್ಲಿ ಚರ್ಚಿಸಲಾಗಿದೆ.

ಶರಣೆಯರ ವಚನಗಳಲ್ಲಿ ವೈಚಾರಿಕತೆ ಸಾಮಾಜಿಕ ಅಂಶಗಳು, ಧಾರ್ಮಿಕ ಅಂಶಗಳು ಹಾಗೂ ಹಲವು ವೈಯಕ್ತಿಕ ವಿಚಾರಗಳ ನಿರ್ಭಯವಾಗಿ, ಮುಕ್ತವಾಗಿ ಅಭಿವ್ಯಕ್ತಗೊಂಡಿವೆ, ವಚನಕಾರ್ತಿಯರ ಡಾಂಭಿಕ ವಿರೋಧಿ ವಚನಗಳಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಗಳ ಖಂಡನೆಯಿದೆ. ತೋರಿಕೆಯ ಭಕ್ತರನ್ನು ವೇಷಧಾರಿಗಳನ್ನು ವ್ರತಹೀನರನ್ನು ಕುರಿತು ಕಟುವಾಗಿ ಟೀಕಿಸಿರುವುದನ್ನು ಕಾಣಬಹುದು. ಸಾಮಾಜಿಕ ಶುದ್ಧೀಕರಣ, ವೈಯಕ್ತಿಕ ಚಾರಿತ್ರ್ಯ ನಿರ್ಮಾಣ ಇವರ ವಚನಗಳಲ್ಲಿ ಗುರುತಿಸಬಹುದಾಗಿದೆ.

ವಚನಕಾರ್ತಿಯರು ಸತ್ಯಶುದ್ಧ ಕಾಯಕ ಜೀವಿಗಳು, ಸದಾಚಾರ, ಸದ್ವರ್ತನೆ, ಸದ್ವಿಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ ಶೀಲಸಂಪನ್ನೆಯರು, ಮಹಾನ್ ಸ್ವಾಭಿಮಾನಿಗಳು, ಇವರು ರಚಿಸಿದ ವಚನಗಳು ಸಂಖ್ಯೆ ಹಾಗು ಸತ್ವದ ದೃಷ್ಟಿಯಿಂದ ಗಮನಾರ್ಹವಾದುದಾಗಿವೆ. ಕದಿರ ರೆಮ್ಮವ್ವೆಯ “ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ” ಎಂಬ ಮಾತು, “ತನುಬತಯ್ತುಲೆಯಾದಡೇನು? ಮನ ಬತ್ತಲೆಯಾಗದನ್ನಕ್ಕ” ಎಂಬ ಗುಡ್ಡವ್ವೆಯರ ಜಾತೀಯತೆಯ ವಿರುದ್ಧದ ಧನಿ, “ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?” ಎಂದು ಪ್ರಶ್ನಿಸುವ ಲಕ್ಕಮ್ಮನ ಧೈರ್ಯ, ಅಕ್ಕಮಹಾದೇವಿಯ ಸತಿಪತಿ ಭಾವ, ಆತ್ಮಸಂಗಾತಿಯಾಗಿ ದೇವರನ್ನು ಕಾಣುವ ಅಕ್ಕನ ಪರಿ, “ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ”, “ಜಾತಿಗಳು ನೀವೇಕೆ ಕೀಳಾಗಿರೋ” ಎಂಬ ಕಾಳವ್ವೆಯ ರೋಷ, ಕೆಚ್ಚು, ಸತ್ಯಕ್ಕನ ವೈಚಾರಿಕತೆ, ಸ್ವಾಭಿಮಾನ ಹಾಗೂ ಲಿಂಗಭೇದರಹಿತವಾದ ಸ್ವತಂತ್ರ ಚಿಂತನೆಗಳು, ಸಾಮಾಜಿಕ ಪ್ರಜ್ಞೆ, ಧಾರ್ಮಿಕ ಪ್ರಜ್ಞೆ ಇನ್ನು ಮುಂತಾದವುಗಳನ್ನು ಶರಣೆಯರ ವಚನಗಳಲ್ಲಿ ಕಾಣಬಹುದಾಗಿದೆ. ಈ ನಿಬಂಧದಲ್ಲಿ ಕೆಲವು ಪ್ರಾತಿನಿಧಿಕ ವಚನಗಳ ಹಿನ್ನೆಲೆಯಲ್ಲಿ ವೈಚಾರಿಕತೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಶರಣ ಸಮೂಹದಲ್ಲಿ ವಚನಕಾರ್ತಿಯರು ತಮ್ಮದೇ ಆದ ಹೆಜ್ಜೆಗುರುತುಗಳನ್ನು ಅಚ್ಚೊತ್ತಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಸ್ತ್ರೀ ಎಲ್ಲಾ ಕ್ಷೇತ್ರದಲ್ಲೂ ಸಮಪಾಲು ಪಡೆಯಲು ಹೋರಾಟ ನಡೆಸಿ ಗೆದ್ದಳು. ಇಂದು ಸಹ ಹೆಣ್ಣು ಅಸಮಾನತೆಯ ವಿರುದ್ಧ ಹೋರಾಟ ನಡೆಸುತ್ತಲೇ ಇದ್ದಾಳೆ. ಶರಣೆಯರ ಹೋರಾಟ ಇಂದಿನ ಸಾಮಾಜಿಕ

ಅಸಮಾನತೆಯ, ಲಿಂಗಅಸಮಾನತೆಯ ವಿರುದ್ಧದ ಹೋರಾಟಗಾರರಿಗೆ ಸ್ಫೂರ್ತಿ ಎನ್ನಬಹುದು. ಹೆಣ್ಣು ಕೇವಲ ತಾಯಿ, ಅರ್ಧಾಂಗಿ, ಸೇವಕಿಯಲ್ಲ. ಅವಳಿಗೂ ಪುರುಷನಂತೆ ಸ್ವಂತಿಕೆ, ಸ್ವಾತಂತ್ರ್ಯ ಬೇಕು, ಸಮಾನತೆ ಬೇಕು. ಶರಣೆಯರು ಹೆಣ್ಣಿನ ಅಂತರಂಗ ಭಾವನೆಗಳಿಗೆ ವಚನರೂಪ ಕೊಟ್ಟರು. ಯಾರ ಭಯವಿಲ್ಲದೆ ತಾವು ಕಂಡಿದ್ದನ್ನು, ಖಂಡಿಸಬೇಕಾದದ್ದನ್ನು ನೇರವಾಗಿ ಹೇಳಿದರು. ಬಹುತೇಕ ಶರಣೆಯರು ಸಂಸಾರಿಗಳು, ಇವರು ದಾಂಪತ್ಯ ಧರ್ಮವನ್ನು ಒಪ್ಪಿಕೊಂಡು, ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಿದರು. ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಶರಣೆಯರು ರಚಿಸಿದ ವಚನಗಳು ಸಂಖ್ಯೆ ಹಾಗೂ ಸತ್ವದ ದೃಷ್ಟಿಯಿಂದ ಗಮನಾರ್ಹವಾದುದಾಗಿವೆ. ಸುಮಾರು ಮೂವತ್ಮರಕ್ಕೂ ಹೆಚ್ಚು ವಚನಕಾರ್ತಿಯರಲ್ಲಿ ಬಹುತೇಕ ಶರಣೆಯರು ಕೆಳಜಾತಿಗೆ ಸೇರಿದ್ದರು ಎಂಬುದೇ ಸಮಾನತೆಯ ಅಂದಿನ ಅವಕಾಶಗಳ ಬಗೆಗೆ ತಿಳಿಸುತ್ತದೆ. ಅಕ್ಕಮಹಾದೇವಿ ತನ್ನ ಬದುಕನ್ನು ತನಗೆ ಬೇಕಾದಂತೆ ಆರಿಸಿಕೊಳ್ಳುವ, ತನಗೆ ಸರಿಕಾಣದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದಳು.

ಶಿವಶರಣೆಯರು ತಮ್ಮ ವಚನಗಳಲ್ಲಿ ದೈವದ ಬಗೆಗೆ, ಕಾಯಕದ ಬಗೆಗೆ ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಚಿಂತನೆಗಳನ್ನು ಹೊಂದಿದ್ದರು. ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕವಾಗಿ ಚಿಂತಿಸುವ ಪ್ರೌಢತೆಯನ್ನು ಹೊಂದಿದ್ದರು ಹಾಗೂ ವೈಚಾರಿಕವಾಗಿ ಚಿಂತನೆ ನಡೆಸಿದರು. ಈ ನಿಟ್ಟಿನಲ್ಲಿ ಶರಣೆಯರ ಹೊಣೆಗಾರಿಕೆ, ಉನ್ನತ ಚಿಂತನೆಗಳನ್ನು ಅವರ ವಚನಗಳಿಂದ ಅರಿಯಬಹುದಾಗಿದೆ.

ಒಟ್ಟಾರೆಯಾಗಿ ಸಾಹಿತ್ಯದ ವಸ್ತು ವಿಷಯದ ದೃಷ್ಟಿಯಿಂದ, ಭಾಷೆಯ ಬಳಕೆಯ ದೃಷ್ಟಿಯಿಂದ, ಅಭಿವ್ಯಕ್ತಿಯ ದೃಷ್ಟಿಯಿಂದ, ವೈಚಾರಿಕತೆಯ ನೆಲೆಯಲ್ಲಿ ಶರಣೆಯರ ಸಾಧನೆಗಳು ಅತ್ಯಂತ ಮೌಲಿಕವಾದದ್ದು. ಶರಣೆಯರು ಅನುಭಾವಿಗಳಾಗಿ, ಪುರುಷರಿಗೆ ಸರಿಸಮಾನವಾಗಿ ಆಧ್ಯಾತ್ಮಿಕ ಸಂವಾದ, ವೈಚಾರಿಕ ಚರ್ಚೆಗಳಲ್ಲಿ ಪಾಲುಗೊಂಡು ಅಪೂರ್ವವಾದ ಸಾಹಿತ್ಯವನ್ನು ಸೃಷ್ಟಿಸಿದ ಶಿವಶರಣೆಯರು ಕರ್ನಾಟಕದ ಕನ್ನಡದ ಹೆಮ್ಮೆ ಎನಿಸಿದ್ದಾರೆ.

*****

ಗ್ರಂಥಋಣ

ಅನುಬಂಧ – ೧

೧. ಆಕರ ಗ್ರಂಥಸೂಚಿ

೧) ಡಾ. ವೀರಣ್ಣ ರಾಜೂರ(ಸಂ.); ಶಿವಶರಣೆಯರ ವಚನ ಸಂಪುಟ(೫).

೨. ಪರಾಮರ್ಶನ ಗ್ರಂಥಸೂಚಿ

೧) ಡಾ. ಪಿ.ವಿ.ನಾರಾಯಣ, ವಚನ ಸಾಹಿತ್ಯ

೨) ಡಾ. ಎ.ಗಾಯತ್ರಿ, ಕನ್ನಡದ ವಚನಕಾರ್ತಿಯರು

೩) ಡಾ. ಎಲ್.ಬಸವರಾಜು (ಸಂ.), ಅಕ್ಕನ ವಚನಗಳು

೪) ಜಗದಾಂಬ ಮಲ್ಲೇದೇವರು, ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ.

೫) ಡಾ. ಶಶಿಕಲಾ ಶಿವಶಂಕರ್, ವಚನಕಾರ್ತಿಯರು, ಮಹಿಳಾ ಸಂವೇದನೆ

೬) ಡಾ. ಹೆಚ್.ಆರ್.ಪ್ರಭಾ, ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಮಹಾದೇವಿಯಕ್ಕ

೭) ಡಾ. ಎಸ್.ಚಂದ್ರಕಿರಣ್ ಕುಳವಾಡಿ ಮತ್ತು ಡಾ. ಎ.ರಂಗಸ್ವಾಮಿ (ಪ್ರ.ಸಂ.), ವಚನಕಾರರ ಜೀವಪರ ಧೋರಣೆ

೮) ಎಲ್.ವಿ.ಶಾಂತಕುಮಾರಿ, ವಚನಸಾಹಿತ್ಯದಲ್ಲಿ ಅಪ್ರಚಲಿತ ವಚನಕಾರ್ತಿಯರು

೯) ಡಾ. ಶೈಲಜಾ ಉಡಚಣ, ವಚನಸಾಹಿತ್ಯ ಮತ್ತು ಮಹಿಳೆ.

೧೦) ಡಾ. ಸಿ.ಸೋಮಶೇಖರ, ವಚನಗಳಲ್ಲಿ ಸಾಮಾಜಿಕ ಚಿಂತನೆ.

೧೧) ಡಾ. ಬಸವರಾಜ ಸಬರದ, ವಚನ ಚಳವಳಿ

೧೨) ಡಾ. ಶೈಲಜಾ ಉಡಚಣ, ವಚನಕಾರರ ದೃಷ್ಟಿಯಲ್ಲಿ ಸ್ತ್ರೀ

೧೩) ಡಾ. ಬಸವರಾಜ ಸಬರದ, ವಚನ ಸಂಸ್ಕೃತಿ

೧೪) ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ

೧೫) ಓ.ಎಲ್.ನಾಗಭೂಷಣಸ್ವಾಮಿ(ಸಂ.), ಸಾವಿರ ವಚನಗಳು

೧೬) ರಹಮತ್ ತರೀಕೆರೆ(ಸಂ.), ಅಕ್ಕಮಹಾದೇವಿ ವಚನಗಳು : ಸಾಂಸ್ಕೃತಿಕ ಮುಖಾಮುಖಿ

೧೭) ಡಾ. ಬಸವರಾಜ ಸಬರದ, ವಚನಗಳಲ್ಲಿ ವ್ಯಕ್ತಿತ್ವ ವಿಕಾಸ

೧೮) ಎಚ್.ಎಂ.ಬೀಳಗಿ, ಶಿವಶರಣೆಯರು, ಜೀವನ ಮತ್ತು ಸಾಧನೆ

೧೯) ರಾಮಕೃಷ್ಣ.ಜಿ, ವೈಚಾರಿಕ ಜಾಗೃತಿ

೨೦) ಪಿ.ವಿ.ನಾರಾಯಣ, ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ

೨೧) ಡಾ. ಎಂ.ಚಿದಾನಂದಮೂರ್ತಿ, ವಚನ ಸಾಹಿತ್ಯ

೨೨) ಮರುಳಸಿದ್ದಯ್ಯ.ಎಚ್.ಎಂ, ಅರಿವು – ಆಚರಣೆ

೨೩) ಹಿರೇಮಠ.ಆರ್.ಸಿ(ಸಂ.), ಶಿವಶರಣೆಯರ ವಚನಗಳು

೨೪) ಚಂದ್ರಶೇಖರಯ್ಯ, ಬಸವಣ್ಣ

೨೫) ಡಾ. ಎಂ.ಎಂ.ಕಲಬುರ್ಗಿ, ಸಮಗ್ರ ವಚನ ಸಂಪುಟಗಳು

ಅನುಬಂಧ – ೨

ಶಿವಶರಣೆಯರ ಹೆಸರುಗಳ ಪಟ್ಟಿ

ಕನ್ನಡದ ಒಟ್ಟು ೩೩ ಶರಣೆಯರ ಹೆಸರುಗಳು, ವಚನಾಂಕಿತ ಹಾಗೂ ದೊರಕಿದ ವಚನಗಳ ಸಂಖ್ಯೆ – ಅವುಗಳು ಈ ರೀತಿಯಾಗಿದೆ.

ಕ್ರಮ ಸಂಖ್ಯೆ	ವಚನಕಾರ್ತಿಯರ ಹೆಸರು	ಅಂಕಿತ	ದೊರಕಿದ ವಚನಗಳ ಸಂಖ್ಯೆ
೧.	ಅಕ್ಕಮಹಾದೇವಿ	ಚೆನ್ನಮಲ್ಲಿಕಾರ್ಜುನ	೪೩೪
೨.	ಅಕ್ಕಮ್ಮ	ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗ	೧೫೪
೩..	ಅಮುಗೆ ರಾಯಮ್ಮ	ಅಮುಗೇಶ್ವರಲಿಂಗ	೧೧೬
೪.	ಆಯ್ದಕ್ಕಿ ಲಕ್ಕಮ್ಮ	ಮಾರಯ್ಯಪ್ರಿಯ, ಅಮರೇಶ್ವರ ಲಿಂಗ	೨೫
೫.	ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ	ಉರಿಲಿಂಗ ಪೆದ್ದಿಗಳರಸ	೧೨
೬.	ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ	ನಿಜಗುಣೇಶ್ವರಲಿಂಗ	೧
೭.	ಕದಿರ ಕಾಯಕದ ಕಾಳವ್ವೆ	ಗುಮ್ಮೇಶ್ವರ	೧
೮.	ಕದಿರ ರೆಮ್ಮವ್ವೆ	ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ	೪
೯.	ಕನ್ನಡಿ ಕಾಯಕದ ರೇವಮ್ಮ	ಸದ್ಗುರುಸಂಗ ನಿರಂಗಲಿಂಗ	೧
೧೦.	ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ	ನಿಜಶಾಂತೇಶ್ವರಾ	೧
೧೧.	ಕಾಲಕಣ್ಣಿಯ ಕಾಮಮ್ಮ	ನಿರ್ಭೀತ ನಿಜಲಿಂಗ	೧
೧೨.	ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ	ಅಗಜೇಶ್ವರ ಲಿಂಗ	೧
೧೩.	ಕೊಟ್ಟಣದ ಸೋಮಮ್ಮ	ನಿರ್ಲಜ್ಜೇಶ್ವರಾ	೧
೧೪.	ಗಂಗಾಂಬಿಕೆ	ಗಂಗಾಪ್ರಿಯ ಕೂಡಲಸಂಗ	೯
೧೫.	ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ	ಮಸಣಯ್ಯ ಪ್ರಿಯ ಗಜೇಶ್ವರ	೧೦

೧೬.	ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ	ಕುಂಭೇಶ್ವರಲಿಂಗ	೨
೧೭.	ಗೊಗ್ಗವ್ವೆ	ವಾಸ್ತಿನಾಥಾ	೬
೧೮.	ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ	ಗುರುಶಾಂತೇಶ್ವರ	೫
೧೯.	ದುಗ್ಗಳೆ	ದಾಸಯ್ಯಪ್ರಿಯ ರಾಮನಾಥ	೨
೨೦.	ನಾಗಲಾಂಬಿಕೆ	ಬಸವಣ್ಣಪ್ರಿಯ ಚೆನ್ನಸಂಗಯ್ಯ	೧೪
೨೧.	ನೀಲಮ್ಮ	ಸಂಗಯ್ಯ	೨೮೮
೨೨.	ಬತ್ತಲೇಶ್ವರ ಪುಣ್ಯಸ್ತ್ರೀ ಗುಡ್ಡವ್ವೆ	ನಿಂಬೇಶ್ವರಾ	೧
೨೩.	ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ	ಕರ್ಮಹರ ಕಾಳೇಶ್ವರಾ	೨
೨೪	ಬೊಂತಾದೇವಿ	ಬಿಡಾಡಿ	೫
೨೫.	ಮುಕ್ತಾಯಕ್ಕ	ಅಜಗಣ್ಣ	೩೭
೨೬.	ಮಾಳಿಗೆ ಮಹಾದೇವಿ	ಎನ್ನಯ್ಯಪ್ರಿಯ ನಿಃಕಳಂಕ	೭೦
೨೭.	ರಾಮಪದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ	ಅಮುಗೇಶ್ವರ ಲಿಂಗ	೧
೨೮.	ರೇವಣ್ಣಸಿದ್ದಯ್ಯ ಪುಣ್ಯಸ್ತ್ರೀ ರೇಕಮ್ಮ	ಶ್ರೀಗುರು ಸಿದ್ದೇಶ್ವರ	೧
೨೯.	ಸತ್ಯಕ್ಕ	ಶಂಭುಜಕ್ಕೇಶ್ವರ	೨೭
೩೦.	ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ	ಭೀಮೇಶ್ವರ	೧
೩೧.	ಸೂಳೆ ಸಂಕವ್ವೆ	ನಿರ್ಲಜ್ಜೇಶ್ವರಾ	೧
೩೨.	ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ	ಅಪ್ಪಣ್ಣಪ್ರಿಯ ಚೆನ್ನ ಬಸವಣ್ಣ	೧೧೪
೩೩.	ಹಾದರಕಾಯಕದ ಪುಣ್ಯಸ್ತ್ರೀ ಗಂಗಮ್ಮ	ಗಂಗೇಶ್ವರ	೧

ಅನುಬಂಧ -೩

ಛಾಯಾಚಿತ್ರಗಳು



ಶಿವಶರಣೆ ಸತ್ಯಕ್ಕ



ಅಜಗಣ್ಣನನ್ನು ಕಳೆದುಕೊಂಡ ಮುಕ್ತಾಯಕ್ಕಳಿಗೆ ಅಲ್ಲಮಪ್ರಭು ದೇವರಿಂದ ಸಾಂತ್ವನಾ










ಶಿವಶರಣೆ ಅಕ್ಕಮಹಾದೇವಿ



ಶಿವಯೋಗಿನಿ ನೀಲಾಂಬಿಕೆ



ಶಿವಶರಣೆ ಕದಿರ ರೆಮ್ಮವ್ವೆ


ಕತ್ತಿ ಹಿಡಿದು ಹೋರಾಡುತ್ತಿರುವ
ವೀರ ಮಾತೆ ಅಕ್ಕ ನಾಗಮ್ಮ.